ಇಕ್ಕೇರಿ ಕ್ರಾಂತಿ

ಉಳ್ಳೂರು ಸುಬ್ಬರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

BVP-1211- २७।१२।१७
११७८-(५).

ಇಕ್ಕೇರಿ ಕ್ರಾಂತಿ

ನಾಟಕ

ಲೇಖಕ :
ಉಳ್ಳೂರು ಸುಬ್ಬರಾವ್

ಪ್ರಕಾಶಕರು :
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

Ikkeri Kranthi
by: Ulluru Subba Rao
Published by : Kannada Sahitya Parishat
Pampa Mahakavi Road, Chamaraja Pet, Bangalore-560018
Pages : VIII + 40   Price : 20-00   2006

ಪ್ರಥಮ ಮುದ್ರಣ : ೨೦೦೬

ಪ್ರತಿಗಳು : ೧೦೦೦

ಬೆಲೆ : ಇಪ್ಪತ್ತು ರೂಪಾಯಿ

ಶಿವಮೊಗ್ಗದಲ್ಲಿ ನಡೆದ ಅಖಿಲಭಾರತ ೭೩ನೇ ಕನ್ನಡ ಸಾಹಿತ್ಯ ಸಮೇಳನದ ಪ್ರಟಕಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು:

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು:

ಶ್ರೀ ಜರಗನ ಹಳ್ಳಿ ಶಿವಶಂಕರ್

ಸದಸ್ಯರು:

ಶ್ರೀ ಪುಂಡಲೀಕ ಹಾಲಂಬಿ
ಡಾ. ಹೆಚ್. ಜಯಮ್ಮ ಕರಿಯಣ್ಣ
ಶ್ರೀ ವಿಶ್ವನಾಥ ವಂಶಾಕೃತಮಠ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ

ನಾಡೋಜ ಪ್ರೊ|| ಕೆ.ಎಸ್. ನಿಸಾರ್ ಅಹಮದ್

ಸಮ್ಮೇಳನಾಧ್ಯಕ್ಷರು:

೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಶ್ರೀ ಕುಸುಮ ಪ್ರಿಂಟರ್ಸ್, ಕಾಟನ್‌ಪೇಟೆ, ಬೆಂಗಳೂರು - ೫೩.

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೊಂದು ವರ್ಷಗಳಿಂದ ನಾಡು - ನುಡಿ- ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು . ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ - ಅಕ್ಷರ -ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟಣೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ - (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ , ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ , ಸಂಶೋಧನ, ಪತ್ರಿಕೋದ್ಯಮ .... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲುಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಡಿಸೆಂಬರ್ ೨೦೦೬ರಲ್ಲಿ ಶಿವಮೊಗ್ಗ ದಲ್ಲಿ ನಡೆಯಲಿರುವ ೭೩ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ೭೩ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಕುಸುಮ ಪ್ರಿಂಟರ್ಸ್, ಬೆಂಗಳೂರು, ಮುಖಪುಟ ವಿನ್ಯಾಸ ಕಲಾವಿದ ಶಿವಮೊಗ್ಗದ ಎಸ್.ಟಿ. ಬಾಲರಾಜ್‌ರವರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ್(ಚಂಪಾ)
ಅಧ್ಯಕ್ಷರು

ಜಿಲ್ಲಾ ಅಧ್ಯಕ್ಷರ ಮಾತು

ಕನ್ನಡ ಸಾರಸ್ವತ ಲೋಕಕ್ಕೆ ಶಿವಮೊಗ್ಗೆಯ ಕೊಡುಗೆ ಅಪಾರವಾದುದ್ದು. ಕರ್ನಾಟಕ ಏಕೀಕರಣ, ಕಾಗೋಡು ಚಳುವಳಿ , ಗೋಕಾಕ್‌ಚಳುವಳಿ, ರೈತ ಹಾಗೂ ದಲಿತ ಚಳುವಳಿಗಳನ್ನು ಪ್ರಖರವಾಗಿಟ್ಟುಕೊಂಡು ನಾಡಿನ ಸಾಂಸ್ಕೃತಿಕ ಆವರಣಕ್ಕೆ ಜೀವಂತಿಕೆಯನ್ನು ನೀಡುವಲ್ಲಿ ಶಿವಮೊಗ್ಗೆಯ ಪಾಲು ಬಹು ದೊಡ್ಡದು.

೨೧ ನೆಯ ಶತಮಾನದ ಈ ತಂತ್ರಜ್ಞಾನ ಮತ್ತು ಮಾಹಿತಿಯ ಯುಗವು ಆರ್ಥಿಕ ಸಂಕಷ್ಟ ಹಾಗೂ ಜಾಗತೀಕರಣದ ಬೆನ್ನು ಹತ್ತಿ ಓಡುತ್ತಿದ್ದರೂ, ಮಾನವನ ಸಾಂಸ್ಕೃತಿಕ ಮನಸ್ಸು ತನ್ನೊಳಗಿನ ಸಾಹಿತ್ಯ , ಕಲೆ , ಸಂಸ್ಕೃತಿ, ಹಾಡು ಹಸೆಗೆ ಹಾತೊರೆಯುತ್ತದೆ. ಮನುಷ್ಯನ ಇಂತಹ ಮೂಲತನಕ್ಕೆ ಅಕ್ಷರ ಲೋಕದ ಅರಿವು ಮತ್ತಷ್ಟು ಮೆರಗು ನೀಡುವಲ್ಲಿ ಸಹಕಾರಿಯಾಗಿದೆ. ಮತ್ತು ಈ ಕಾಲದ ಜರೂರನ್ನು ತನ್ನೊಳಗಿನ ಎಲ್ಲಾ ಬಗೆಯ ಜವಾಬ್ದಾರಿಯೊಂದಿಗೆ ಮುಂದುವರೆಸುತ್ತಿದೆ. ಈ ಹಿನ್ನಲೆಯಲ್ಲಿ ಸಾಹಿತ್ಯ ಕಾರ್ಯವು ಮೇಲುಗೈ ಸಾಧಿಸುತ್ತಿರುವುದು ನಮ್ಮ ಕನ್ನಡದ ಹೆಮ್ಮೆಯಾಗಿದೆ.

ಏಳು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡ ಹೆಮ್ಮೆಯ ಕರ್ನಾಟಕವು ಈವರೆಗೆ ೭೨ ಸಾಹಿತ್ಯ ಸಮ್ಮೇಳನಗಳನ್ನು ನಾಡಿನ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ನಡೆಸಿದೆ. ಹಾಗೂ ಕನ್ನಡ ಸಾಹಿತ್ಯದ ಪರಂಪರೆಯನ್ನು ಜತನವಾಗಿ ಕಾಪಾಡಿಕೊಳ್ಳುತ್ತಲೇ ಇದೆ. ಆದರೂ ಈ ಸಂದರ್ಭದಲ್ಲಿ ಕನ್ನಡ, ಕನ್ನಡತನ ಕರ್ನಾಟಕದ ಸ್ಥಿತಿ ಹಿಂದೆಂದಿಗಿಂತಲೂ ಅಪಾಯಕಾರಿಯಾಗಿ ಗೋಚರವಾಗುತ್ತಿದೆ. ಗಡಿಭಾಗದಲ್ಲಿ ಮತ್ತು ಆಡಳಿತ ವ್ಯವಸ್ಥೆಯಲ್ಲಿನ ಅನೇಕ ಅಡಚಣೆಯ ನಡುವೆಯೂ ಕಾವೇರಿಯಿಂದ ಮಾ.......... ಎಂಬ ಕವಿರಾಜ ಮಾರ್ಗಕಾರನ ಅದಮ್ಯ ಕನ್ನಡ ಪ್ರೇಮವನ್ನು ಕರ್ನಾಟಕದ ಮೊದಲ ತಲೆಮಾರಿನ ರಾಜರು ಆಡಳಿತಾಗಾರರು, ಬರಹಗಾರರು, ಶ್ರೀ ಸಾಮಾನ್ಯರು ಅಸಾಮಾನ್ಯವಾಗಿ ಮೆರೆದಿದ್ದಾರೆ.

ಶಿವಮೊಗ್ಗೆಯಲ್ಲಿ ಐತಿಹಾಸಿಕ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹುವಿಜೃಂಭಣೆಯಿಂದ ಆಚರಿಸಲು ಎಲ್ಲಾ ಕನ್ನಡ ಮನಸ್ಸುಗಳು ಸಜ್ಜುಗೊಂಡಿವೆ . ಇಂತಹ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹೆಮ್ಮೆಯಿಂದ ನಾಡಿನ ಎಲ್ಲಾ ತಲೆಮಾರಿನ ಭೂ ಭಾಗದ ವಯೋಮಾನದ ವರ್ಗದ ಬರಹಗಾರರಿಂದ ಕೃತಿಗಳ ಹಸ್ತಪ್ರತಿಗಳನ್ನು ಸ್ವೀಕರಿಸಿ ಪ್ರಕಟಿಸುತ್ತಿದ್ದೇವೆ. ಶಿವಮೊಗ್ಗ ಜಿಲ್ಲೆಯ ಅನೇಕ ಬರಹಗಾರರ ಕೃತಿಗಳ ಹಸ್ತ ಪ್ರತಿಗಳನ್ನು ಆಹ್ವಾನಿಸಿ ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿ ಹೆಮ್ಮೆಯಿಂದ ಪ್ರಕಟಿಸುತ್ತಿದ್ದೇವೆ. ಈ ಸುವರ್ಣ ಕರ್ನಾಟಕದ ಶುಭ ಸಂದರ್ಭದಲ್ಲಿ ಶಿವಮೊಗ್ಗೆಯಲ್ಲಿ ನಡೆಯುತ್ತಿರುವ ಈ ಸಮ್ಮೇಳನಕ್ಕೆ ಶ್ರೀ ಉಳ್ಳೂರು ಸುಬ್ಬರಾವ್ ''ಇಕ್ಕೇರಿ ಕ್ರಾಂತಿ'' ಕೃತಿಯನ್ನು ಬಹು ಹೆಮ್ಮೆಯಿಂದ ಪ್ರಕಟಿಸುತ್ತಿದ್ದೇವೆ.

ಡಿ. ಮಂಜುನಾಥ್
ಅಧ್ಯಕ್ಷರು
ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

ಅಖಿಲ ಭಾರತ ೭೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ , ಶಿವಮೊಗ್ಗ

ಸ್ವಾಗತ ಸಮಿತಿ

ಶ್ರೀ ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷರು

ಶ್ರೀ ಕೆ.ಎಸ್. ಈಶ್ವರಪ್ಪ , ಹಿರಿಯ ಉಪಾಧ್ಯಕ್ಷರು

ಶ್ರೀ ಡಿ.ಹೆಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರು

ಶ್ರೀ ಎಸ್. ಬಂಗಾರಪ್ಪನವರು, ಲೋಕಸಭಾ ಸದಸ್ಯರು

ಪ್ರೊ|| ಬಿ.ಎಸ್. ಶೇರಿಗಾರ್, ಕುಲಪತಿಗಳು, ಕುವೆಂಪು ವಿ.ವಿ.

ಶ್ರೀ ಟಿ.ಕೆ. ಅನಿಲ್ ಕುಮಾರ್ , ಕೋಶಾಧ್ಯಕ್ಷರು, ಜಿಲ್ಲಾಧಿಕಾರಿಗಳು

ಶ್ರೀ ಅರುಣ್ ಚಕ್ರವರ್ತಿ ಜೇಜಿ., ಜಿಲ್ಲಾ ರಕ್ಷಣಾಧಿಕಾರಿಗಳು

ಡಾ|| ಬೋರೇಗೌಡರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು

ಶ್ರೀ ಟಿ. ಮಹಾಬಲೇಶ್ವರ ಭಟ್ಟರು, ಹಿರಿಯ ಸಾಹಿತಿಗಳು

ಶ್ರೀ ಡಿ. ಮಂಜುನಾಥ್, ಅಧ್ಯಕ್ಷರು, ಕ.ಸಾ.ಪ., ಪ್ರಧಾನ ಕಾರ್ಯದರ್ಶಿ, ಶಿವಮೊಗ್ಗ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು

ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು

ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು

ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು

ಶ್ರೀ ಶ್ರ. ದೇ. ಪಾರ್ಶ್ವನಾಥ, ಬೆಂಗಳೂರು,-೫೦

ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ) ಬೆಂಗಳೂರು ಗ್ರಾಮಾಂತರ

ಶ್ರೀ ಎನ್. ಎಸ್. ರಾಮಪ್ರಸಾದ್, ಕೋಲಾರ

ಶ್ರೀ ಆರ್. ಎಸ್. ಸದಾನಂದ, ತುಮಕೂರು

ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ

ಶ್ರೀ ಎಸ್. ಎಚ್. ಹೂಗಾರ, ದಾವಣಗೆರೆ

ಶ್ರೀ ಡಿ. ಮಂಜುನಾಥ, ಶಿವಮೊಗ್ಗ

ಶ್ರೀ ಮಾನಸ, ಮೈಸೂರು

ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು

ಶ್ರೀ ಹೆಚ್.ವಿ. ಜಯರಾಂ, ಮಂಡ್ಯ

ಶ್ರೀ ಟಿ.ಪಿ. ರಮೇಶ್, ಕೊಡಗು

ಶ್ರೀ ಎಚ್. ಬಿ. ರಮೇಶ್, ಹಾಸನ

ಶ್ರೀ ಎಚ್. ಪಿ. ಶ್ರೀವತ್ಸ ಯಲಸೆ, ಚಿಕ್ಕಮಗಳೂರು

ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ

ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ

ಶ್ರೀ ಬಿ.ಎಂ. ಪಾಟೀಲ, ಬಿಜಾಪುರ

ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ

ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ

ಶ್ರೀ ಆ.ಸಿ. ಹಿರೇಮಠ, ಹಾವೇರಿ

ಪ್ರೊ. ಕೆ.ಬಿ. ತಳಗೇರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಡಾ. ಜಗನ್ನಾಥ ಹೆಬ್ಬಾಳೆ, ಬೀದರ

ಶ್ರೀ ಕ.ಮ.ಪುರದ, ರಾಯಚೂರು

ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ

ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ

Sri. H.B.L. Rao, Navi Mumbai

Sri. I.V. Bhatta, Kasaragod

Sri. C. Ramaswamy, Chennai

Sri. H. Ramachandrappa, Ananthpura

ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ

ಡಾ. ಕಮಾಲಾ ಹಂಪನಾ, ಬೆಂಗಳೂರು

ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀಮತಿ ಬಿ.ಟಿ. ಲಲಿತಾ ನಾಯ್ಕ

ಶ್ರೀ ಕೆ. ಪ್ರಭಾಕರ ರೆಡ್ಡಿ

ಡಾ. ಎಲ್. ಹನುಮಂತಯ್ಯ, ಬೆಂಗಳೂರು

ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ (ಹಂಪಿ ವಿ.ವಿ. ಪ್ರತಿನಿಧಿ)

ಡಾ. ಸಿದ್ದಲಿಂಗಯ್ಯ, ಬೆಂಗಳೂರು (ಬೆಂಗಳೂರು ವಿ.ವಿ. ಪ್ರತಿನಿಧಿ)

ಮುನ್ನುಡಿ

ಸಾಹಿತ್ಯಕ್ಷೇತ್ರದ ನಾನಾ ಪ್ರಕಾರಗಳಲ್ಲಿ ನಾಟಕ ಪ್ರಕಾರವೂ ಒಂದು ಇದನ್ನು ಸಮಾವೇಶದ ಕಲೆ, ಸಂಯುಕ್ತಕಲೆ ಎಂದೂ ಹೇಳುತ್ತಾರೆ. ಇದರಲ್ಲಿ ನೃತ್ಯ, ನಟನೆ, ಸಂಗೀತ, ಬಣ್ಣ, ವಸ್ತ್ರಾಲಂಕಾರ, ಬೆಳಕು ಸಂಯೋಜನೆಯ ಜೊತೆಗೆ ರಂಗವಿನ್ಯಾಸ ಕೂಡಾ ಒಳಗೊಂಡಿರುತ್ತದೆ.

ನಾಟಕ ತಿಂದರೆ ಅದೊಂದು ಪ್ರದರ್ಶನಕಲೆ, ಅದರಲ್ಲಿ ನಟ ಹಾಗೂ ಪ್ರೇಕ್ಷಕ ಇಬ್ಬರೂ ಇರಬೇಕು, ಇವರಿಬ್ಬರನ್ನು ಸ್ಪಂದಿಸುವುದು ಆ ನಾಟಕದ ವಸ್ತು ಮತ್ತು ಪ್ರದರ್ಶನದ ಕಲೆ. ನಾಟಕ ಕರ್ತೃ ತನ್ನ ಮರಸ್ಸಿನಲ್ಲಿ ಮೂಡಿದ ವಿಚಾರ, ಕಥೆ ಅಥವಾ ಸನ್ನಿವೇಶವನ್ನು ಈ ರಂಗ ಮಾಧ್ಯದಮ ಮೂಲಕ ಪ್ರೇಕ್ಷಕರಿಗೆ ತಲುಪಿಸುತ್ತಾನೆ,

ಭಾರತೀಯ ರಂಗಭೂಮಿಗೆ ಬೃಹತ್ ಇತಿಹಾಸವಿದೆ, ಇಪ್ಪತ್ತನೇ ಶತಮಾನವನ್ನು ನಾಟಕಗಳ ಒಂದು ಪ್ರಾಯೋಗಿಕಯುಗ ಎಂದು ಹೇಳಗುತ್ತದೆ, ಹಿಂದಿನಿಂದಲೂ ಈ ಕ್ಷೇತ್ರದಲ್ಲಿ ಅನೇಕ ಹೊಸ ಹೊಸ ಪ್ರಯೋಗಗಳು, ತಂತ್ರಗಳು, ವಿಧಾನಗಳು ನಡೆಯುತ್ತಲೇ ಬಂದಿದೆ. ಹೊಸ ಹೊಸ ಕಥೆಗಳ ಪ್ರದರ್ಶನ, ಅದರಲ್ಲಿನ ನಾವೀನ್ಯತೆ, ಪ್ರೇಕ್ಷಕರನ್ನು ಸೆರೆಹಿಡಿಯುವಂತಹ ತಂತ್ರಗಾರಿಕೆ, ಐತಿಹಾಸಿಕ, ಪೌರಾಣಿಕ, ಚಾರಿತ್ರಿಕ, ನಾಟಕಗಳಿಂದ ಮುಂದುವರಿದ ರಂಗಭೂಮಿ, ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಂತಹ ಚಿತ್ರಗಳನ್ನು ನೀಡುತ್ತಾ ಬಂದಿದೆ, ಈ ಎಲ್ಲಾ ರೀತಿಯ ನಾವೀನ್ಯತೆ ಹೊಸ ಹೊಸ ಪ್ರಯೋಗಗಳ ಬೆಳವಣಿಗೆಗಳನ್ನು ಗ್ರಹಿಸುವಂತಹ ಸಂವೇದನೆಯನ್ನು ಪ್ರೇಕ್ಷಕರು ಪಡೆಯುತ್ತಾ ಬಂದಿದ್ದಾರೆ, ರಂಗಭೂಮಿಗೆ ಒಂದು ಸಾಮಾಜಿಕ ಮಾನ್ಯತೆ ವೈಚಾರಿಕ ವಿವೇಚನೆ ನಡೆಸುವ ರೀತಿ ನೀತಿಗಳನ್ನು ನಿರ್ಮಿಸಿ ಅದನ್ನು ಪ್ರತಿನಿಧಿಸುವಂತಹ ಪ್ರಯೋಗಗಳು ಕಂಡು ಬಂದವು. ಅನೇಕ ಏಳು ಬೀಳುಗಳ ಮಧ್ಯೆಯೂ ಭಾರತಿಯ ರಂಗಭೂಮಿಯು ಜಗ್ಗದೆ ಕುಗ್ಗದೆ ತನ್ನ ಬಾಹುಗಳನ್ನು ವಿಸ್ತರಿಸಿಕೊಂಡೇ ಬೆಳೆಯುತ್ತಿದೆ, ಇದು ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿ ಜನತೆಯ ಆಸಕ್ತಿಗಳಿಗೆ ಸ್ಪಂದಿಸಿ ಅವರಲ್ಲಿ ನೈತಿಕ ಪ್ರಜ್ಞೆಯನ್ನು ಜಾಗೃತಿಗೊಳಿಸುವಂತಹ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಲೇ ಬಂದಿದೆ.

ಶ್ರೀ ಉಳ್ಳೂರು ಸುಬ್ಬರಾವ್ ಇವರು ನನಗೆ ದೀರ್ಘಕಾಲ ದಿಂದ ಪರಿಚಯ ಉಳ್ಳವರು. ತಮ್ಮ ಜೀವನದ ಬಹುಪಾಲು ಸಮಯವನ್ನು, ಸಾಹಿತ್ಯ, ನಾಕಟ, ಪತ್ರಿಕೋದ್ಯಮ ದಲ್ಲಿ ಕಳೆದು ಮಾಸಿದ ಮನಸ್ಸಿ ನಿಂದ ಕೃಷಿ ಜೀವನವನ್ನ ನಡೆಸುತ್ತಾ ಬಂದಿದ್ದರೂ ಇವರ ಪ್ರವೃತ್ತಿ, ನಾಕಟದ ಕಡೆ ವಿಶೇಷ ಗಮನವನ್ನು ಹರಿಸುತ್ತಾ ಬಂದಿದೆ. 'ಇಕ್ಕೇರಿ ಯ ಕ್ರಾಂತಿ' ಎಂಬ ಈ ಐತಿಹಾಸಿಕ ನಾಕಟವನ್ನು ಓದುತ್ತಾ ಹೋದಂತೆ.

ಸ್ವಾಗತ ಸಮಿತಿಯು ನೇಮಿಸಿದ್ದ ಪುಸ್ತಕ ಆಯ್ಕೆ ಸಮಿತಿ ಸದಸ್ಯರು :

ಪ್ರೊ|| ಎಂ.ಬಿ. ನಟರಾಜ್
ಪ್ರೊ|| ಡಿ. ರಘುನಾಥರಾವ್
ಪ್ರೊ|| ನಾಗಭೂಷಣ್
ಶ್ರೀ ಕೂಡಲಿ ಜಗನ್ನಾಥ ಶಾಸ್ತ್ರಿ
ಶ್ರೀ ಹೊನ್ನಾಳಿ ಚಂದ್ರಶೇಖರ್
ಶ್ರೀ ಆರ್.ಎಸ್. ಹಾಲಸ್ವಾಮಿ
ಶ್ರೀ ವೈ.ರಾ. ಜಗದೀಶ್
ಶ್ರೀ ಡಿ.ಎಸ್. ಶ್ರೀನಾಥ
ಪ್ರೊ|| ಎಂ. ಚಂದ್ರಶೇಖರಯ್ಯ

ರಂಗಭೂಮಿಯಮೇಲೆ ಅಭಿನಯಿಸಿ ನಾವು ನೋಡುವ ದೃಷ್ಯಗಳ ಮುಂದೆ ಹಾಯುತ್ತದೆ. ಇಂದಿನ ಸಾಮಾಜಿಕ ನಾಟಕದ ಉತ್ಸವದಲ್ಲಿ ಐತಿಹಾಸಿಕ, ಪೌರಾಣಿಕ, ನಾಟಕಗಳು ಹಿಂದೆ ಸರಿಯುತ್ತಿದೆ, ಇತಿಹಾಸದ ಪ್ರಜ್ಞೆ ಕಡಿಮೆ ಯಾಗುತ್ತಿರುವ ಇಂದಿನ ದಿನಗಳಲ್ಲಿ ಐತಿಹಾಸಿಕ ಅರಿವನ್ನು ಮೂಡಿಸುವ 'ಇಕ್ಕೇರಿ ಯ ಕ್ರಾಂತಿ' ಒಂದು ಒಳ್ಳೇಯ ಕೃತಿ. ಸುಂದರ ವಾದ ಭಾಷೆ. ಪದ್ಯಗಳ ಜೋಡಣೆ, ರಂಗಭೂಮಿಯ ಮೇಲೆ ಅಭಿನಯಿಸಲು ಬರುವ ಪಾತ್ರದಾರಿಗಳು, ಇವು ಸಾಂಸ್ಕೃತಿಕ ವಾಗಿ ತುಂಬ ಮಹತ್ವವನ್ನು ಪಡೆದುಕೊಳ್ಳುತ್ತದೆ. 'ಇಕ್ಕೇರಿ ಯ ಕ್ರಾಂತಿ' ಇಡೀ ಮೈಸೂರು ಸಂಸ್ಥಾನದ ಇತಿಹಾಸವನ್ನ ಹಿಂದಿನರಾಜ ಮಹಾರಾಜರ ಸಾಹಸ ಜೀವನವನ್ನ ತಿಳ ಹೇಳುವ ನಾಟಕ ಇದು. ಜೌದ್ಧಿಕತೆ, ಚಾತುರ್ಯ, ಇವೆಲ್ಲವೂ ಈ ನಾಟಕದ ಹೆಣಿಕೆಯಲ್ಲಿ ಕಾಣಲು ಸಾಧ್ಯ.

ಶ್ರೀ ಉಳ್ಳೂರು ಸುಬ್ಬರಾವ್, ನಾಟಕಕಾರರಾಗಿ ಮಾತ್ರ ರೂಪ ಗೊಂಡವರಲ್ಲ ರಂಗಭೂಮಿಯ ಮೇಲೆ, ಐತಿಹಾಸಿಕ, ಪೌರಾಣಿಕ, ನಾಟಕಗಳಲ್ಲಿ ಪಾತ್ರದಾರಿಗಳಾಗಿ ಪ್ರೇಕ್ಷಕರ ಮೆಚ್ಚಿಗೆಯನ್ನ ಪಡೆದವರು. ಒಂದು ನಾಟಕ ಪಾತ್ರದಾರಿ, ರಂಗ ಭೂಮಿಯ ಮೇಲೆ ಹೇಗೆ ಯಶಸ್ವಿಯಾಗಲು ಸಾಧ್ಯ ಎಂಬ ಅರಿವಿನಿಂದ, ತಮ್ಮ ಈ ನಾಟಕದಲ್ಲಿ ಪಾತ್ರಗಳನ್ನ ಸೃಷ್ಠಿಸಿ ಅದು ಯಶಸ್ವಿಯಾಗುವಂತೆ ನೋಡಿಕೊಂಡಿದ್ದಾರೆ, ಇವರು ಬರೆದ ಅನೇಕ ನಾಟಕಗಳು ಈಗ ಅಚ್ಚಾಗಬೇಕಾಗಿದೆ. ಆ ಮೂಲಕ ಓದುಗರ ಕೈ ಸೇರುವಂತಾಗಬೇಕು. ರಂಗಭೂಮಿಯ ಮೇಲೆ ಪ್ರದರ್ಶಿಸುವಂತಾಗಬೇಕು. 'ಇಕ್ಕೇರಿಯ ಕ್ರಾಂತಿ ' ಹವ್ಯಾಸಿಕಲಾ ತಂಡದವರು ಮತ್ತು ವೃತ್ತಿ ಕಲಾ ತಂಡದವರು ಇಬ್ಬರೂ ಕೂಡ ಅಭಿನಯಿಸಲು ಸೂಕ್ತವಾದ ನಾಟಕ, ಶ್ರೀ ಸುಬ್ಬರಾವ್ ಇವರಿಗೆ ಶುಭ ಕೋರತ್ತೇನೆ.

ಟಿ. ಮಹಾಬಲೇಶ್ವರ ಭಟ್ಟ

ಲೇಖಕರ ನುಡಿ :

ಈಗ ಪ್ರಕಟ ವಾಗಿರುವ ''ಇಕ್ಕೇರಿ ಕ್ರಾಂತಿ'' ನನ್ನ ಎರಡನೆ ಯ ನಾಟಕ ''ಸಾಮ್ರಾಟ್ ಅಶೋಕ 2004 ರಲ್ಲಿ ಪ್ರಕಟಗವಂಡಿದೆ. ಎರಡೂ ಐತಿಹಾಸಿಕ ನಾಟಕಗಳು, ಹಾಗೂ ವೃತ್ತಿ ರಂಗ ಭೂಮಿಯವರು ಆಡುವ ಮಾದರಿಯವು.

ಕೆಳದಿ, ಇಕ್ಕೇರಿ, ಬಿದನೂರು ಈ ಮೂರು ಹೆಸರಿನಿಂದ ಗುರುತಿಸಿ ಕೊಂಡ ರಾಜ್ಯ ಇದು ಕೆಳದಿಯಲ್ಲಿ ಪ್ರಾರಂಭವಾಗಿ, ಮಧ್ಯಂತರ ಇಕ್ಕೇರಿಯನ್ನು ರಾಜಧಾನಿಯನ್ನಾಗಿಸಿ ಕವಂಡು ನಂತರ ಬಿದನೂರನ್ನು ರಾಜಧಾನಿಯನ್ನಾಗಿ ಹೊಂದಿದರಾಜ್ಯ. ನಾನು ಇಕ್ಕೇರಿಯ ಹೆಸರನ್ನು ಹೆಚ್ಚಾಗಿ ಬಳಸಿದುದು ನಾನು ಹುಟ್ಟಿಬೆಳೆದ ಊರಿನ ಸಮೀಪದಲ್ಲಿ ಇದು ಇದ್ದುದರ ಪ್ರಭಾವವಿರಬಹುದು. ನಾನು ಮೊಟ್ಟಮೊದಲು ಶಾಲಾ ಪತ್ರಿಕೆಗೆ ಬರೆದ ಲೇಖನ ''ಇಕ್ಕೇರಿಯ ಇತಿಹಾಸ'' ಎಂಬುದು.

ಈ ರಾಜ್ಯವನ್ನಾಳಿದವರಲ್ಲಿ ಹಲವರು ಬಲ್ಲಾಳುಗಳು ಶೂರರು ವಿಜಯನಗರ ಸಾಮ್ರಾಜ್ಯದ ದೊರೆ ಕೃಷ್ಣದೇವರಾಯ ನಂತೆ ಇಕ್ಕೇರಿರಾಜ್ಯವನ್ನಾಳಿದ ಶಿಸ್ತಿನ ಶಿವಪ್ಪನಾಯಕನೂ ಹೆಸರುವಾಸಿ, ಇವನ ಮನಸೋಮ ಶೇಖರ ಕೂಡ ಧೀರ ಆದರೂ ಪರಿಸ್ಥಿತಿಯ ಕೈಗೊಂಬೆಯಾಗಿ, ರೋಗ ಪೀಡಿತನಾಗಿ ಗಂಡು ಸಂತಾನವಿಲ್ಲದೆ ವೃತಪಟ್ಟಾಗ್ಗಿ, ಅವನ ಮಡದಿ ಚನ್ನಮ್ಮ ರಾಜ ಸೂತ್ರಹಿಡಿಯ ಬೇಕಾಯಿತು. ಅವಳು ಧೀರ್ರಳಾಗಿದ್ದರೂ, ರಾಜಕೀಯ ಸಂಚಿಗೆ ಬಲಿಯಾಗಿ ಸ್ಥಾನ ಬ್ರಷ್ಟಳಾಗಿ, ಮತ್ತೆ ರಾಜಗದುಗೆ ಯೇರಿ ಉತ್ತರದ ಔರಂಗ ಜೇಬನನ್ನು ಸೋಲಿಸಿದ ವೀರರಾಣಿ, ಈ ಇತಿಹಾಸಕ್ಕೆ ಹೊಂದಿ ದಂತಿರುವುದೆ ಈ ನಾಟಕದ ಮತ್ತು ಇದನ್ನೂ ಸಾಹಿತ್ಯಾಭಿಮಾನಿಗಳು ಆದರದಿಂದ ಸ್ವೀಕರಿಸುವರೆಂದು ಆಶಿಸುತ್ತೇನೆ.

ಈ ನಾಟಕದ ಪ್ರಕಟಣೆಯ ಬಗ್ಗೆ ಪ್ರಯತ್ನ ನಡೆಸಿರುವಾಗ, ಶಿವಮೊಗ್ಗದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಬಗೆಗೆ ಪುಸ್ತಕ ಪ್ರಕಟಿಸುವ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ ನೋಡ್ಡಿ ನಾಟಕದ ಪ್ರತಿ ಯೊಂದನ್ನು ಸಮ್ಮೇಳನ ಸಮಿತಿಯವರಿಗೆ ಸಲ್ಲಿಸಿದೆ. ಆಯ್ಕೆ ಸಮಿತಿಯವರು ಇದನ್ನ ಪ್ರಕಟಣೆಗಾಗಿ ಆಯ್ಕೆಮಾಡಿದಾಗ ನನಗೆ ಸಂತೋಷವಾಯಿತು. ಕಾರಣ, ನನ್ನಂತ ಪ್ರಸಿದ್ಧನಲ್ಲದವನ ಕೃತಿ ಆಯ್ಕೆ ಯಾದುದಕ್ಕಾಗಿ ತ್ಯಸಮ್ಮೇಳನದ ಅಂಗವಾಗಿ ಪ್ರಕಟಿಸುತ್ತಿರುವ ಕರ್ನಾಟಕ ರಾಜ್ಯ ಕನ್ನಡ ಸಾಹಿತ್ಯ ಪರಿ ಮತ್ತು ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ವರ್ಗದವರಿಗೆ ನನ್ನ ಕೃತಜ್ಞತೆಗಳು. ಹಾಗೆ ಪುಸ್ತಕ ಆಯ್ಕೆ ಸಮಿತಿಯವರಿಗೂ ಸಹ.

ಈ ಕೃತಿಗೆ ಸುಂದರವಾದ ಮುನ್ನುಡಿಯನ್ನು ಬರೆದುಕೊಟ್ಟು ಹಿರಿಯ ಸಾಹಿತಿಗಳಾದ ಶ್ರೀ ಯುತ ಟಿ. ಮಹಾಬಲೇಶ್ವರ ಭಟ್ಟರಿಗೆ ಕೃತಜ್ಞತೆಸಲ್ಲಿಸುತ್ತೇನೆ.

ಇದರ ಡಿ.ಟಿ.ಪಿ. ಪ್ರತಿಯನ್ನು ಸುಂದರವಾಗಿ ಸಿದ್ಧಪಡಿಸಿಕೊಟ್ಟ ಡಿಜಿನೆಟ್ ಕಂಪ್ಯೂಟರ್ ಸಲ್ಯೂಶನ್‌ನ ಜಿ/ಬಿ.ಆರ್.ರಾಜೇಶ್ವರಿ, ಹಾಗೂ ಡಿ.ಟಿ.ಪಿ. ಪ್ರತಿತಯಾರಿಕೆಗೆ ಸಹಾಯನೀಡಿದ ಶ್ರೀ ಸಿ.ಗೋಪಾಲ ಕೃಷ್ಣರಾವ್ ಇವರಿಗೂ ಕೃತಜ್ಞತೆಗಳು.

ಉಳ್ಳೂರು ಸುಬ್ಬರಾವ್
ಉಳ್ಳೂರು, ಸಾಗರ ತಾಲ್ಲೂಕು.
ದಿನಾಂಕ 11-11-2006

ನಾಟಕದಲ್ಲಿ ಬರುವ ಪಾತ್ರಗಳು

ರಾಣಿ ಚನ್ನಮ್ಮಾಜಿ.
ಮಲ್ಲಿ
ಪುಟ್ಟತಾಯಿ
ಚೆನ್ನಿ.
ದೊರೆ ಸೋಮಶೇಖರ ನಾಯಕ
ಪ್ರಧಾನಿ ಆವಿನಹಳ್ಳಿ ನರಸಪ್ಪಯ್ಯ.
ಸುಬ್ಬನೀಸ ಕೃಷ್ಣಯ್ಯ.
ಕಾಸರಗೋಡು ತಿಮ್ಮಣ್ಣ
ಕಂದಾಚಾರದ ಲಕ್ಷ್ಮಯ್ಯ.
ಹಳೇಪೈಕದ ವೀರಭದ್ರಯ್ಯ.
ಬರುವೆ ಮಾಹುತ
ದಳವಾಯಿ ಸೋಮಣ್ಣ
ಮುಸಾಫಿರ್ ಖಾನ್
ಅಜಮತಾರ.
ರಾಜಾರಾಮ ರಾಯ
ಇಬ್ಬರು ಹಾಡುಗಾರರು
ಇಬ್ಬರು ಪೌರರು.
ಬಾಲಕ ಕುತ್ಸಿತ ಶಿವಪ್ಪ ನಾಯಕ
ಬಸವಲಿಂಗನಾಯಕ
ಬಸವಪ್ಪ ನಾಯಕ
ನಾಲ್ವರು ಮರಾಠಾಸರದಾರರು
ಸೇವಕರು
ಸೈನಿಕರು.
ಬೇಹಿನವರು.
ಕೊಲೆಗಾರ.

ಪ್ರವೇಶ 1

(ರಸ್ತೆಯ ದೃಶ್ಯ. ಈರ್ವರು ಹಾಡುಗಾರರು ಹಾಡುತ್ತಾ ಬರುವರು.
ಒಬ್ಬನ ಕೈಲಿ ಏಕನಾದ. ಇನ್ನೊಬ್ಬರ ಕೈಲಿ ತಾಳ ಇದೆ.)

ಶರಣೆಂಬೆ ಗಣಪತಿಗೆ
ಶರಣೆಂಬೆ ಗಜಮುಖಗೆ
ಶರಣೆಂಬೆ ಡೊಳ್ಳು ಹೊಟ್ಟೆ ವಕ್ರದಂತಗೆ ॥
ಈರೇಳು ಲೋಕವ ಕ್ಷಣದೊಳು ಸುತ್ತಿದೆ
ಮೂಷಿಕವಾಹನ ಕರಿವದನ ॥
ಶರಣಮ್ಮ ಸರಸೊತಿ, ಶರಣಮ್ಮ ಮಹಾಲಕುಮಿ
ಶರಣಮ್ಮ ಪಾರ್ವತಿ ಮಹಾದೇವಿ ॥

ಇಬ್ಬರೂ : ನಾವು ಆಡುವ ನಾಟಕ ನೋಡಲು ಬಂದು ಕುಳಿತಿರು ಮಹಾನುಭಾವರಿಗೆಲ್ಲ ಶರಣೋ ಶರಣು (ಹಣೆಗೆ ಕೈಯಾನಿಸಿ ಪ್ರೇಕ್ಷರ ಕಡೆ ನೋಡಿ) ಹೌದಪ್ಪ ಕುಂತವರ್ರಿಗೆ ಶರಣು ಮಾಡಿದಿವಿ. ನಿಂತವರಿಗೆ....ಅವರು ಬ್ಯಾಸರಪಟ್ಟುಕೊಳ್ಳೊದಿಲ್ಲೇನು ಮತ್ತೇ ?

ಇನ್ನೋಬ್ಬ : ಕುಂತವರೊಂದಿಗೆ ನಿಂತವರಿಗೂ ಶರಣು, ಮತ್ತೆ ಯಾರಾದರೂ ಮಲಗಿದವರಿದಾರ ನೋಡು.

ಒಬ್ಬ : ಏ .... ಒಳ್ಳೆ ತಮಾಷಿ................

ಇನ್ನೋಬ್ಬ : ಅಂದಹಾಗೆ ನಾವು ಇಲ್ಲಿ ಯಾಕ ಬಂದು ನಿಂತೀವಿ ಗೊತ್ತೇನು ? ಜನ ಯಾಕ ಸೇರ್ಯೆತಿ ಗೊತ್ತೇನು?

ಒಬ್ಬ : ಗೊತ್ತಿಲ್ಲದೆ ಏನಪ್ಪ ನಾಟಕ ಐತಿ ಅಂತ ಗಾಡಿಕಟ್ಟಿ, ಬಿತ್ತಿ ಹಚ್ಚಿ, ತುತ್ತೂರಿ ಊದಿ ಪ್ರಚಾರ ಮಾಡಿಲ್ಲೇನು. ಅದಕ್ಕೆ ಜನ ಸೇರ್ಯೆತಿ. ಕತಿ ಹೇಳಕೆ ನಾವು ಬಂದು ನಿಂತೀವಿ.

ಇನ್ನೋಬ್ಬ : ಅದು ಸರಿಯಪ್ಪ ಆಡೂ ನಾಟಕ ಕತಿ ಯಾವುದು ?

ಒಬ್ಬ : ಹೌದಲೆ, ಒಳ್ಳೆ ನೆನಪು ಮಾಡಿದಿ, ನನಗೂ ಮರೆತುಹೋಗಿತ್ತು. ಹಾಂ...ಮಾಲೀಕನ್ನೆ ಕೇಳಿಬಿಡೋಣು. ಹ್ಯಾಗೂ ಬಣ್ಣದ ಮನೆಯಾಗೆ ಇದಾರೆ (ಪಕ್ಕಕ್ಕೆ ಹೋಗಿ ಇಣುಕಿ) ಅಲ್ಲ ಮಾಲೀಕರೆ ಇವತ್ತು ಆಡುವ ನಾಟಕದ ಕತಿ ಯಾವುದು ಹೇಳ್ರಲ ಮತ್ತೆ,(ಕಿವಿಯ ಬದಿಗೆ ಕೈಯಿಟ್ಟು) ಆಂ..... ಇಕ್ಕೇರಿ.........ಹುಂ.. ಹುಂ.. ಗೊತ್ತಾತು ಬಿಡ್ರಿ........... ಇಕ್ಕೇರಿ ಕ್ರಾಂತಿ ಅಂತ ಹೌದೋ ಅಲ್ಲೋ ಹಾಂ ಹೇಳತಿವಿ ಬಿಡ್ರಿ. ಪೂರ್ವಕತಿ ಪರಿಚಯ ಮಾಡಿಸಬೇಕ್ರ...........ಆತ್ರಿ.........ನೀವು ಕಾಳಜಿ ಮಾಡಬ್ಯಾಡ್ರಿ........

ಇಬ್ಬರೂ : ಕತೆಯ ಹೇಳತೇವ ಕೇಳಿ
ಇಕ್ಕೇರಿ ರಾಜ್ಯದ !
ಕತೆಯ ಹೇಳತೇವ ಕೇಳ್ರಿ ॥
ಚೌಡಪ್ಪನಾಯಕ ನೆಂಬುವನೊಬ್ಬ
ಕಟ್ಟಿದ ರಾಜ್ಯವ ಕೇಳದಿಯಲಿ
ನಂತರ ಆಳಿತು ಅವನ ಸಂತತಿ
ನೆಲೆನಿಂತು ಇಕ್ಕೇರಿಯಲಿ ॥
ಸದಾಶಿವನಾಯಕ, ಸಂಕಣನಾಯಕ

ಮತ್ತೆ ಧೀರದೊರೆ ದೊಡ್ಡ ಸಂಕಣ್ಣ
ಭದ್ರಪ್ಪ, ವೀರಭದ್ರರು ಆಳಿದರು.
ಪರಾಕ್ರಮಿಗಳು ಭುಜಬಲದಿ ॥
ವೀರಭದ್ರ ನಾಯಕರು ಆಳುವ ಕಾಲದಿ
ಬಿಜಾಪುರದ ಖಾನ ಇಟ್ಟನು ದಾಳಿ
ಮಾಡಿದನು ಇಕ್ಕೇರಿಯ ಧೂಳಿ
ಬಿಜಾಪುರದ ಖಾನ ರಣಧೂಳಿ ॥
ಊರಿಗೆ ಅವನು ಇಟ್ಟನು ಕೊಳ್ಳಿಯ
ಸಿಕ್ಕ ಸಿಕ್ಕ ಜನಗಳು ತಲೆಹೊಯ್ದು
ಹರಿಸಿದ ನೋಡ ರಕುತದ ಹೊಳಿ ॥
ದೊರೆ ವೀರಭದ್ರ ತಲೆ ಮರೆಸಿಕೊಂಡ
ನಂತರ ರಾಜಧಾನಿ ಬಿದನೂರು
ಕಟ್ಟಿದ ಕೋಟೆಯ ಕೊತ್ತಳ ಕೇರಿಯ
ಆಳಿದ ರಾಜ್ಯ ಇಕ್ಕೇರಿ ॥
ನಂತರ ಬಂದ ಧರ್ಮತೇಜದ
ಮಹಾತ್ಮ ದೊರೆ ಶಿವಪ್ಪನಾಯ್ಕ
ಶಿಸ್ತಿಗೆ ಹೆಸರು ವೀರದ ಬಸಿರು
ವಿಸ್ತರಿಸಿದ ರಾಜ್ಯ ಭುಜಬಲದಿ ॥
ಅವನ ಮಗ ಸೋಮಶೇಖರನ
ಇಂದಿನ ನಾಟಕ ಕತೆ ಐತಿ
ತಮಗೆ ಹೇಳಿತೇವಿ ಹರುಷದಲಿ ॥
ಇಕ್ಕೇರಿಯಾಳುವಾತ ಸೋಮಶೇಖರ
ವೀರ, ಧೀರ, ರೂಪದಲ್ಲಿ ಮದನಕುಮಾರ
ಮಹಿಶೂರ ಅರಸರನ್ನು ಗೆದ್ದ ಕದನದಿ
ಹಾರಿಸಿದ ಜಯದ ಧ್ವಜ ಬಾನಬಯಲಲಿ
ಹರುಷದಿಂದ ಪೂಜೆ ಕೊಡಲು ಮನೆದೇವರಿಗೆ
ಬರುವ ಕೆಳದಿಗೆ, ಪರಿವಾರದೊಂದಿಗೆ ॥

(ಕಾಲಿನ ಗೆಜ್ಜೆ ಸದ್ದು ಕೇಳಿಬರುವುದು)

ಒಬ್ಬ : ಅರರೆ, ಗೆಜ್ಜೆ ಸಪ್ಪಳ ಕೇಳತೈತಲ್ಲೊ, ಹಾಡ್ತಾ, ಆಡ್ತಾ, ನಾವು ಎಲ್ಲಿಗೆ ಬಂದೆವು ?

ಇನ್ನೊಬ್ಬ : ಎಲ್ಲಿಗೇನಲೇ, ರಾಮೇಶ್ವರದೇವರ ಗುಡಿತಾಗೆ ಬಂದಿದೀವಿ.

ಒಬ್ಬ : ಓ ! ದೊರೆ ಸೋಮಶೇಖರ ನಾಯಕರ ಪಾದ ಚಿತ್ತೈಸಿರಬೇಕು. ಅದ್ಕೆ ನೋಡು ಕುದುರೆ, ವಾಹನ, ಭಟರು ಕಹಳೆ ಸದ್ದು

ಇನ್ನೋಬ್ಬ : ಹಂಗಾರ ಈ ಗೆಜ್ಜೆ ಸದ್ದು ನಾಟ್ಯ ಸೇವೆದು ಇರಬೇಕೇನೋ.

ಒಬ್ಬ : ಇದ್ದೀತು. ಒಳಗಂತೂ ಹೋಗಾಂಗಲ್ಲ, ಹೊರಗಡೇನೆ ಇದ್ದು ಏನಂತ ನೋಡಾಣು ನಡಿ.

--ತೆರೆ--

ಪ್ರವೇಶ 2

ಕೇಳದಿ ರಾಮೇಶ್ವರ ದೇವಾಲಯ ನವರಂಗದಲ್ಲಿ ಶ್ರೀ ರಾಮೇಶ್ವರ ದೇವರಿಗೆ ನೃತ್ಯ ಸೇವೆ ನೆಡೆಯುತ್ತಿದೆ, ನಾಟ್ಯವಾಡುತ್ತಿರುವವಳು ಚನ್ನಿ. ಜಮಖಂಡಿಯಿಂದ ಬಂದವಳು. ಹಿಮ್ಮೇಳದಲ್ಲಿ ಪುಟ್ಟತಾಯಿ ಹಾಡು ಮತ್ತು ನೃತ್ಯದ ಬೋಲುಗಳನ್ನು ಹೇಳುತ್ತಿದ್ದಾಳೆ.

ಹಾಡು : ಆಡಿದನೋ ಶಿವ ಉಮೆಯೊಡನೆ.................

ಕಾಮನ ಜಯಿಸಿದ ಭ್ರಮೆಯಲಿ ತೇಲುತ ||
ಚೈತ್ರದ ಬರವಲಿ ಇಳೆ ಕಾದಿರಲು
ತರುಲತೆ ಚಿಗುರಿ ಅರಳಿರಲು
ದುಂಬಿಯ ತಂಬೂರಿ
ಕೋಗಿಲೆಯಾಲಾಪ
ಸಮೀರಣ ತೂಗೆ ಉಯ್ಯಾಲೆ
ಬಾನಿಂದ ಸುರಿಯಲು ಅರಳಮಳೆ ||
ಆಡಿದನೋ ಶಿವ ಉಮೆಯೊಡನೆ
ಲಾಸ್ಯವಾಡಿದನೋ ಶಿವ ಉಮೆಯೊಡನೆ

ಚನ್ನಿಯ ಗುರು ಬರುವೆ ಮಾವುತ ಕೈಯಿಂದ ತಾಳ ಹಾಕುತ್ತಿದ್ದಾನೆ . ಒಂದೆಡೆ ಇಕ್ಕೇರಿಯ ದೊರೆ ಸೋಮಶೇಖರ ನಾಯಕರು ತಮ್ಮ ಪರಿವಾರದೊಂದಿಗೆ ನಿಂತಿದ್ದಾರೆ. ನಾಯಕರು ಎವೆಯಿಕ್ಕದೆ ಚನ್ನಿಯ ನಾಟ್ಯ ನೋಡುವುದರಲ್ಲಿ ತಲ್ಲೀನರಾಗಿದ್ದಾರೆ. ನೃತ್ಯ ಮುಗಿದ ನಂತರ ನೃತ್ಯಾಂಗನೆ ದೇವರಿಗೆ ವಂದಿಸಿ, ನಾಯಕರ ಕಾಲಿಗೆರಗಿ ಮೇಲೆದ್ದು ನಿಲ್ಲುವಳು. ಪರಿವಾರದೊಂದಿಗೆ ಕೆಲ ಹೆಜ್ಜೆಗಳನ್ನಿಟ್ಟ ಸೋಮಶೇಖರನಾಯಕರು ಸೇವಕನನ್ನು ಬಳಿಗೆ ಕರೆಯುವರು. ಸೇವಕ ಅವರ ಬಳಿ ಬಂದು ವಂದಿಸಿ ನಿಲ್ಲುತ್ತಾನೆ.

ಸೊ.ನಾಯಕ : ಸೇವಕ, ಈ ನೃತ್ಯಪರಿವಾರದವರಿಗೆ ಬಿದನೂರಿಗೆ ಬಂದು ನಮ್ಮನ್ನು ಕಾಣೆಸಿಕೊಳ್ಳುವಂತೆ ತಿಳಿಸು (ನಿಷ್ಕ್ರಮಣ. ಪರಿವಾರ ಹಿಂಬಾಲಿಸುವುದು)

ಸೇವಕ : (ಪುಟ್ಟತಾಯಿ ಬಳಿ ಬಂದು) ಗೊತ್ತಾಯಿತಲ್ಲ ! ತಾವು ಬಿದನೂರಿಗೆ ಬಂದು ದೊರೆಗಳನ್ನು ಕಾಣೆಸಿಕೊಳ್ಳುವಂತೆ ಪ್ರಭುಗಳ ಅಪ್ಪಣೆಯಾಗಿದೆ.

ಬ.ಮಾವುತ : ಒಮ್ಮೆ ಬಾರದಿದ್ದರೆ....

ಸೇವರ : ದೊರೆಗಳ ಅವಕೃಪೆ ದೇವರಿಗಿಂತ ಹೆಚ್ಚು ಪರಿಣಾಮ ಬಿರುತ್ತದೆಯೆಂಬುದು ಗೊತ್ತು ತಾನೆ ಪ್ರಭಗಳು ಒಲಿದರೆ ಒಣಮರ ಚಿಗುರೀತು. ಮನಿದರೆ ಹಸಿಮರ ಉರಿದೀತು (ಹೋಗುವನು)

ಮಾವುತ : (ನಗುತ್ತ) ಚನ್ನಿಯ ಮೇಲೆ ದೊರೆಗಳ ಕೃಪಾಕಟಾಕ್ಷ ಬಿದ್ದಂತಿದೆ. ಅದು ನಿಜವಾದರೆ ನಮ್ಮ ಕನಸು ಸಾಕಾರಗೊಂಡಂತೆ. ಮೇಲೆ ದೊರೆಗಳ ಕೃಪಾಕಟಾಕ್ಷ ಬಿದ್ದಂತಿದೆ. ಅದು ನಿಜವಾದರೆ ನಮ್ಮ ಕನಸು ಸಾಕಾರಗೊಂಡಂತೆ. ಚನ್ನಿ ಮಹಾರಾಣಿಯಾಗಿ ಮೆರೆಯುಬಹುದು. (ಪುಟ್ಟತಾಯಿ ಚನ್ನಿಯೆಡೆಗೆ ಅರ್ಥಪೂರ್ಣವಾಗಿ ನೋಡುವಳು)

--ತೆರೆ--

ಪ್ರವೇಶ 3

ಇಕ್ಕೇರಿಯ ರಾಜಧಾನಿ ಬಿದನೂರಿನಲ್ಲಿಯ ಒಂದು ಅರಮನೆ. ಜಮಖಂಡಿಯಿಂದ ಬಂದಿರುವ ಪುಟ್ಟತಾಯಿ, ಚನ್ನಿಯ ತಾತ್ಕಾಲಿಕವಾಗಿ ವಾಸವಾಗಿದ್ದಾಳೆ. ತಾಯಿ ಪುಟ್ಟತಾಯಿ, ಗುರು ಬರುವೆ ಮಾವುತ ಜೊತೆಗಿದ್ದಾರೆ. ಅದರ ಹಜಾರದಲ್ಲಿ ಇಕ್ಕೇರಿಯ ದೊರೆ ಸೊಮಶೇಖರ ನಾಯಕ ಆಸನವೊಂದರಲ್ಲಿ ಮಂಡಿಸಿದ್ದಾರೆ. ಒಂದೆಡೆ ಬರುವೆ ಮಾವುತ ಕೈಯಿಂದ ತಾಳ ಹಾಕುತ್ತಿದ್ದಾನೆ. ಚನ್ನಿ ನೃತ್ಯವಾಡುತ್ತಿದ್ದಾಳೆ. ಪುಟ್ಟತಾಯಿ ಹಾಡುತ್ತಿದ್ದಾಳೆ.

ರಸಿಕರು ಮುಡಿವ ಹೂವಿದು ನೋಡೋ
ಪಥಿಕರ ಸೆಳೆವ ಅರಳಿದು ನೋಡೋ

ಮುಡಿದು ಬಿಸುಡಿದ ಸುಮವಿದು ಎನಬ್ಯಾಡೋ...........
ಹಲವರ ಕರವ ಸೋಂಕಿದೆಯೆಂದು
ಬಿಸಿಲಿನ ಬೇಗೆಗೆ ಬಾಡಿದೆಯೆಂದು
ಬಾಡಿದ ಸುರಗಿಯ ಅಲರಿದು ಹಿಡಿಬಂದು.....
ಪದುಮಾಸನನ ಕುಂದದಮಾಟ
ಮುದನನ ಕೈಮೆಯ ಚಳಕದ ಕೂಟ
ಪದುಮಾಕ್ಷಿಯ ಸುಧೆ ಸುರಿಸುವ
ಕಡೆಗಣ್ಣ ಕುಡಿನೋಟ
ಅಡಗಿಹುದಲ್ಲೆ ಜಗದಾಟ

ಸೊ.ನಾಯಕ : ಭಲೇ, ಭಲೇ, ಅದ್ಭುತ, ನಾಟ್ಯಾಚಾರ್ಯರೆ, ನಿಮ್ಮ ಶಿಷ್ಯಳನ್ನು ಚೆನ್ನಾಗಿ ತರಬೇತುಗೊಳಿಸಿದ್ದೀರಿ. ಅವಳ ನೃತ್ಯ ನಮಗೆ ತುಂಬಾ ಮೆಚ್ಚುಗೆಯಾಯಿತು.

ಬ.ಮಾವುತ : ನನ್ನದೇನಿದೆ ಪ್ರಭು. ಅವಳಲ್ಲಿ ಪ್ರತಿಭೆ ಇದೆ. ಅದನ್ನು ಗುರುತಿಸಿ ನನ್ನ ವಿದ್ಯೆಯನ್ನು ಧಾರೆಯೆರೆದಿದ್ದೇನೆ. ಪ್ರಯತ್ನ ನನ್ನದು. ಪ್ರತಿಭೆ ಅವಳದು.

ಸೋ.ನಾಯಕ : ಅಂದು ಮೈಸೂರಿನವರ ಮೇಲೆ ವಿಜಯ ಸಾಧಿಸದ ಸಂತೊಷಾರ್ಥವಾಗಿ ಕೆಳದಿಯ ಶ್ರೀ ರಾಮೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದೆವಲ್ಲ, ಅಂದು ನಿಮ್ಮ ಶಿಷ್ಯಳ ನೃತ್ಯವನ್ನು ನೋಡಿದೆವು. ಅವಳ ನಾಟ್ಯ ಮಿಂಚಿನ ಸೆಳೆತ ನನ್ನನ್ನು ಪರವಶನನ್ನಾಗಿಸಿಬಿಟ್ಟಿತು. ಅವಳ ನಾಟ್ಯದ ಸವಿಯನ್ನು ಮತ್ತೊಮ್ಮೆ ಸವಿಯಬೇಕೆಂಬ ಹಂಬಲದಿಂದ ನಿಮ್ಮನ್ನು ಬಿದನೂರಿಗೆ ಕರೆತರಲು ಆದೇಶಿಸಿದೆವು. ನೀವೂ ಬಂದಿ. ನೃತ್ಯಕಲೆ ಅವಳಿಂದಾಗಿ ಬಹಳ ಉಪಕೃತವಾಗಿದೆ.

ಪುಟ್ಟತಾಯಿ : ಪ್ರಭುಗಳು ಮನಸ್ಸು ಮಾಡಿದರೆ, ಮನಸ್ಸಿಗೆ ಒಪ್ಪುಗೆಯಾದರೆ ಚನ್ನಿಯ ನೃತ್ಯವನ್ನು ಬೇಕೆಂದಾಗ ನೋಡಿ ಅನುಭವಿಸಬಹುದು. ಕಲಾವಿದರಿಗೆ ಆಶ್ರಯ ಬೇಕಲ್ಲವೆ !

ಸೋ.ನಾಯಕ : ನಿಜ ನಿಜ, ಆಶ್ರಯದಾತರಿಲ್ಲದೆ ಕಲೆ ಅರಳುವುದೆಂತು, ಬೆಳೆಯುವುದೆಂತು? ಮಾವುತರೆ, ಈಗ ನಮ್ಮ ಮನಸ್ಸಿನಲ್ಲಿ ಒಂದು ವಿಚಾರ ಉದ್ಭವವಾಗಿದೆ.........

ಬ. ಮಾವುತ : ಅಪ್ಪಣೆಯಾಗಲಿ ಮಹಾಪ್ರಭು.

ಸೋ.ನಾಯಕ : ಮಿಂಚಿನಬಳ್ಳಿಯಾದ ನಿಮ್ಮ ಶಿಷ್ಯಳ ನಾಟ್ಯವಿದ್ಯೆಗೆ ಸರಿಯಾದ ಪ್ರೋತ್ಸಾಹದ ಅಗತ್ಯವಿದೆ. ಅದಕ್ಕೆ ರಾಜಾಶ್ರಯ ಬೇಕಾಗಿದೆ.

ಬ. ಮಾವುತ : ಹೌದು ಪ್ರಭು. ತಮ್ಮ ಅಭಿಪ್ರಾಯ ಅತ್ಯಂತ ಸಾಧುವಾದುದು.

ಸೊ.ನಾಯಕ : ಕಲೆಯ ಬಗ್ಗೆ ನಮಗೆ ಅಪಾರ ಅಭಿಮಾನ. ಅದಕ್ಕಾಗಿ ಚನ್ನಿ ಲೋಕೋತ್ತರ ನರ್ತಕಿಯಾಗಿ ಬೆಳೆಯಲೆಂಬ ಆಶಯದಿಂದ ಅವಳನ್ನು ಆಸ್ಥಾನ ನರ್ತಕಿಯನ್ನಾಗಿ ಇರಿಸಿಕೊಳ್ಳಲು ನಾವು ನಿರ್ಧರಿಸಿದ್ದೇವೆ (ಬರುವೆ ಮಾರುತ, ಪುಟ್ಟತಾಯಿ ಒಬ್ಬರನ್ನೊಬ್ಬರು ನೋಡಿಕೊಳ್ಳುವರು) ಅದಕ್ಕೆ ನಿಮ್ಮ ಒಪ್ಪಿಗೆ ಬೇಕಷ್ಟೆ ಏನನ್ನುವಿರಿ ?

ಬ.ಮಾವುತ : ದೊರೆಗಳು ಕೃಪೆ ಮಾಡಿದರೆಂದ ಮೇಲೆ..........ನಾವು ಸಹ ಸರಿಯಾದ ಆಶ್ರಯವನ್ನು ಹುಡುಕುತ್ತಾ ಊರಿಂದೂರಿಗೆ ಅಲೆಯುತ್ತಾ ಕೆಳದಿಯನ್ನು ತಲುಪಿದ್ದೆವು. ತಮ್ಮ ನಾಡಿನ ಕೀರ್ತಿಯನ್ನೂ ತಮ್ಮ ವಿದ್ಯಾಭಿಮಾನ ಮತ್ತು ಔದಾರ್ಯಗಳ ವಿಚಾರವಾಗಿ ಇದುವರೆಗೆ ಕರ್ಣಾಕರ್ಣಿಯಾದ ಮಾತುಗಳನ್ನು ಕೇಳಿದ್ದೆವು. ಇಂದು ಪ್ರತ್ಯಕ್ಷ ಅನುಭವವಾಯಿತು.

ಸೋ.ನಾಯಕ : ಕಲಾವಿದರಿಗೆ ಪ್ರೋತ್ಸಾಹ ನೀಡಬೇಕಾದುದು ರಾಜಧರ್ಮ. ಕಲೆ ಬೆಳೆಯಲು ಪ್ರೋತ್ಸಾಹದ ನೀರು ಅಗತ್ಯವಿಲ್ಲವೆ?

ಬ.ಮಾವುತ,ಪುಟ್ಟತಾಯಿ : ಉಪಕೃತರಾದೆವು ಪ್ರಭು. ಚನ್ನಿಯ ಬಾಳು ಸಾರ್ಥಕವಾಯಿತು.

ಬ. ಮಾವುತ : ತಮ್ಮಂತಹ ಪ್ರಭುಗಳನ್ನು ಪಡೆದ ಈ ರಾಜ್ಯದ ಜನತೆ ಧನ್ಯರು.

ಸೋ.ನಾಯಕ : ಅಷ್ಟೆಲ್ಲ ಹೊಗಳಬೇಡಿ....ಹಾಂ ಅಂದಹಾಗೆ ಮಾವುತರೇ! ನೃತ್ಯ ಶಿಕ್ಷಣವೇ ನಿಮ್ಮ ವೃತ್ತಿಯೇನು?

ಬ. ಮಾವುತ : ಚನ್ನಿಗೆ ನೃತ್ಯ ಕಲಿಸಲಾರಂಭಿಸಿದ ಮೇಲೆ, ಇವಳ ಪ್ರತಿಭೆಯನ್ನು ಗುರುತಿಸಿದ ನಂತರ ನನ್ನ ಎಲ್ಲಾ ವಿದ್ಯೆಯನ್ನು ಒಬ್ಬಳಿಗೆ ಧಾರೆಯೆರೆದು ಪರಿಪೂರ್ಣ ಕಲಾವಿಧೆಯನ್ನು ರೂಪಿಸಿದರೆ ಅದೇ ಸಾಕೆಂದು ಅಂದುಕೊಂಡೆ. ಆದರೆ ಹೊಟ್ಟೆಗೆ ಅದಕ್ಕೆ ಆಶ್ರಯ ಅರಸುತ್ತಾ ಹೊರಟೆವು. ಹುಂ. ಜೋತಿಷ್ಯ ಹಾಗೂ ವೈದ್ಯ ವಿದ್ಯೆಯಲ್ಲಿಯೂ ಸಾಕಷ್ಟು ಪರಿಶ್ರಮವಿದೆ.

ಸೋ.ನಾಯಕ : ಸರಿ. ನಿಮಗೆ ಇಲ್ಲಿ ಎಲ್ಲಾ ಅನುಕೂಲಗಳೂ ಲಭ್ಯವಿದೆ ತಾನೆ ?

ಬ.ಮಾವುತ : ದೊರೆಗಳ ಅನುಗ್ರಹದಿಂದ.. ಇಲ್ಲಿ ನಮಗೆ ಯಾವ ಕೊರತೆಯೂ ಇಲ್ಲ.

ಸೋ.ನಾಯಕ : ಏನಾದರೂ ಅಗತ್ಯವಿದ್ದರೆ ಮನೆಯಾಳ್ತನದ ಹಿರಿಯನಿಗೆ ತಿಳಿಸಿ. ನಾವು ಹೋಗಿಬರುತ್ತೇವೆ. (ನಿಷ್ಕ್ರಮಣ). ಚನ್ನಿ ಪುಟ್ಟತಾಯಿ ದೊರೆ ಹೋದ ಕಡೆ ನೋಡುತ್ತಿರುವರು.

ಬ.ಮಾವುತ : (ಬಾಗಿಲವರೆಗೆ ಹೋಗಿಬಂದು) ಹೋಗಿಬರತ್ತೇವೆ......ಹುಂ ಹುಂ ಹುಂ ಹುಂ (ನಗು) ಬರದೇನು ಮಾಡೀರಿ. ಚುಂಬಕದ ಸೆಳೆತ ಇಲ್ಲಿರುವಾಗ..........

ಪುಟ್ಟತಾಯಿ : ಏನು ಮಾವುತರೆ, ಏನೋ ಮನಸ್ಸಿನಲ್ಲೇ ಗೊಣಗಿಕೊಳ್ಳುತ್ತಲಿದ್ದೀರಿ.

ಬ.ಮಾವುತ : ಏನಿಲ್ಲ ಪುಟ್ಟತಾಯಿ, ನಡಿ, ಮಲಗಿಕೊಳ್ಳೋಣ. ನಿದ್ದೆ ಕಣ್ಣನ್ನು ಸೆಳೆಯುತ್ತಿದೆ.

ರಸ್ತೆ ಪ್ರವೇಶ 4

(ಹಾಡುಗಾರರು ಹಾಡುತ್ತಾ ಬರುವರು)

ಒಂದ ಹೆಣ್ಣ ಕರೆ ತಂದಾನೋ ಭೂಪಾಲ
ನೋಡಿ ಮುರಳಾಗಿ ಅವಳ ಕುಣಿತದ ಕಾಲ
ಕಣ್ಣ ಮಿಂಚಿಗೆ ಅವ ಸೆರೆಯಾದ
ಮೈಯ ಮಾಟಕ್ಕೆ ಮರುಳಾದ
ಮರುಳು ನಗೆಗೆ ಮಾರುಹೋದನಲ್ಲೋ
ಕಾಲ ಹೆಂಗಾನೋ ಏನೋ ನೋಡಿ
ಈಗ ಅವನ ಕಾಡ್ತೈತೆ ಹೆಣ್ಣ ಮೋಡಿ
ಅರಮನೆಯನೊಂದ ಮಾಡಿ
ಹೆಣ್ಣ ಪರಿವಾರ ಇಟ್ಟಾನ ನೋಡಿ ॥

ಒಬ್ಬ : ಆ ಹೆಣ್ಣ ಈ ರಾಜ್ಯಕ್ಕೆ ಕಾಲಿಟ್ಟದ್ದರಿಂದ ಏನೇನು ಆಗತ್ತೈತೋ ಏನೋ. ರಾಜ್ಯಕ್ಕೆ ಆಪತ್ತು ಬರದಿರಲಿ ಅಂತ ಆ ರಾಮೇಶ್ವರ ದೇವರಲ್ಲಿ ನಮ್ಮ ಹರಕೆ ಅಷ್ಟೆ (ಹೋಗುವವನು)

-ತೆರೆ -

ಪ್ರವೇಶ 5

(ನೃತ್ಯಗಾತಿ ಚನ್ನಿಯ ಬಿಡದಿ. ಚನ್ನಿ ಆನಂದತುಂದಿಲಳಾಗಿ ಹಾಡೊಂದನ್ನು ಗುನುಗುತ್ತಾ ನಾಟ್ಯದ ಭಂಗಿಯನ್ನು ಪ್ರದರ್ಶಿಸುತ್ತಿರುವಳು. ಬರವೆ ಮಾವುತನು ಪ್ರವೇಶಿಸಿ ಅವಳೆಡೆ ನೋಡಿ)

ಬ. ಮಾವುತ : (ನಗುತ್ತಾ) ಕುಣಿ ......ಕುಣಿ.........ಸೌಂದರ್ಯದ ಖನಿ ಕುಣಿ...... ಕುಣಿಸಿ ಕುಣಿ ಕಾರ್ಯಸಾಧನೆಯಾವುವವರೆಗೂ ನೀನು ಹೀಗೆ ಕುಣಿಯುತ್ತಲೇ ಇರಬೇಕು. (ಚನ್ನಿಗೆ ಏನೂ ಅರ್ಥವಾಗದೇ ಮಾವುತನನ್ನೇ ನೋಡುತ್ತಾ ನಿಲ್ಲುವಳು) ನಿನ್ನ ಕುಣಿತ ಅವನು ನೆಲದವರೆಗೆ ಮಣಿಯುವಂತಾಗಬೇಕು. ಕಾಲಿನ ನುಲಿಗೆಜ್ಜೆಯ ಝಣರಝಣತ್ಕಾರ, ಆವನ ಕಿವಿ

ಬೇರೊಂದನ್ನು ಕೇಳಿಸಿಕೊಳ್ಳದಂತೆ, ನರ್ತನ ವಿನ್ಯಾಸ, ವಿಲಾಸದಲ್ಲಿ ನಿನ್ನ ರಮಣೀಯ ರೂಪು ಕಣ್ತುಂಬಿ, ಬೇರೊಂದನ್ನು ಕಾಣದಂತೆ ಎದೆಯಲ್ಲಿ ಅನುರಾಗದ ಬುಗ್ಗೆಯನ್ನು ಚಿಮ್ಮಿ ಬೇರೆಯಲ್ಲ ಶುಷ್ಕವಾಗುವಂತೆ, ಅಪಾಂಗದ ಮಿಂಚುವೆಳಗು ಮನಸ್ಸನ್ನು ಸೆರೆಹಿಡಿದು ಬೇರೊಂದನ್ನು ಬಯಸದಂತೆ, ಸರ್ವಸ್ವವನ್ನೂ ಸೂರೆಗೊಳ್ಳುವಂತೆ ಕುಣಿ (ಚನ್ನಿ ಏನೂ ಅರ್ಥವಾಗದೆ ಮಾವುತನ ಕಡೆ ಮೊದಲಿನಂತೆ ನೋಡುತ್ತಿರುತ್ತಾಳೆ) ಹಾಗೇಕೆ ನೋಡುತ್ತಿರುವೆ ಚನ್ನಿ? ಈ ಮಂತ್ರದಿಂದಲೆ ನಮ್ಮ ಯಾತ್ರೆಯ ಸಿದ್ಧಿಯ ಅಂತಿಮ ಹಂತ. ನೀನರಿಯೆ. ಕಾಲಚಕ್ರ ನಮಗನುಗುಣವಾಗಿ ತಿರುಗುತ್ತಿದೆ. ನಾನರಿತಿದ್ದೇನೆ. ತಂತ್ರವನ್ನು ರೂಪಿಸಿದ್ದೇನೆ. ನೀನೀಗ ಜಂಬುಖಂಡಿಯ ಹಾಳು ಸೂಳೆಯಲ್ಲ. ಬೀದಿಯ ನರ್ತಕಿಯೂ ಅಲ್ಲ. ಇಕ್ಕೇರಿಯ ಸಿಂಹಾಸನಾಧೀಶ್ವರ ವೀರ ಸೋಮಶೇಖರ ನಾಯಕರ ಮೋಹದ ಖನಿ ಕಣ್ಮಣಿ......ದೊರೆಸಾನಿ...........

ಚನ್ನಿ : ಅವರು ನನ್ನನ್ನು ಹಾಗೆ ಕಾಣುತ್ತಿದ್ದಾರೆ.

ಬ.ಮಾವುತ : ಅವರು ಹಾಗೆ ನಿನ್ನನ್ನು ಕಾಣುವಂತೆ ನೀನು ಕಾಣಿಸಿಕೊಳ್ಳಲೇಬೇಕು. ಭಾವ ಬಲಗೊಳ್ಳಬೇಕು. ಭಾಗ್ಯಲಕ್ಷ್ಮಿ ನಮಗೊಲಿದು ಬರಬೇಕು. ಈಗ ನಾವು ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿದರೆ ನಾವು ಜಾಣರಾಗುತ್ತೇವೆ.

ಚನ್ನಿ : ನನ್ನ ಸಕಲ ಸೌಭಾಗ್ಯವೂ ಅವರೆ-ಅವರೆ ನನ್ನವರಾಗಿರುವಾಗ ಭಾಗ್ಯಕ್ಕೆ ಬಂದ ಬಡತನವೇನು?

ಬ.ಮಾವುತ : ಓ! ಈಗ ನೀನು ಗೃಹಿಣಿ ಪಟ್ಟವನ್ನು ಸ್ವೀಕರಿಸಿಬಿಟ್ಟೆಯೇನು? ದೊರೆರಾಯನಿಗೆ ನೀನು ಬಾಳ ಸಂಗಾತಿ! ನಿನ್ನ ಹಿಂದಿನ ಜೀವನವನ್ನು ಮರೆಯಬೇಡ ಚನ್ನಿ. ಅರಸರಿಗೆ ಪಟ್ಟದರಸಿ ಇದ್ದಾಳೆ ಉಪಪತ್ನಿಯರಿದ್ದಾರೆ. ನಿನು ಅವರ ಭೋಗದ ಹೆಣ್ಣು ಮಾತ್ರ. ಕೇವಲ ಬೋಗದ ಹೆಣ್ಣು.

ಚನ್ನಿ : ಆದರೇನು ? ಅವರು ನನ್ನನ್ನು ಅದರಿಸುತ್ತಿದ್ದಾರಲ್ಲ....

ಬ.ಮಾವುತ : ಈ ಅಲ್ಪ ಭಾಗ್ಯ-ಭೋಗಗಳಿಗಾಗಿ ನಾವು ಶರಣಾಗಬೇಕೆ? ಅದಕ್ಕಾಗಿ ಕಂಡವರಿಗೆಲ್ಲ ಜಿ. ಎನ್ನಬೇಕೆ? ಭಾಗ್ಯಲಕ್ಷ್ಮಿಯೊಡನೆ ರಾಜಲಕ್ಷ್ಮಿಯೂ ನಮಗೊಲಿದು ಬರುವುದಾದರೆ, ಅದನ್ನು ಕಾಲಿನಿಂದ ಒದ್ದು ದೂರ ತಳ್ಳುವುದು ಜಾಣತನವೇನು ?

ಚನ್ನಿ : ಇದೇನು ಮಾತು ಗುರುಗಳೇ........

ಬ. ಮಾವುತ : ನೀನು ಸ್ವಲ್ಪ ಚತುರೆಯಿಂದ ವರ್ತಿಸಿದರೆ ಇಕ್ಕೇರಿಯ ಮಹಾರಾಜ್ಞಿಯಾಗುವೆ.

ಚನ್ನಿ : ಇಂದು ನಿಮಗೇನಾಗಿದೆ ಗುರುಗಳೆ ? ನಿಮ್ಮ ನಡವಳಿಕೆಯೇ ಬದಲಾಗಿದೆಯಲ್ಲ

ಬ.ಮಾವುತ : ಕಾಲ ಕಾಲ ಚನ್ನಿ ..ಕಾಲವನ್ನು ನಮ್ಮ ಪ್ರಗತಿಗಾಗಿ ಬಳಸಿಕೊಳ್ಳಬೇಕು. ಅದಕ್ಕೆ...ಕಾಲ ಪಕ್ವವಾಗಿದೆ...ನೀನು ರಾಣಿ.....

ಚನ್ನಿ : ಇಕ್ಕೇರಿಯೊಡೆಯರು ನನ್ನನ್ನು ರಾಣಿಯಂತೆಯೇ ನಡೆಸಿಕೊಳ್ಳುತ್ತಿದ್ದಾರಲ್ಲ.

ಬ.ಮಾವುತ : ಬುದ್ದಿಗೇಡಿ ಹೆಣ್ಣೆ, ನಿನ್ನ ಅಲ್ಪತನವನ್ನು ಬಿಟ್ಟುಬಿಡು. ಈಗ ನೀನು ರಾಣಿಯಂತಿರಬಹುದು. ಆದರೆ ರಾಣಿಯಲ್ಲವಲ್ಲ. ಇಕ್ಕೇರಿಯ ಸಂಪೂರ್ಣ ಅಧಿಕಾರ ನಮ್ಮದಾಗಬೇಕು. ಆ ಸಂಚಿನಲ್ಲಿ ನೀನು ಸ್ವಲ್ಪ ಶ್ರಮಿಸಬೇಕು. ಶ್ರಮ ಸಾರ್ಥಕವಾದರೆ ನಮ್ಮಂತ ಅದೃಷ್ಟವಂತರು ಯಾರೂ ಇಲ್ಲ. ಆಗ ನೀನು ಹಿಂದಿನ ಹಾಳು ಸೂಳೆಯಾಗಿ ಉಳಿಯುವುದಿಲ್ಲ. ನಾಯಕರ ಕಮದಾಟದ ಗೊಂಬೆಯೂ ಅಲ್ಲ. ಇಕ್ಕೇರಿಯ ರಾಜಗದ್ದುಗೆಯನ್ನೇರಿ ಸರ್ವಸ್ವತಂತ್ರ ಸಾಮ್ರಾಜ್ಞಿಯಾಗುವೆ.

ಚನ್ನಿ : ಇದು ದುರಾಶೆ. ಅದು ಸರಿಯಲ್ಲ. ನಮಗೀಗ ಯಾವ ಕೊರತೆಯಿದೆಯೆಂದು

ಬ.ಮಾವುತ : ಕೊರತೆ ಇರಲಿ ಇಲ್ಲದಿರಲಿ ಒರತೆ ಇರುವ ಜಾಗವನ್ನು ಅಗೆಯಬೇಕು. ಜಲ ಶೇಖರಿಸಬೇಕು. ಮನುಷ್ಯ ಯಾವಾಗಲೂ ಯಥಾಸ್ಥಿತಿವಾದವನ್ನು ಬಿಟ್ಟು ಪ್ರಗತಿಯ ಪಥದಲ್ಲಿ ಮುನ್ನಡೆಯಬೇಕು.

ಚನ್ನಿ : ನಿಮ್ಮ ಆಲೋಚನೆ ಪ್ರಗತಿಯದಲ್ಲ. ವಿಗತಿಯದು, ದ್ರೋಹ ..ದುರಾಸೆ.

ಮ.ಮಾವುತ : (ನಕ್ಕು) ದ್ರೋಹ..ದುರಾಸೆ..ನಿನ್ನ ಒಳ್ಳೆಯದನ್ನು ಹಾರೈಸಿದರೆ ನನ್ನ ಮೇಲೆ ಆರೋಪ! ಬುದ್ಧಿ ಪಾಠ ಹೇಳುತ್ತಿರುವೆ. ಶಿಷ್ಯಳಿಂದ ಗುರು ಕಲಿಯಬೇಕಾದುದಿಲ್ಲ. ನಾನು ಹೇಳಿದಂತೆ ನೀನು ಕೇಳಲೇಬೇಕು. ಚನ್ನಿ, ಒಳ್ಳೆ ಭವಿಷ್ಯವನ್ನ ನಿನ್ನ ಕೈಯಾರೆ ಹಾಳುಮಾಡಿಕೊಳ್ಳಬೇಡ. ರಾಜ್ಯ ನಮ್ಮದಾಗಲಿ, ಒಳಿತು ಕೆಡುಕಿನ ಭಾರ ನನ್ನ ಮೇಲಿರಲಿ.

ಚನ್ನಿ : (ಕಣ್ಣರಳಿಸಿ) ರಾಜ್ಯಾಪಹಾರ........

ಬ.ಮಾವುತ : ಅದು ಹೇಗಿದ್ದರೂ, ಯಾರಿಂದಲಾದರೂ ಅಪಹಾರವಾಗಿಯೇ ತೀರುವುದು. ಸಂಚು ತುಂಬಿರುವ ಈ ರಾಜ್ಯದಲ್ಲಿ ಗದ್ದುಗೆ ವಶಪಡಿಸಿಕೊಳ್ಳಲು ಹಲವರು ಹೊಂಚು ಹಾಕಿದ್ದಾರೆ. ಆದರೆ ನಮಗೆ ಅದು ಸುಲಭವಾಗಿ ದಕ್ಕುವಂತಿರುವಾಗ ಮುಖ ತಿರುಗಿಸಿ ಕುಳಿತುಕೊಳ್ಳುವುದು ಬುದ್ಧಿವಂತಿಕೆಯಲ್ಲ.

ಚನ್ನಿ : ಆದರೆ..........

ಬ.ಮಾವುತ : ಅಪಶೃತಿ ಬೇಡ. ನನ್ನ ಅಪ್ಪಣೆಯಂತೆ ನಡೆದರೆ ಮಾತ್ರ ನೀನು ಒಳ್ಳೆಯದನ್ನು ಕಾಣುವೆ. ಇಲ್ಲವಾದಲೆ...(ನಕ್ಕು) ನಾನು ನಿನ್ನಿಂದ ಅಪೇಕ್ಷಿಸುವುದು ಗುರುಕಾಣಿಕೆಯನ್ನು ಹೆಚ್ಚು ಮಾತು ಬೇಡ. ನನಗೆ ವಿರೋಧಳಾಗಿ ವರ್ತಿಸಿದರೆ ಮರುದಿನದ ಸೂರ್ಯೋದಯದ ನಿನ್ನ ಪಾಲಿಗಿಲ್ಲ.

ಚನ್ನಿ : ಆಗಲಿ ಅದಾದರೂ ಒಳ್ಳೆಯದೇ. ಕೊಂದುಬಿಡಿ. ಅಂದರೆ ನಾನು ನಿಶ್ಚಿಂತಳಾಗುತ್ತೇನೆ.

ಬ.ಮಾವುತ : ನಿಶ್ಚಿಂತೆ....... ನನ್ನ ಚಿಂತೆ ಪರಿಹಾರ ನಿನ್ನಿಂದಾದ ಮೇಲೆ. ಅಲ್ಲಿಯವರೆಗೆ ನೀನು ಬದುಕಿರಬೇಕು. ನಿನ್ನ ತಾಯಿಗೆ ನನ್ನ ಮಾತುಗಳನ್ನು ತಿಳಿಸು. ಅವಳ ಅಭಿಪ್ರಾಯ ಕೇಳು. (ತ್ವರಿತ ಗತಿಯಿಂದ ತೆರಳುವನು)

ಚನ್ನಿ : ರಾಜದ್ರೋಹ......ವಿಶ್ವಾದ್ರೋಹ........ದೇವರೇ.........

ಪುಟ್ಟತಾಯಿ : (ಪ್ರವೇಶಿಸಿ, ಎಡದ ಕೈಲಿರುವ ಪೀಕದಾನಿಗೆ ಬಾಯಲ್ಲಿರುವ ತಾಂಬೂಲ ಉಗುಳಿ) ಅವನು ಹೇಳುವುದು ಸರಿಯಾಗೈತೆ ಮಗ. ಯಾಕೆ ಬೇಡದ ಚಿಂತೆ ಹಚ್ಚಿಕೊಳ್ಳುವೆ. ನೀನು ರಾಣಿಯಾದರೆ ನಮ್ಮೆಲ್ಲರ ಅಂತಸ್ತು ಹೆಚ್ಚುವುದಿಲ್ಲವೆ. ಕೈಯೊಡ್ಡುವುದಕ್ಕಿಂತ ಬೇಡಿದವರಿಗೆ ಕೈಯೆತ್ತಿ ನೀಡುವಂತಾದರೆ ಒಳ್ಳೆಯದಲ್ವ ಕಂದ, ಯೋಜನೆ ಮಾಡಬ್ಯಾಡ...(ತಲೆ ಸವರುವಳು. ಚನ್ನಿ ಗೊಂಬೆಯಂತ ನಿಲ್ಲುವಳು)

ತೆರೆ

ಪ್ರವೇಶ 6

(ಇಬ್ಬರು ಪೌರರು ಮಾತನಾಡುತ್ತಾ ಪ್ರವೇಶಿಸುವರು)

1ನೇ ಪೌರ : ಈ ರಾಜ್ಯದ ಮೇಲೆ ಯಾವುದೋ ದುಷ್ಟಗ್ರಹ ಮುನಿಸಿಕೊಂಡಂತಿದೆ.

2ನೇ ಪೌರ : ಯಾಕೆ ? ಏನಾಯಿತು? ಯಾವ ವಿಪತ್ತು ಬಂದಿದೆ ಈಗ?

1ನೇ ಪೌರ : ಹೊಸದಾಗಿ ಯಾವ ವಿಪತ್ತು ಬರಬೇಕಾಗಿಲ್ಲ. ರಾಜ್ಯ ಈಗ ವಿಪತ್ತುಗಳ ತವರಾಗಿದೆ. ಈಗ ಇಲ್ಲಿ ಮನೆಮಾಡಿಕೊಂಡು ಕುಳಿತಿದ್ದಾರಲ್ಲ ಶನಿ, ರಾಹು, ಕೇತು.

2ನೇ ಪೌರ : ಅಂದರೆ........

1ನೇ ಪೌರ : ಅದೆ ಆ ನರ್ತಕಿ ನರ್ತಕಿಯ ತಾಯಿ, ಅವಳ ಗುರು........ರಾಜ್ಯವನ್ನ ಹಾಳುಮಾಡವುದಕ್ಕೆ ಅವರೇ ಸಾಕು. ಈ ಗ್ರಹಗಳು ವಕ್ರದೃಷ್ಟಿ ಈಗ ರಾಜ್ಯದ ಮೇಲೆ ಬಿದ್ದಿದೆ.

2ನೇ ಪೌರ : ಅವರ ವಿಚಾರದಲ್ಲಿ ಏನೋ ಹೊಸ ಸಂಗತಿಯನ್ನು ಸಂಗ್ರಹಿಸಿದ ಹಾಗಿದೆಯಲ್ಲೆ

1ನೇ : ರಾಜಧಾನಿಯಲ್ಲೆಲ್ಲ ಗುಲ್ಲೋ ಗುಲ್ಲು ನಿಮ್ಮ ಕಿವಿಗೆ ಬೀಳಲಿಲ್ಲವೆಂದರೆ

2ನೇ : ಸರಿಬಿಡಿ. ಹೇಳಿ ಕೇಳಿ ಜಂಬುಖಂಡಿಯ ಸೂಳೆ ಅವಳು, ಅವಳ ಸಹವಾಸ ಮಾಡಿದ ಮೇಲೆ....

1ನೇ : ಅದೇನು ವಶೀಕರಣವೋ ಆ ನಾಟ್ಯದವಳದು ಅಥವಾ ಮಾಟ ಮಂತ್ರವೋ ತಿಳಿಯದು. ದೊರೆಗಳು ಅವಳ ಕೈಗೊಂಬೆ. ಈಗ ಅಲ್ಲೇ ವಾಸ್ತವ್ಯ ಕೂಡ. ಅರಮನೇಯ ಸಂಪರ್ಕ ಸಹ ಕಡಿದುಹೋಗಿದೆ.

2ನೇ : ಅಂದಹಾಗೆ ಆ ಗುರು ಬರುವೆ ಮಾವುತನೇನೋ ನಾಡಮದ್ದನ್ನು ಬಲ್ಲ ವೈದ್ಯನಂತೆ !

1ನೇ : ಈಗ ಅವನೆ ವೈದ್ಯರಾಜ.........ರಾಜವೈದ್ಯ...ದೊರೆಗಳ ಆಪದ್ಬಾಂಧವ. ಆವನ ಮಾತೇ ದೊರೆಗಳಿಗೆ ವೇದವಾಕ್ಯ

2ನೇ : ಅವನೇನೋ ಜೋತಿಷ್ಯ ಅದು ಇದು ಎಲ್ಲ ತಿಳಿದವನಂತೆ. ವಶೀಕರಣ, ಮಾಟ, ಮಂತ್ರ ತಿಳಿದಿದ್ದರೂ ಇರಬಹುದಲ್ಲ.

1ನೇ : ಇದ್ದರೂ ಇದ್ದೀತು. ಆಲ್ರೀ ಈಗ ಪ್ರಭುಗಳ ಸಂದರ್ಶನಕ್ಕೆ ಸಹ ಯಾರಿಗೂ ಅವಕಾಶವಿಲ್ಲವಂತೆ.....

2ನೇ : ಸರಿಬಿಡಿ ಇದೆಂತ ಸಂಕಟಕ್ಕೆ ಮಹಾಪ್ರಭುಜಗಳು ಸಿಕ್ಕಿಹಾಕಿಕೊಂಡರಪ್ಪ

1ನೇ : ಅವರಿಗೆ ಬಡಿದ ಅಂಟುಜಾಡ್ಯ ರಾಜ್ಯಕ್ಕೆ ಕಂಟಕಪ್ರಾಯವಾಗಿದೆ. ಆ ವೈದ್ಯರಾಜ ಆನೆಯ ಮದ್ದನ್ನು ದೊರೆಗಳಗೆ ತಿನ್ನಿಸಿದನಂತೆ. ಅದರ ಪರಿಣಾಮವಾಗಿಯೇ ದೊರೆಗಳು ಮತಿಭ್ರಮಣರಾಗಿರುವರೆಂದು ಸುದ್ದಿ.

2ನೇ : ಅಯ್ಯೋ...ದೊರೆಗಳ ಹೀನಾವಸ್ಥೆಯನ್ನು ಕೇಳಿದರೆ ಕರುಳು ಹಿಂಡುತ್ತದೆ. ಎಂತಹ ದೊರೆಗಳು ಏನಾಗಿ ಹೋದರು.

1ನೇ : ಹೆಣ್ಣಿನ ವ್ಯಾಮೋಹ....

2ನೇ : ಅದೇನೋ ಹೇಳಿದಿರಲ್ಲ ಆನೆಮದ್ದು.. ಅದನ್ನು ದೊರೆಗಳಗೆ ತಿನ್ನಿಸಿದ್ದು ಹೇಗೆ.

1ನೇ : ಅದರ ಸೇವನೆಯಿಂದ ಅಪಾರ ಶಕ್ತಿ ಸಂಚಯವಾಗುವುದೆಂದು ನಂಬಿಸಿದನಂತೆ.

2ನೇ : ಅವನ ಮಾತನ್ನು ದೊರೆಗಳು ನಂಬಿಬಿಟ್ಟರೆ ?

1ನೇ : ನಂಬಿದ್ದರಿಂದಲೇ ಈ ಸ್ಥಿತಿ. ಶಕ್ತಿ ಮಾತ್ರವಲ್ಲ, ಸಂತಾನ ಪ್ರಾಪ್ತಿಯೂ ಆ ಮದ್ದನ್ನು ಸೇವಿಸುವುದರಿಂದ ಲಭ್ಯವೆಂದು ನಂಬಿಸಿದನಂತೆ.

2ನೇ : ನೀವು ಹೇಳಿದಂತೆ ಆದರೆ ಮಹಾರಾಜರು ಅರಮನೆಗೆ ಬರುವ ಹಾಗಿಲ್ಲ. ಮಹಾರಾಣಿಯವರು ಅಲ್ಲಿಗೆ ಹೋಗುವ ಹಾಗಿಲ್ಲ. ಆ ನರ್ತಕಿಯಲ್ಲಿ ಸಂತಾನವಾದರೆ ...ರಾಜ್ಯಾಪಹಾರದ ಸಂಚು ಇದ್ದೀತಲ್ಲವೆ..?

1ನೇ : ನೀವೊಂದು, ಆ ನರ್ತಕಿಯ ಮಗುವಿಗೆ ರಾಜ್ಯ ಸಿಗುವುದೆ? ಅಲ್ಲದೆ ಪ್ರಭುಗಳ ಈಗಿನ ಸ್ಥಿತಿಯಲ್ಲಿ ಅದೂ ಭ್ರಮೆ...ರಾಜರು ಸೆಣತು ಕಡ್ಡಿಯಾಗಿ ಹಾಸಿಗೆ ಹಿಡಿದಿರುವಾಗ.......

2ನೇ : ಮಾವುತನೆ ಸಿಂಹಾಸನ ಹಿಡಿಯುವ ಸನ್ನಾಸವಿರಬಹುದೆ ?

1ನೇ : ಅದೆ ಸರಿಯೆನಿಸುತ್ತದೆ.

2ನೇ : ಹಾದಿಬೀದಿಯಲ್ಲೆಲ್ಲಾ ಏಕಪ್ಪ ಮಾತು. ಇಲ್ಲಿ ಓಡಾಡುವವರಲ್ಲಿ ಯಾರು ಪ್ರಜೆಗಳೋ ಯಾರು ಗೂಢಚಾರರೋ ತಿಳಿಯುವುದೆಂತು. ಕಡೆಗೆ ನಮ್ಮ ಮಾತೇ ನಮಗೆ ಮೃತ್ಯುವಾದರೆ ...ಏನೇನು ನಡೆಯಬೇಕೋ ನಡೆಯುತ್ತದೆ. ಎಲ್ಲರಿಗೂ ಅದುದು ನಮಗೂ ನಡೆಯಿರಿ. (ನಿಷ್ಕ್ರಮಣ)

- ತೆರೆ -

ಪ್ರವೇಶ 7

(ಇಕ್ಕೇರಿ ಮಹಾರಾಣಿ ಚನ್ನಮ್ಮಾಜಿಯ ಅಂತಃಪುರ. ಮಹಾರಾಣಿ ಮತ್ತು ಪ್ರಧಾನಿ ಆವಿನಹಳ್ಳಿ ನರಸಪ್ಪನ ಗಂಭೀರ ವಿಚಾರವೊಂದನ್ನು ಚರ್ಚಿಸುತ್ತಿದ್ದಾರೆ. ಮಹಾರಾಣಿಯ ನಂಬುಗೆಯ ಸೇವಕಿ ಮಲ್ಲಿ ರಾಣಿಯ ಬಲಪಾರ್ಶ್ವದಲ್ಲಿ ನಿಂತಿದ್ದಾಳೆ)

ಚನ್ನಮ್ಮ : ರಾಜ್ಯಾದಹಾರದ ಆರೋಪ ಹೊರಿಸಿದರು. ಕಾದ ಲೋಹದ ರಸವನ್ನು ಕಿವಿಯಲ್ಲಿ ಸುರುವಿದಂತಾಯಿತು. ಸಹಿಸಿಕೊಂಡೆ.

ಪ್ರಧಾನಿ : ವ್ಯಾಧಿಗ್ರಸ್ತರಾಗಿ ನವೆಯುತ್ತಿರುವ ಪ್ರಭುಗಳು ಅಸಹನೆಯಿಂದ ಏನಾದರೂ ಹೇಳಿರಬಹುದು.

ಚನ್ನಮ್ಮ : ಹಾಗೇಂದೇ ನಾನು ಸಹಿಸಿಕೊಂಡೆ. ಅವರ ಸ್ಥಿತಿಯನ್ನು ಕಂಡು ಆರೋಪವನ್ನು ಪ್ರತಿಭಟಿಸುವುದಕ್ಕೆ ಶಕ್ತಳಾಗಲಿಲ್ಲ. ಕೋಪಕ್ಕೆ ಬದಲು ಮರುಕ, ಕನಿಕರ ಏಕಕಾಲಕ್ಕೆ ಒತ್ತರಿಸಿ ಬಂದವು. ಅವರ ಇರುವಿಕೆ ಮುಂದೆ ನಾನೆಂಬುದು ಉಳಿಯಲಿಲ್ಲ. ಮನ ಬರಿದಾಯಿತು. ಮಾತು ಹೊರಡದಾಯಿತು. ಜಗತ್ತು ಶೂನ್ಯವಾಯಿತು. ಎಡೆಬಿಡದೆ ಕಣ್ಣೀರಧಾರೆ ಹರಿಯಿತು.

ಪ್ರಧಾನಿ : ದತ್ತಕದ ವಿಚಾರದಲ್ಲಿ ಅವರ ನಿರ್ಧಾರವೇನು ತಾಯಿ?

ಚನ್ನಮ್ಮ : ಅವರನ್ನೊಪ್ಪಿಸುವುದು ಸಾಧ್ಯವಾಗಲಿಲ್ಲ ಪ್ರಧಾನಿಗಳೆ. ಒಪ್ಪಿಸುವುದು ಸಾಧ್ಯವೂ ಇಲ್ಲವೆನಿಸುತ್ತದೆ.

ಪ್ರಧಾನಿ : ಹಾಗಾದರೆ ಮುಂದೇನು ಗತಿ ?

ಚನ್ನಮ್ಮ : ದೈವೇಚ್ಛೆ ಹೇಗಿದೆಯೋ ಬಲ್ಲವರಾರು ?

ಪ್ರಧಾನಿ : ಈಗುದ್ಭವಿಸಿರುವ ಬಿಕ್ಕಟ್ಟನ್ನು ನಿವಾರಿಸುವ ಶಕ್ತಿ ಇರುವುದು ನಿಮಗೊಬ್ಬರಿಗೆ ಮಾತ್ರ ತಾಯಿ.

ಚನ್ನಮ್ಮ : ಇಲ್ಲ ಪ್ರಧಾನಿಗಳೇ. ನಾನು ಸಮರ್ಥಳಲ್ಲ. ನಿಶ್ಯಕ್ತಳಾಗಿದ್ದೇನೆ.

ಪ್ರಧಾನಿ : ದೊರೆಗಳು ದತ್ತಕದ ವಿಚಾರದಲ್ಲಿ ನಿರ್ಲಕ್ಷ್ಯ ತಾಳಿರುವುದಕ್ಕೆ ಏನಾದರೂ ಕಾರಣವಿರಬೇಕಲ್ಲವೆ?

ಚನ್ನಮ್ಮ : ದತ್ತುಪುತ್ರನ ಮೂಲಕವಾಗಿ ನಾನು ದೊರೆಗಳಿಂದ ಅಧಿಕಾರ ಕಿತ್ತುಕೊಂಡುಬಿಡಬಹುದೆಂಬ ಶಂಕೆ ಒಂದು, ಧರ್ಮಾವತಾರರಾದ ಪ್ರಭುಗಳು ಸ್ತ್ರೀಮೋಹಕ್ಕೊಳಗಾಗಿ ಪುಟ್ಟತಾಯಿ ಚನ್ನಿಯ ಮೊಹಜಾಲದಲ್ಲಿ ಸಿಕ್ಕು, ಅವರೇ ಇವರ ಆಪದ್ಬಂಧುಗಳೆಂದು ತಿಳಿದುಕೊಂಡಿರುವುದು ಮತ್ತೊಂದು.

ಪ್ರಧಾನಿ : ಅವರು ಏನೋ ಹೊಂಚು ಹಾಕಿರಬೇಕು.

ಚನ್ನಮ್ಮ : ಅವರಷ್ಟೇ ಏಕೆ : ಸಿಂಹಾಸನದ ಸ್ವಾಮಿನಿಷ್ಠರೆನ್ನಿಸಿಕೊಂಡವರೆಲ್ಲಾ ಪ್ರಲೊಭಕ್ಕೊಳಗಾಗಿ ಇಂದು ಸಂಚು ಹೂಡುತ್ತಿರುವರೆಂದರೆ.....

ಪ್ರಧಾನಿ : ಇದು ನಾಡಿನ ದುರ್ದೈವವೇ ಸರಿ. ದೊರೆಗಳು ದತ್ತಕವನ್ನು ನಿರಾಕರಿಸುವಲ್ಲಿ ಮಾವುತನ ಪಾತ್ರವೇನು ತಾಯಿ ?

ಚನ್ನಮ್ಮ : ಪ್ರಭುಗಳ ಮನಸ್ಸಿನಲ್ಲಿ ಅವರಿಗೆ ಮಕ್ಕಳಾಗುವ ಪ್ರಲೋಭನೆಯನ್ನು ಹುಟ್ಟಿಸಿ ಅದನ್ನು ಪೋಷಿಸಿಕೊಂಡು ಬರುತ್ತಿದ್ದಾನಂತೆ ಮಾವುತ. ಪುಟ್ಟತಾಯಿ, ಅವಳ ಮಗಳು ಚನ್ನಿಯ ಅವನ ಕಾರ್ಯಗಳಗೆ ಬೆಂಬಲವಾಗಿ ದೊರೆಗಳನ್ನು ಮರುಳುಗೊಳಿಸುತ್ತಿರುವರಂತೆ.

ಪ್ರಧಾನಿ : ವಂಶಾಭಿವೃದ್ಧಿಯಾಗುವುದಾದರೆ ಸಂತೋಷವೇ. ರಾಜ್ಯದ ಅಂಧಕಾರದಲ್ಲಿ ಅರುಣೋದಯ ಕಾಣುವುದಾದರೆ.............

ಚನ್ನಮ್ಮ : ನಿಮಗೂ ಮತಿಭ್ರಮಣೆಯೇ ಪ್ರಧಾನಿಗಳೇ ? ಪ್ರಭುಗಳ ಇಂದಿನ ದೈನ್ಯಾವಸ್ಥೆಯಲ್ಲಿ ಅದು

ಹೇಗೆ ಸಾಧ್ಯ ? ಪ್ರಭುಗಳಿಗೆ ನನ್ನು ಮೇಲೆ ವಿರಸ ಹುಟ್ಟಿಸಿ, ಅದಕ್ಕೆ ನೀರೆರೆದು ಅವರಗಳೆಲ್ಲಾ ಪ್ರೋಷಿಸಿಕೊಂಡು ಬರುತ್ತಿರುವಾಗ ದೊರೆಗಳು ಅರಮನೆಗೆ ಬರಲು ಅವಕಾಶ ಕೊಡದಿರುವಾಗ ಆ ನಿರೀಕ್ಷೆಗೆ ಬುಡವೆಲ್ಲಿದೆ?

ಮಲ್ಲಿ : ಸಂತಿನವಿಲ್ಲದೆ ಪ್ರಭುಗಳು ಶಿವೈಕ್ಯರಾದರೆ ಪಟ್ಟಬಾಧ್ಯರಿಲ್ಲದ ರಾಜ್ಯ ಸಿಂಹಾಸನವನ್ನು ತಾವು ಆಕ್ರಮಿಸಿಕೊಳ್ಳಬಹುದೆಂಬುದೆ ಮಾವುತನ ಹಂಚಿಕೆ.

ಚನ್ನಮ್ಮ : ಸಾಕು ಸುಮ್ಮನಿರು ಮಲ್ಲಿ. ಮುಂದಿನ ಆ ದುರಂತವನ್ನು ಹೇಳಬೇಡ.

ಪ್ರಧಾನಿ : ಹೊಟ್ಟೆತುಂಬಿಕೊಳ್ಳಲು ಬಂದವರದು ಪಟ್ಟ ಏರುವ ಕಸರತ್ತು ನಡೆಸಿರುವುದು ವಿಧಿವಿಲಾಸವೇ ಸರಿ.

ಚನ್ನಮ್ಮ : ಈಗ ಹೇಳಿ ಪ್ರಧಾನಿಗಳೆ. ನಮ್ಮ ಪ್ರಯತ್ನಕ್ಕೆ ಯಶಸ್ಸಿಕ್ಕೀತೆ?.... ಮಲ್ಲಿ ಒಳಗೆ ಯಾರನ್ನೂ ಬಿಡದಂತೆ ದ್ವಾರದವರಿಗೆ ತಿಳಿಸು. ಹಾಗೆ ಅರಮನೆಯ ನೌಕರರ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿಕೊಂಡು ಬಾ. ಇಂದು ಅರಮನೆಯ ಕಂಬ ಜಂತಿಗಳೂ ಕಾರಾಸ್ಥಾನ ನಡೆಸುತ್ತಿವೆ. (ಮಲ್ಲಿ ಹೋಗುವಳು)

ಪ್ರಧಾನಿ : ಕಂದಾಚಾರದ ಲಕ್ಷ್ಮಯ್ಯನವರು ಮತ್ತು ಕಾಸರಗೋಡು ತಿಮ್ಮಣ್ಣನವರು ತಮ್ಮಲ್ಲಿಗೆ ಬಂದು ಹೋದರಂತೆ.ಅವರೂ ದತ್ತಕದ ವಿಚಾರವನ್ನೆ ತಮ್ಮಲ್ಲಿ ಚರ್ಚಿಸಿರಬೇಕಷ್ಟೆ.

ಚನ್ನಮ್ಮ : ಮಹಾರಾಣಿಯ ಮೇಲೆ ಪ್ರಧಾನಿ ಗೂಢಚರ್ಯೆ?

ಪ್ರಧಾನಿ : ತಪ್ಪುತಿಳಿದುಕೊಳ್ಳಬೇಡ ತಾಯಿ . ನಿಮ್ಮ ಮೇಲಿನ ಸಂಶಯದಿಂದಲ್ಲದಿದ್ದರೂ, ಇಲ್ಲಿ ಬಂದು ಹೋಗುವವರ ಬಗ್ಗೆಯಾ..ತೂ ಅದು ಅವಶ್ಯ. ಅಲ್ಲದೆ ನಿಮಗೆ ಸೂಕ್ತ ಸಮಾರ್ಗದರ್ಶನ ನೀಡಬೇಕಾದರೆ ಅದು ಅನಿವಾರ್ಯವಾಗುತ್ತದೆ ತಾಯಿ, ಇರಲಿ ತಿಮ್ಮಣ್ಣ, ಲಕ್ಷ್ಮಯ್ಯ ಇವರ ವಿಚಾರ ಹೇಳಿ.

ಚನ್ನಮ್ಮ : ಬರುವೆ ಮಾವುತನ ದ್ರೋಹ ಚಿಂತನೆಯನ್ನು ಕಾರಣವಾಗಿಟ್ಟುಕೊಂಡು ಇವರಿಬ್ಬರೂ ಎರಡು ಪಕ್ಷಗಳಾಗಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಅದಕ್ಕಾಗಿಯೇ ಬಂದಿದ್ದರು.

ಪ್ರಧಾನಿ : ಅವರು ಏನೋ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ ಎಂಬ ಸಂಗತಿ ನನ್ನ ಗಮನಕ್ಕೆ ಬಂದಿತ್ತು, ಆದರೆ...ಇರಲಿ. ಏನಾದರೂ ಸಲಹೆ ನೀಡಿದರೆ ?

ಚನ್ನಮ್ಮ : ಸಲಹೆಯ ರೂಪದಲ್ಲಿ ಒತ್ತಡ ಹೇರಿದರು ಎಂದರೂ ತಪ್ಪಲ್ಲ. ಅವರ ಹಸ್ತಕರನ್ನು ರಾಜ್ಯಕ್ಕೆ ಹಕ್ಕುದಾರರನ್ನಾಗಿ ಮಾಡಬೇಕೆಂಬ ಅವರ ಮನದಿಂಗಿತವನ್ನು ಮುಂದಿಟ್ಟರು.

ಪ್ರಧಾನಿ : ರಾಜ್ಯದ ಹಿತಕ್ಕೆ ಇದೂ ಕೂಡ ಅಪಾಯಕಾರಿಯೆ. ಲಕ್ಷ್ಮಯ್ಯನವರು ಬಂದು ಹೋದ ನಂತರ ಅದನ್ನು ತಿಳಿದು ತಿಮ್ಮಣ್ಣನವರು ಇಲ್ಲಿಗೆ ಚಿತ್ತೈಸಿರಬೇಕು.

ಚನ್ನಮ್ಮ : ಇರಬಹುದು. ಲಕ್ಷ್ಮಯ್ಯನವರು ಗಡಿಪಾರಾಗಿ ಹೊಸಂಗಡಿಯಲ್ಲಿರುವ ಅಂಧಕ ವೆಂಕಟಯ್ಯನ ಮಗನನ್ನು ದತ್ತು ಸ್ವೀಕರಿಸಲು ಸೂಚಿಸಿದರು. ಅವರಿಗೆ ಬೆಂಬಲವಾಗಿ ಹಳೆಪೈಕದ ವೀರಭದ್ರಯ್ಯ, ಮರಿಬೋವಿ ಇದ್ದಾರಂತೆ.

ಪ್ರಧಾನಿ : ಜಾತಪ್ಪನ ಭದ್ರಪ್ಪನ ಮಗ ವೀರಭದ್ರನಾಯಕನ ಹೆಸರನ್ನು ತಿಮ್ಮಣ್ಣನವರು ಸೂಚಿಸಿರಬೇಕು. ಸುಬ್ಬನೀಸ ಕೃಷ್ಣಯ್ಯನವರು ಅವರೊಂದಿಗೆ ಸೇರಿಕೊಂಡಿದ್ದಾರೆ.

ಚನ್ನಮ್ಮ : ಅವರದು ಕೇವಲ ಸೂಚನೆಯಾಗಿಲಿಲ್ಲ, ವೀರಭದ್ರನಾಯಕರನ್ನೇ ದತ್ತಕ ತೆಗೆದುಕೊಳ್ಳಬೇಕೆಂಬ ಹಕ್ಕೊತ್ತಾಯವಾಗಿತ್ತು.

ಪ್ರಧಾನಿ : ಅವರಿಬ್ಬರೂ ರಾಜ ಸಂಬಂಧಿಯಾಗಿರುವುದರಿಂದ ಅವರಲ್ಲಿ ಒಬ್ಬರನ್ನು ದತ್ತು ತೆಗೆದುಕೊಳ್ಳುವುದರಲ್ಲಿ ತಪ್ಪೇನು ತಾಯಿ?

ಚನ್ನಮ್ಮ : ನೀವು ಯಾವುದಾದರೂ ಒಂದು ಪಕ್ಷವನ್ನು ವಹಿಸಿದ್ದೀರೋ ಹೇಗೆ ಪ್ರಧಾನಿಗಳೇ?

ಪ್ರಧಾನಿ : ಸಹಜವಾಗಿ ಜನ ವ್ಯಕ್ತಪಡಿಸಬಹುದಾದ ವಿಚಾರ ಹೇಳಿದೆ ತಾಯಿ. ತಪ್ಪು ತಿಳಿಯಬೇಡಿ.

ಚನ್ನಮ್ಮ : ಈಗ ಯಾವ ಸೂತ್ರ ಜಗ್ಗಿದರೂ ಅಪಾಯ ತಪ್ಪಿದ್ದಲ್ಲ ಪ್ರಧಾನಿಗಳೆ. ಒಂದು ಒಲಿದರೆ ಮತ್ತೊಂದರ ದ್ವೇಷ ಶತಃಸಿದ್ಧ. ಇದಲ್ಲದೇ ಬರುವ ಮಾವುತನ ಮೂರನೇ ಬಣ.

ಪ್ರಧಾನಿ : ಹಾಗೇ ನಿಮ್ಮ ಮೈದುನರಾದ ಬಸವಲಿಂಗ ನಾಯಕರು ಕೂಡ ಸಿಂಹಾಸನಕ್ಕಾಗಿ ಬಂಡೇಳುವ ಸನ್ನಾಹದಲ್ಲಿದ್ದಾರೆಂದು ಸುದ್ದಿ.

ಚನ್ನಮ್ಮ : ಏನು ?

ಪ್ರಧಾನಿ : ಹೌದು ತಾಯಿ..

ಚನ್ನಮ್ಮ : ವಿಪತ್ಪರಂಪರೆಗಳೆಲ್ಲ ಇಕ್ಕೇರಿಯ ಅರಸೊತ್ತಿಗೆಯ ಸುತ್ತ ವ್ಯೂಹ ಕಟ್ಟಿ ನಿಂತಿರುವಂತಿದೆ. ಈಗ ನಾವು ಹೇಗೆ ನಡೆದುಕೊಂಡರೆ ಈ ಸಂದಿಗ್ಧದಿಂದ ಪಾರಾದೇವೋ ತಿಳಿಯದು.

ಪ್ರಧಾನಿ : ದತ್ತಕದ ವಿಷಯವನ್ನು ತೀರ್ಮಾನಿಸದೆ ಯಾವುದನ್ನೂ ಬಗೆಹರಿಸಲಾಗದು ತಾಯಿ. ಅರಸೊತ್ತಿಗೆಯ ವಾರಸುದಾರಿಕೆಯ ವಿಚಾರ. ಅಂತಿಮಗೊಳಿಸದಿದ್ದಲ್ಲಿ ಇಕ್ಕೇರಿಯಲ್ಲಿ ರಕ್ತದ ಪ್ರವಾಹವೇ ಹರಿಯಬಹುದು.

ಚನ್ನಮ್ಮ : ದತ್ತುಸ್ವೀಕಾರ ಈ ಸ್ಥಿತಿಯಲ್ಲಿ ಹೇಗೆ ಸಾಧ್ಯ ಯಾರನ್ನು ಸ್ವೀಕರಿಸಬಹುದು ? ನನಗಂತೂ ಈ ಗೊಂದಲ ಸಾಕುಸಾಕಾಗಿಹೋಗಿದೆ. ಒಂದು ಕ್ಷಣ ಮನಸ್ಸಿಗೆ ನೆಮ್ಮದಿಯಿಲ್ಲ. ಯಾರಾದರೂ ರಾಜ್ಯವಾಳಿಕೊಳ್ಳಲಿ ಈ ವಿಷಪೂರಿತ ವಾತಾವರಣದಿಂದ ದೂರ ಬಹುದೂರ ಸಾಗಿಹೋಗಬೇಕೆನಿಸುತ್ತದೆ.

ಪ್ರಧಾನಿ : ಇದೇನು ತಾಯಿ ನಿಮ್ಮ ಯೋಚನೆ ? ರಾಜ್ಯವನ್ನು ಸಂಕಟದ ದವಡೆಗೆ ನೂಕಿ ಪ್ರಜರನ್ನು ಅನಾಥರನ್ನಾಗಿ ಮಾಡಿ ಹೋಗುವಿರಾ ?

ಚನ್ನಮ್ಮ : ಈಗ ನಡೆದಿರುವ ಗೊಂದಲ ಮನಸ್ಸಿಗೆ ರೇಜಿಗೆ ಹುಟ್ಟಿಸಿ ಹಾಗೆ ಹೇಳುವಂತಾಗಿದೆ.

ಪ್ರಧಾನಿ : ಈಗ ನೀವು ಧೈರ್ಯದಿಂದಿರಬೇಕು ತಾಯಿ. ಬಂದೊದಗಿದ ಎಡರುಗಳನ್ನು ಬುದ್ಧಿವಂತಿಕೆಯಿಂದ ಪರಿಹರಿಸಿಕೊಳ್ಳಬೇಕು.

ಚನ್ನಮ್ಮ : ನೀವು ಹೇಗೆ ಸಲಹೆ ನೀಡುತ್ತೀರೋ ಹಾಗೆ ನಡೆದುಕೊಳ್ಳುತ್ತೇನೆ. ನೀವು ಸಿಂಹಾಸನದ ನಿಷ್ಠ ಸೇವಕರು. ಒಟ್ಟಿನಲ್ಲಿ ರಾಜ್ಯ ನಿಷ್ಕಂಟಕವಾದರೆ ಸಾಕು.

ಪ್ರಧಾನಿ : ನಾನೊಂದು ಸೂಚನೆಯನ್ನು ನೀಡುತ್ತೇನೆ. ನಿಮಗೆ ಸರಿಯೆನಿಸಿದರೆ ಒಪ್ಪಿಕೊಳ್ಳಬಹುದು.

ಚನ್ನಮ್ಮ : ಅದೇನು ಹೇಳಿ ಪ್ರಧಾನಿಗಳೆ

ಪ್ರಧಾನಿ : ಲಕ್ಷ್ಮಯ್ಯ, ತಿಮ್ಮಣ್ಣ ಇವರಿಬ್ಬರ ಸೂಚನೆಗಳನ್ನು ಬದಿಗಿರಿಸಿರಿ. ಎರಡೂ ಬಣಕ್ಕೆ ಸೇರದ ನಿಮಗೊಪ್ಪಿಗೆ ಯಾದವರೊಬ್ಬರನ್ನು ಆಯ್ಕೆ ಮಾಡಿಕೊಳ್ಳಿ

ಚನ್ನಮ್ಮ : ಪ್ರಭುಗಳ ಒಪ್ಪಿಗೆಯನ್ನು ದೊರಕಿಸಿಕೊಳ್ಳುವ ಬಗೆ ಹೇಗೆ ?

ಪ್ರಧಾನಿ : ದೊರೆಗಳು ಈ ಕುತ್ತಿನಿಂದಂತೂ ಪಾರಾಗುವುದಿಲ್ಲ. ಅವರ ಜೀವಿತ ಇನ್ನೆಷ್ಟು ದಿನಗಳೋ ತಿಳಿಯದು. ದತ್ತಕದ ವಿಚಾರ ಪರಿಹಾರಗೊಳ್ಳದಿದ್ದರೆ, ರಾಜ್ಯವನ್ನು ಆವರಿಸಿರುವ ವಿಪತ್ತಿನ ದಟ್ಟತೆ ತೀವ್ರವಾಗಬಹುದು. ಮತಿಭ್ರಮಣರಾದಂತಿರುವ ದೊರೆಗಳನ್ನು ಬದಿಗಿಟ್ಟು ಮಹಾರಾಣಿಯವರಾದ ತಾವೇ ಒಂದು ತೀರ್ಮಾನಕ್ಕೆ ಬರುವುದು ಲೇಸೆಂದು ನನ್ನ ಅನಿಸಿಕೆ.

ಚನ್ನಮ್ಮ : ದೊರೆಗಳನ್ನು ಬದಿಗಿಟ್ಟು........

ಪ್ರಧಾನಿ : ಅದು ಅನಿವಾರ್ಯ. ರಾಜ್ಯದ ಹಿತದೃಷ್ಟಿಯಿಂದ...ನೀವು ದಿಟ್ಟ ನಿರ್ಧಾರ ತೆಗೆದುಕೊಳ್ಳಲೇ ಬೇಕು. ಇಲ್ಲವಾದರೆ ರಾಜ್ಯ ನುಚ್ಚುನೂರಾದೀತು. ನೀವು ಮುಂದಡಿ ಇಡಿ. ನಾನು ಸದಾ ನಿಮ್ಮ ಬೆಬಲಕ್ಕಿದ್ದೇನೆ. ಯಾವುದಕ್ಕೂ ಬೇಗ ಒಂದು ನಿರ್ಧಾರಕ್ಕೆ ಬನ್ನಿ (ಸ್ವಲ್ಪ ಸುಮ್ಮನಿರುವನು.

ಚನ್ನಮ್ಮ ಕೂಡ ಮೌನ ಚಿಂತನೆಯಲ್ಲಿ ತೊಡಗಿದ್ದಾಳೆ.) ತಾಯಿ ನಾನಿನ್ನು ಹೊರಡುತ್ತೇನೆ. ಅಪ್ಪಣೆ ಕೊಡಿ. (ನಿಷ್ಕ್ರಮಿಸುವನು)

(ಬಸವಲಿಂಗನಾಕನ ಪ್ರವೇಶ. ಮಹಾರಾಣಿಗೆ ನಮಸ್ಕರಿಸುವನು)

ಚನ್ನಮ್ಮ : ಬನ್ನಿ ಬನ್ನಿ ಬಸವಲಿಂಗನಾಯಕರೆ. ನಿಮ್ಮ ದರ್ಶನ ಲಾಭವಿಲ್ಲದೆ ಬಹಳ ದಿವಸಗಳಾದವು. ಇಂದು ಆ ಭಾಗ್ಯ ಲಭಿಸಿತು. ಕುಳಿತುಕೊಳ್ಳಿ. (ಬಸವಲಿಂಗನಾಯಕ ಆಸನವೊಂದರಲ್ಲಿ ಕುಳಿತುಕೊಳ್ಳುವನು) ನಾಯಕರು ಕಾರಣವಿಲ್ಲದೆ ಆಗಮಿಸಲಾರರೆಂದುಕೊಳ್ಳುತ್ತೇವೆ.

ಬ.ನಾಯಕ : ಹುಂ. ಸುಮ್ಮ ಸುಮ್ಮನೆ ಬಂದು ನಿಮಗೆ ತೊಂದರೆ ಕೊಡುವುದೇಕೆ ಮಹಾರಾಣಿ. ಅಗತ್ಯ ಬಿದ್ದಾಗ ಬರಲೇಬೇಕಲ್ಲ.

ಚನ್ನಮ್ಮ : ನೀವು ಬಂದಾಗಲೆ ಯಾವುದಾದರೂ ಉದ್ದೇಶವಿರಬೇಕೆಂದುಕೊಂಡೆ ಹುಂ ಹೇಳಿ.

ಬ.ನಾಯಕ : ಪ್ರಧಾನಿಗಳು ಇದೇತಾನೆ ಬಂದು ಹೋದಂತಿದೆ.

ಚನ್ನಮ್ಮ : ಬರಬೇಕೆನಿಸಿದರು ಬರುತ್ತಾರೆ. ಹೋಗುತ್ತಾರೆ. ಈಗ ನೀವು ಬಂದಿಲ್ಲವೆ ?

ಬ.ನಾಯಕ : ಪ್ರಧಾನಿಗಳು ಏನನ್ನಾದರೂ ಹೇಳಿರಬೇಕಲ್ಲ.

ಚನ್ನಮ್ಮ : ಬಂದವರು ಏನಾದರೂ ಹೇಳುತ್ತಾರೆ. ನೀವೂ ಸಹ ಏನನ್ನೋ ಹೇಳುವ ಉದ್ದೇಶವಿಟ್ಟುಕೊಂಡೇ ಬಂದಂತಿದೆ.

ಬ.ನಾಯಕ : ಹೌದು ಅದು ಪ್ರಧಾನಿಯವರು ನಿಮ್ಮೊಡನೆ ಚರ್ಚಿಸಿದ ವಿಷಯವೇ. ಮನದ ಗೊಂದಲವನ್ನು ಪರಿಹರಿಸಿಕೊಳ್ಳ ಬರಬೇಕಾಯಿತು.

ಚನ್ನಮ್ಮ : ಗೊಂದಲ ! ಅದು ನೀವಾಗಿ ಹುಟ್ಟುಹಾಕಿಕೊಂಡುದೋ ಅಥವಾ ಹೊರಗಿನಿಂದ ಎದುರಾದುದೊ? ಹೊರಗಿನಿಂದ ಎದುರಾದುದಾದರೆ ನಮಗೆ ತಿಳಿದಿರಬೇಕಾಗಿತ್ತು.

ಬ.ನಾಯಕ : ಎರಡೂ ಎಂದು ಬೇಕಾದರೆ ಭಾವಿಸಿಕೊಳ್ಳಿ. ಇದು ಹೆಚ್ಚಾಗಿ ಹೊರಗಿನಿಂದಲೇ ಬಂದುದು. ನಿಮಗೂ ಗೊತ್ತಿರದ್ದೇನಲ್ಲ. ಆದರೂ ನಾನು ನನ್ನ ಮನದ ಭಾವನೆಗಳನ್ನು ತಮ್ಮ ಮುಂದೆ ಹೇಳಲೇಬೇಕಾಗಿದೆ.

ಚನ್ನಮ್ಮ : ಹೇಳಿ ಹೇಳಿ ಹೇಳಿ ಬೇಗುದಿಯನ್ನು ಕಳೆದುಕೊಳ್ಳಿ.

ಬ.ನಾಯಕ : ದೊರೆ ಸೋಮಶೇಖರನಾಯಕರು ಅನಾರೋಗ್ಯಪೀಡಿತರಾಗಿ ಹಾಸಿಗೆ ಹಿಡಿದ ಲಾಗಾಯ್ತಿನಿಂದ ರಾಜ್ಯಕ್ಕೆ ಕೆಟಟ ಗ್ರಹಪೀಡೆ ಪ್ರಾರಂಭವಾದಂತಿದೆ.

ಚನ್ನಮ್ಮ : ಅಂದರೆ?

ಬ. ನಾಯಕ : ರಾಜ್ಯವನ್ನು ಕಬಳಿಸಲು ಹಲವರು ಪ್ರಯತ್ನಿಸುತ್ತಿದ್ದಾರೆಂದು ಸುದ್ದಿಗಳು ಬರುತ್ತಿವೆ.

ಚನ್ನಮ್ಮ : ನಿಜ. ಅದು ನಮುಗೂ ಗೊತ್ತು. ಆದರೆ ಅದರಿಂದ ವಿಚಲಿತರಾಗುವವರಂತೂ ನೀವಲ್ಲ. ಯಾವ ಹೊಣೆಗಾರಿಕೆಯನ್ನೂ ನೀವು ಹೊತ್ತುಕೊಂಡಿಲ್ಲ

ಬ.ನಾಯಕ : ಏಕೆ ಮಹಾರಾಣಿಯವರೆ! ನನಗೆ ಹೊಣೆಗಾರಿಕೆಯಿಲ್ಲವೆ? ಅರಮನೆಯ ರಾಜಪರಿವಾರದವರಲ್ಲಿ ನಾನೂ ಒಬ್ಬನಲ್ಲವೆ? ಅದರಲ್ಲೂ ಹತ್ತಿರದವನು...

ಚನ್ನಮ್ಮ : ಹತ್ತಿರದವರು !....

ಬ.ನಾಯಕ : ಅಲ್ಲವೆ? ನಿಮ್ಮ ಮೈದುನನಲ್ಲವೆ?

ಚನ್ನಮ್ಮ : ಪೀಠಿಕೆ ಚೆನ್ನಾಗಿದೆ........

ಬ.ನಾಯಕ : ಸುತ್ತು ಬಳಸಿ ಮಾತನಾಡಿ ಪ್ರಯೋಜನವೇನು ಮಹಾರಾಣಿ. ನೇರವಾಗಿ ನಿಮ್ಮೊಂದಿಗೆ ವಿಷಯ ಪ್ರಸ್ತಾಪಿಸೋಣವೆಂದೇ ಇಲ್ಲಿಗೆ ಬಂದೆ

ಚನ್ನಮ್ಮ : ಹೇಳಿ ಹೇಳಿ ಈಗ ಎಲ್ಲರೂ ನನಗೆ ಹೇಳುವವರೆ ಒತ್ತಡ ಹೇರುವವರೆ ಆಗಿದ್ದಾರೆ.

ಬ.ನಾಯಕ : ನೋಡಿ ಮಹಾರಾಣಿ , ನಾಯಕರು ರೋಗಪಿಡಿತರಾಗಿ ಹಾಸಿಗೆ ಹಿಡಿದಿದ್ದಾರೆ. ಅವರು

ಆರೋಗ್ಯ ಸುಧಾರಿಸಿಕೊಂಡು ರಾಜಸೂತ್ರಗಳನ್ನು ಹಿಡಿಯುವುದಂತು ಸಾಧ್ಯವಿಲ್ಲದ ಮಾತು. ಸಂತಾನವಿಲ್ಲದ್ದರಿಂದ ಸಿಂಹಾಸನಕ್ಕೆ ವಾರಸುದಾರರಿಲ್ಲವಾಗಿದೆ. ಉತ್ತರಾಧಿಕಾರಿಯಿಲ್ಲದ ರಾಜ್ಯವನ್ನು ಕಬಳಿಸಲು ನಾಲ್ಕು ದಿಕ್ಕಿನಿಂದಲೂ ರಾಜ್ಯದಾಹಿಗಳು ಹೊಂಚು ಹಾಕುತ್ತಿದ್ದಾರೆ.

ಚನ್ನಮ್ಮ : ಅದರಲ್ಲಿ ನೀವು ಒಬ್ಬರೇನು ?

ಬ.ನಾಯಕ : (ಸಿಟ್ಟಿನಿಂದ) ಏಕೆ ಮಹಾರಾಣಿಯವರೆ? ನನ್ನನ್ನು ಹೆರವರ ಸಾಲಿಗೆ ಸೇರಿಸಿಬಿಟ್ಟಿರಿ. ಈ ರಾಜ್ಯ ನಮ್ಮ ವಂಶಜರು ಕಟ್ಟಿ ಬೆಳೆಸಿದುದು. ಇದು ವಾರಸುದಾರರಿಲ್ಲವೆಂಬ ಕಾರಣದಿಂದ ಯಾರದೋ ಪಾಲಾಗುವುದು ನಿಮಗೆ ಸಮ್ಮತವೆ?

ಚನ್ನಮ್ಮ : ಈ ರಾಜ್ಯದ ಸಿಂಹಾಸನದ ಮೇಲೆ ನಿಮ್ಮ ಹಕ್ಕುದಾರಿಕೆಯನ್ನು ಮಂಡಿಸುತ್ತಿದ್ದೀರಲ್ಲವೆ ?

ಬ.ನಾಯಕ : ನ್ಯಾಯವಾದುದು ತಾನೆ! ದೊರೆಗಳ ಸೋದರ ಸಂಬಂಧದಲ್ಲಿ ಇರುವುದು ನಾನೊಬ್ಬನೆ. ನಾನು ಸಿಂಹಾಸನದ ವಾರಸುದಾರ ತಾನೆ ‍: ಸಹಜವಲ್ಲವೆ ?

ಚನ್ನಮ್ಮ : ಹೌದು ಆಗುತ್ತೀರಿ. ಆದರೆ ಅದಕ್ಕೆ ಯೋಗ್ಯತೆಯೂ ಬೇಕಲ್ಲವೆ ? ಯಾರದೋ ಪಿತೂರಿಯಂದ ಈಗ ಹಕ್ಕಿಯಾಗಿ ಎದ್ದ ನಿಂತರೆ ಈವರೆಗೆ ಈ ರಾಜ್ಯಕ್ಕಾಗಿ ಯಾವ ಘನ ಕಾರ್ಯ ಮಾಡುತಿದ್ದೀರಿ ಯಾವ ಹೊಣೆಗಾರಿಕೆಯನ್ನು ನಿರ್ವಹಿಸಿದ್ದೀರಿ ? ಏನಾದರೂ ನಿರ್ವಹಣೆ ಇದೆಯೇ ಹೇಳೀ. ಈಗ ಹಕ್ಕೆನ್ನು ಮಂಡಿಸಿದರೆ........

ಬ.ನಾಯಕ : ಮಹಾರಾಣಿ ಇಲ್ಲಿ ನಾನು ಮಾತು ಬೆಳೆಸಲು ಬಂದಿಲ್ಲ. ಸರಸ ಸಂಭಾಷಣೆಗಾಗಿಯೂ ಬಂದಿಲ್ಲ, ನಿಜ ಹಕ್ಕು ಸಾಧಿಸಲು ಬಂದಿದ್ದೇನೆ.

ಚನ್ನಮ್ಮ : ಹಕ್ಕನ್ನು ನಿರಾಕರಿಸಿದರೆ........

ಬ.ನಾಯಕ : ಅದಕ್ಕೆ ಬೆಲೆ ತೆರಬೇಕಾಗುತ್ತದೆ. ಈ ಗದ್ದುಗೆ ವಾರಸುದಾರಿಕೆ ಆಧಾರದಲ್ಲಿ ನಮಗೆ ಸೇರಬೇಕಾದುದು ವಾರಸುದಾರ ನಾನೆ. ನನ್ನದಾದುದನ್ನು ನಾನು ಪಡೆದೇ ತೀರುತ್ತೇನೆ.

ಚನ್ನಮ್ಮ : ಹೆದರಿಸುತ್ತಿದ್ದೀರಿ........

ಬ.ನಾಯಕ : ಇಲ್ಲ, ವಿಷಯ ಗಂಭೀರ ಹಂತದಲ್ಲಿರುವುದರಿಂದ ಎಚ್ಚರಿಸುತ್ತಿದ್ದೇನೆ. ವಾರಸುದಾರಿಕೆಯ ವಿಷಯ ಬಗೆಹರಿಯದೇ ಸಿಂಹಾಸನದ ಸುತ್ತ ಹೆಣೆದುಕೊಂಡಿರುವ ವ್ಯೂಹ ಹರಿಯುವುದಿಲ್ಲ. ಅದಕ್ಕೆ ಹಾಂ...ನೀವು ಬೇರೆ ಯಾರನ್ನಾದರೂ ದತ್ತು ತೆಗೆದುಕೊಳ್ಳುವ ಮೂಲಕ ಈ ವಿಚಾರವನ್ನು ಬಗೆಹರಿಸುವ ಇರಾದೆ ಹೊಂದಿದ್ದರೆ ಅದನ್ನು ಮರೆತುಬಿಡಿ. ವರಸುದಾರ ನಾನು...ನಾನಿದ್ದೇನೆಂಬುದನ್ನು ನೆನಪಿನಲ್ಲಿಡಿ. ದತ್ತಕ್ಕೆ-ರಾಜ್ಯಾಭಿಷೇಕಕ್ಕೆ ದಿನಾಂಕ ನಿಗದಿ ಪಡಿಸಿ. ಇಷ್ಟೆ ನಾನು ನಿಮಗೆ ಹೇಳಬೇಕೆಂದಿರುವುದು. ಇನ್ನು ಮುಂದಿನ ವಿಚಾರ ನಿಮಗೆ ಸೇರಿದುದು. ನಾನಂತೂ ಏನಕೇನ ನನ್ನ ಹಕ್ಕನ್ನು ಪಡೆದೇ ತಿರುತ್ತೇನೆ. ಬರುತ್ತೇನೆ. (ದಾಪುಗಾಲು ಹಾಕುತ್ತಾ ನಿಷ್ಕ್ರಮಿಸುವನು)

-ತೆರೆ -

ಪ್ರವೇಶ 8

ರಸ್ತೆ ಹಾಡುಗಾರರು ಪ್ರವೇಶಿಸುವರು

ಇಬ್ಬರೂ : ದೊರೆಗಳು ಸೆರೆಯಾದರೋ
ಮಾವುತನ ಕೈಲಿ
ಆಟದ ಗೊಂಬೆಯಾದರೋ॥
ರಾಜ್ಯಭಾರವ ತೊರೆದು
ರಾಣಿವಾಸವ ಮರೆದು

ಸೂಳೆಯ ಬಂಧಿಯಾದರೋ, ಶಿವ ಶಿವ।
ರೋಗಾದ ಗೂಡಾದರೋ॥
ರೋಗದಿ ಬಳಲುತ ಹಾಸಿಗೆ ಹಿಡಿದಿಹರೋ ॥

ಒಬ್ಬ : ನೊಡ್ರಪ್ಪ! ಎಂತ ರಾಜ ಹೇಗಾಗಿಬಿಟ್ಟ. ಇದಕ್ಕೆ ವಿಧಿಬರಹ ಅನ್ನುತಾರೇನೋ.

ಇನ್ನೊಬ್ಬ : ಭುಜಬಲಪರಾಕ್ರಮಿ, ವೈರಿಗಣ ಶಾರ್ದೂಲ, ಬಹುಧೀರ, ಗುಣಶೀಲ, ಹೇಗೆ ಆಗಿಹೋದ...

ಇಬ್ಬರೂ : ಆರಮನೆ ಮರೆತಿಹರೋ
ಸೂಳೆಯ ಮನೆಯಲಿ
ಸಾವಿನ ದಿನಗಳ ಎಣಿಕೆಯ ಹಾಕುತ
ಹಾಸಿಗೆ ಹಿಡಿದಿಹರೋ, ಹೇಸಿಗೆ ಬಾಳಿದರೋ॥
ರಾಜ್ಯವನ್ನು ಅನಾಯಕ ಮಾಡಿ ಹೋಗುತ್ತಿದ್ದಾರಲ್ಲಪ್ಪ (ನಿಷ್ಕ್ರಮಣ)

ಪ್ರವೇಶ 9

(ಬರುವೆ ಮಾವುತ ಅತ್ತಿಂದಿತ್ತ, ಇತ್ತಿಂದಿತ್ತ ಆಲೋಚನೆಯಲ್ಲಿ ಶತಪಥ ಹಾಕುತ್ತಿರುವನು ಮಧ್ಯೆ ಮಧ್ಯೆ ನಿಂತು ತೆರೆಯ ಕಡೆ ನೋಡುವನು. ಭಟನೊಬ್ಬನೊಂದಿಗೆ ದಳವಾಯಿ ಸೋಮಣ್ಣ ಪ್ರವೇಶಿಸುವನು)

ದ.ಸೋ : (ಬರುವೆ ಮಾವುತನನ್ನು ನೋಡಿ) ದೊರೆಗಳನ್ನು ನೋಡಲು ಹೇಳಿ ಕಳಿಸಿದಿರಂತೆ. ಭಟ ಬಂದು ಹೇಳುತ್ತಲೇ ಧಾವಿಸಿ ಬಂದೆ. ಪ್ರಭುಗಳನ್ನು ನೋಡಬಹುದೆ?

ಬ.ಮಾವುತ : ಪ್ರಭುಗಳನ್ನು ನೋಡಬೇಕಾಗಿಲ್ಲ ಸೋಮಣ್ಣನವರೆ ಅವರ ಅಪೇಕ್ಷೆಯನ್ನು ನಾನೇ ನಿಮಗೆ ತಿಳಿಸುತ್ತೇನೆ. ನೀವು ಏನು ಪುಣ್ಯಮಾಡಿದ್ದಿರೋ ನಿಮಗೆ ಉನ್ನತ ಹುದ್ದೆಗೆ ಬಡ್ತಿ ಸಿಕ್ಕಲಿದೆ.

ದ.ಸೋ. : ಏನು? ಉನ್ನತ ಹುದ್ದೆ ! ಬಡ್ತಿ..ಏನು ಹೇಳುತ್ತಿರುವಿರಿ ಮಾವುತರೇ? ನನಗೊಂದೂ ಅರ್ಥವಾಗುತ್ತಿಲ್ಲ.

ಬ.ಮಾವುತ : ತಾಳಿ ಸೋಮಣ್ಣ ಎಲ್ಲ ನಿಧಾನವಾಗಿ ಅರ್ಥವಾಗುತ್ತೆ. ನಾನು ಹೇಳುವುದನ್ನು ಗಮನವಿಟ್ಟು ಕೇಳಿ ಎಲ್ಲ ತನ್ನಿಂದ ತಾನೆ ಅರ್ಥವಾಗುವುದು. ನೀವು ಉನ್ನತಿಗೇರುವುದು ನಿಮ್ಮ ಮನಸ್ಸವಲಂಬಿಸಿದೆ.

ದ.ಸೋ. : (ಸಂಶಯದಿಂದ) ಏನೇಂದು ಹೇಳಿ ಮಾವುತರೆ ನಾವೇನು ಮಾಡಬೇಕು..

ಬ.ಮಾವುತ : ಹೇಳುತ್ತೇನೆ, ಹೇಳುತ್ತೇನೆ. ಉದ್ವೇಗಗೊಳ್ಳಬೇಡಿ. ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಿ... ಪ್ರಭುಗಳ ಒಲವು ನಿಮ್ಮತ್ತ ಹರಿದಿದೆ. ನಿಮಗೆ ಸೈನ್ಯದಲ್ಲಿ ಉನ್ನತ ಹುದ್ದೆಯನ್ನು ನೀಡಲು ದೊರೆಗಳು ತೀರ್ಮಾನಿಸಿದ್ದಾರೆ. ಆದರೆ....

ದ.ಸೋ. : ಆದರೆ ?....

ಬ.ಮಾವುತ : ದೊರೆಗಳ ಒಂದು ಅಪೇಕ್ಷೆಯನ್ನು ನೀವು ನೆರವೇರಿಸಿ ಕೊಡಬೇಕು.

ದ.ಸೋ : ದೊರೆಗಳ ಅಪೇಕ್ಷೆ....ಏನದು?

ಬ.ಮಾವುತ : ದೊರೆಗಳಿಗೆ ನಿಮ್ಮ ಪತ್ನಿ ಪದ್ಮಾವತಿಯ ಮೇಲೆ...

ದ.ಸೋ : ಪದ್ಮಾವತಿಯ ಮೇಲೆ

ಬ.ಮಾವುತ : ಅನುರಾಗವುಂಟಾಗಿದೆ. ನೀವು ದೊರೆಗಳ ಅಪೇಕ್ಷೆಯನ್ನು ಈಡೇರಿಸಿದರೆ ನಿಮಗೆ ಉನ್ನತ ಹುದ್ದೆ, ಭೋಗಭಾಗ್ಯ....

ದ.ಸೋ. : ಪರಹೆಣ್ಣಿನ ವ್ಯಾಮೋಹ ದೊರೆಗಳಿಗೆ ಯಾವಾಗಿನಿಂದ ಅಂಟಿಕೊಂಡಿತು? ಮೊದಲು ಅವರು ಹಾಗಿರಲಿಲ್ಲ. ಪರಹೆಂಗಸರ ಕಡೆ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ.

ಬ.ಮಾವುತ : ಅದೆಲ್ಲ ನನಗೆ ತಿಳಿಯದು. ದೊರೆಗಳ ಅಪ್ಪಣೆಯನ್ನಷ್ಟೆ ನೆರವೇರಿಸುವ ಸೇವಕ ನಾನು.

ದ.ಸೋ. : ಅಧಿಕಾರ, ಅಂತಸ್ತು, ಸಂಪತ್ತುಗಳಿಗಾಗಿ ಅಗ್ನಿಸಾಕ್ಷಿಯಾಗಿ ಕೈಹಿಡಿದ ಹೆಂಡತಿಯನ್ನು ಹೆರವರ

ಭೋಗಕೊಪ್ಪಿಸುವ ಚರಿತ್ರಹೀನನಲ್ಲ ನಾನು.

ಬ.ಮಾವುತ : ಚರಿತ್ರೆ, ಇತಿಹಾಸ, ಪುರಾಣ ಇವು ಯಾವುವೂ ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವುದು ಅರಸರ ಅಪ್ಪಣೆಯನ್ನು ನೆರವೇರಿಸುವುದು.

ದ.ಸೋ : ನಿಮ್ಮ ದೊರೆಗಳ ಮನೋಗತವನ್ನು ನೆರವೇರಿಸಲು ನಾನು ಸಿದ್ಧನಿಲ್ಲ.

ಬ.ಮಾವುತ : ಅರಸರ ಆಜ್ಞೆಯನ್ನು ಧಿಕ್ಕರಿಸುವಿರಾ?

ದ.ಸೋ : ಅದು ನೀತಿಬಾಹಿರವಾದುದರಿಂದ...

ಬ.ಮಾವುತ : ಸೋಮಣ್ಣ ನಿಧಾನವಾಗಿ ಯೋಚಿಸಿ ನೋಡಿ... ಇದರ ಪರಿಣಾಮವೇನು ಚಿಂತಿಸಿರಿ.

ದ.ಸೋ. : ಇದರಲ್ಲಿ ಚಿಂತಿಸಬೇಕಾದ ವಿಚಾರವೇನಿದೆ?

ಬ.ಮಾವುತ : ಯೋಚಿಸಿರಿ. ಇಲ್ಲವೆ..? ದೊರೆಗಳ ಮನದಿಂಗಿತ ನೆರವೇರಲೇಬೇಕು. ಅದಕ್ಕೆ ವಿರುದ್ಧವಾಗಿ ನೀವು ಹೋದರೆ ಅದು ರಾಜದ್ರೋಹ.

ದ.ಸೋ. : ಅನ್ಯಾಯದ ಕೋರಿಕೆಯನ್ನು ತಿರಸ್ಕರಿಸಿದರೆ ಅದು ರಾಜದ್ರೋಹ ಹೇಗಾದೀತು?

ಬ.ಮಾವುತ : ರಾಜರ ಮಾತನ್ನು ಉಲ್ಲಂಘಿಸುವುದು ರಾಜದ್ರೋಹವಲ್ಲವೆ? ಅಲ್ಲದೆ ದಳವಾಯಿಗಳೆ, ನಿಮಗೆ ಈಗಿರುವುದಕ್ಕಿಂತ ಹೆಚ್ಚಿನ ಅಂತಸ್ತು , ಹಣ ಬೇಡವಾದರೂ ನಿಮಗೆ ಜೀವನ ಬೇಕಲ್ಲವೆ? ನಿಮ್ಮ-ನಿಮ್ಮ ಹೆಂಡತಿಯ ಜೀವನ ಮುರಿದು ಮೂರಾಬಟ್ಟೆಯಾಗಬಾರದಲ್ಲವೆ? ರಾಜರ ಆಜ್ಞೆಗೆ ವಿರುದ್ಧ ಹೋದರೆ ತಲೆದಂಡ. ಗೊತ್ತಲ್ಲ.

ದ.ಸೋ : ಏನು ಹೆದರಿಸುತ್ತಿರುವಿರ ?

ಬ.ಮಾವುತ : ಇಲ್ಲ.... ವಾಸ್ತವವನ್ನು ಮನಗಾಣಿಸುತ್ತಿದ್ದೇನೆ. ನೀವು ಒಪ್ಪಲಿ ಬಿಡಲಿ ನಿಮ್ಮ ಹೆಂಡತಿ ಪದ್ಮಾವತಿಯಂತು ದೊರೆಗಳ ಸಜ್ಜೆಯೇರುವುದು ನಿಶ್ಚಿತ. ಅದು ನಿಮಗೂ ಗೊತ್ತಿದೆ. ಪ್ರವಾಹಕ್ಕೆ ಎದುರಾಗಿ ಬದುಕಲು ಸಾಧ್ಯವೆ?

ದ.ಸೋ. : ಸಾಧ್ಯವಿಲ್ಲ. ನನ್ನ ಮಡದಿ ಪದ್ಮಾವತಿ ಅಂತಹ ಕೀಳು ಮನದ ಹೆಣ್ಣಲ್ಲ ಅವಳನ್ನು ರಕ್ಷಿಸಲು ಈ ಸೋಮಣ್ಣ ಸಬಲನಾಗಿಯೇ ಇದ್ದಾನೆ.

ಬ.ಮಾವುತ : ಗೋಡೆಗೆ ತಲೆಹೊಡೆದುಕೊಳ್ಳುತ್ತಿದ್ದೀಯೆ. ಹೊಡೆದುಕೊ. ತಲೆಯನ್ನು ಒಡೆದುಕೋ ಯಾರಲ್ಲಿ ...(ಭಟನೊಬ್ಬ ಬರುವನು) ಇವನ ಮಡದಿ ಪದ್ಮಾವತಿಯನ್ನು ಹಿಡಿದು ತನ್ನಿ.

ದ.ಸೋ : ಛೀ. ಕುನ್ನಿ...ಎಂಜಲು ಅರಸಿ ತಿನ್ನುವ ಕುನ್ನಿ .. ನಿನ್ನನ್ನು ಇಲ್ಲಿಯೇ ಕತ್ತರಿಸಿ ಬಿಸುಡುವೆನು. (ಒರೆಯಿಂದ ಕತ್ತಿಯಿಂದ ಹಿರಿಯಲು ಹೋಗುವನು)

ಬ.ಮಾವುತ : ಭಟರೇ, ಬನ್ನಿ (ಈರ್ವರು ಬಟರು ಬರುವರು) ಇವನನ್ನು ಹಿಡಿದು ಕಂಬಕ್ಕೆ ಬಿಗಿಯಿರಿ. (ಭಟರು ಸೋಮಣ್ಣನ ಎರಡೂ ರಟ್ಟೆ ಹಿಡಿದು ಎಳೆದೊಯ್ದು ಕಂಬಕ್ಕೆ ಕಟ್ಟುವರು) (ಮಾವುತ ಮೊದಲನೆ ಭಟನನ್ನು ನೋಡಿ) ಹುಂ..ನಿನ್ನ ಕೆಲಸವನ್ನು ನೀನು ಮಾಡು. ನಡೆ. (1ನೇ ಭಟನ ನಿಷ್ಕ್ರಮಣ ಮಾವುತ ಕೆಟ್ಟದಾಗಿ ನಗುವನು. ಈರ್ವರು ಭಟರು ಪದ್ಮಾವತಿಯನ್ನು ಹಿಡಿದು ತರುವರು) ಭಲೇ, ದೊರೆಗಳ ಆಯ್ಕೆ ಸರಿಯಾಗಿಯೇ ಇದೆ.

ಪದ್ಮಾವತಿ : ನನ್ನನ್ನೇಕೆ ಎಳೆದು ತಂದಿರಿ. ಬಿಡಿ ನನ್ನನ್ನು (ಸೋಮಣ್ಣನೆಡೆಗೆ ನೋಡಿ) ಅಂ! ಇವರನ್ನೇಕೆ ಕಂಬಕ್ಕೆ ಬಂಧಿಸಿದ್ದಿರಿ? ನಾವು ಯಾವ ತಪ್ಪನ್ನು ಮಾಡಲಿಲ್ಲ. ಬಿಡಿ ನಮ್ಮನ್ನು (ಕೊಸರಾಡುವಳು)

ಬ.ಮಾವುತ : ಕರೆದೊಯ್ಯಿರಿ ಸಜ್ಜೆಯ ಮನೆಗೆ (ಭಟರು ಎಳೆದುಕೊಂಡು ಒಳಗೆ ಹೊಗುವರು. ಮಾವುತನು ಕೆಟ್ಟದಾಗಿ ಸೋಮಣ್ಣನ ಕಡೆ ನೋಡಿ ನಗುತ್ತಾ ಅವರನ್ನು ಹಿಂಬಾಲಿಸುವನು)

- ತೆರೆ -

ಪ್ರವೇಶ 10

(ಜನ ರಸ್ತೆಯಲ್ಲಿ ಕಂಗೆಟ್ಟು ಹಡಾವಿಡಿಯಿಂದ ಓಡಾಡುತ್ತಿದ್ದಾರೆ)

2ನೇ : ಕೊನೆಗೂ ಬಂದದ್ದು ದೊರೆಗಳ ಪ್ರಾಣಕ್ಕೆ ಸಂಚಕಾರ ತಂದುಬಿಟ್ಟಿತಲ್ಲ.

1ನೇ : ದೊರೆಗಳನ್ನು ಕೊಂದವನು ಯಾರಂತೆ ? ಏನು ಕಾರಣ?

2ನೇ : ಕೊಂದವನು ದಳವಾಯಿ ಸೋಮಣ್ಣ. ದೊರೆಗಳು ಅವನ ಹೆಂಡತಿಯನ್ನು ಬಲಾತ್ಕಾರದಿಂದ ತಮ್ಮ ವಿಲಾಸಕ್ಕೆ ಬಳಸಿಕೊಂಡರಂತೆ ಅದೇ ಕಾರಣ.

1ನೇ : ಅಂತ್ಯಕಾಲಕ್ಕೆ ಪ್ರಳಯಾಂತಕ ಬುದ್ಧಿ. ಆ ನರ್ತಕಿಯ ಬಣ್ಣಕ್ಕೆ ಹೇಗೆ ಮರುಳಾದರೋ, ಪದ್ಮಾವತಿಯ ರೂಪಕ್ಕೆ ಹಾಗೆ ಸೆರೆಯಾದರು. ರಸ ಸವಿದರು ಕೊನೆಗೆ ಜೀವಕ್ಕೆರವಾದರು. ಆ ಹಾಳು ವೈದ್ಯರಾಜ ಅವರ ಬುದ್ಧಿಯನ್ನು ಕೆಡಿಸಿ ಇಕ್ಕೇರಿಯ ರಾಜ್ಯವನ್ನೇ ಅಪತ್ತಿನ ಕೊಳ್ಳಕ್ಕೆ ನೂಕಿದ. ಆದರೆ ..ಒಂದು ಸಂಶಯ ನನಗೆ.

2ನೇ : ನಿಮ್ಮ ಸ್ವಭಾವವೇ ಸಂಶಯದ್ದಾಗಿರುವಾಗ ಈಗ ಹೊಸದೆ?

1ನೇ : ಹಾಗಲ್ಲ. ಸಹಜವಾಗಿ ಯಾರಿಗೂ ಬರುವಂತಾದ್ದೆ. ಅಸ್ವಸ್ಥತೆಯ ಕಾರಣದಿಂದ ಏಳಲಾರದೆ ಹಾಸಿಗೆ ಹಿಡಿದಿರುವ ದೊರೆಗಳು ಪದ್ಮಾವತಿಯ ಶೀಲಭಂಗ ಮಾಡಿದರೆಂದರೆ..ಯಾರು ನಂಬಬೇಕು?

2ನೇ : ನಡೆದದ್ದೇ ಇರುವಾಗ ಯಾರಾದರೂ ನಂಬಬೇಕು. ಪದ್ಮಾವತಿಯ ರೂಪದಿಂದ ಭ್ರಾಂತರಾದ ಅವರು ಅವಳನ್ನು ತಂದೊಪ್ಪಿಸಬೇಕೆಂದು ಮಾವುತನಿಗೆ ಆಜ್ಞೆ ಮಾಡಿದರಂತೆ. ಮಾವುತ ಸೋಮಣ್ಣನನ್ನು ಕರೆಸಿ ದೊಡ್ಡ ಹುದ್ದೆಯ ಆಸೆ ತೋರಿಸಿ ಅವನ ಹೆಂಡತಿಯ ಮೇಲೆ ದೊರೆಗಳ ಅನುಗ್ರಹವಾಗಿರುದನ್ನು ತಿಳಿಸಿದನಂತೆ. ಅದಕ್ಕೆ ಸೋಮಣ್ಣ ಒಪ್ಪಲಿಲ್ಲ.

1ನೇ : ಕೈಹಿಡಿದ ಹೆಂಡತಿಯನ್ನು ಬೇರೆಯವರ ಭೋಗಕ್ಕೊಪ್ಪಿಸಲು ಯಾರು ಸಮ್ಮತಿಸುತ್ತಾರೆ ಹೇಳಿ

2ನೇ : ಅವನೊಪ್ಪದಿದ್ದರೂ ಅವಳು ಮಾತ್ರ ಪ್ರಭುಗಳ ಕೃಪೆಗೆ ಪಾತ್ರಳಾಗೇ ತಿರುವಳು ಎಂದನಂತೆ ಮಾವುತ. ಆಗ ಸೋಮಣ್ಣನನ್ನು ಬಂಧಿಸಿ ಪದ್ಮಾವತಿಯನ್ನು ಹಿಡಿದು ತರಿಸಿ ಅವನ ಕಣ್ಣೆದುರಿಗೆ ದೊರೆಗಳು ಮಲಗಿದ್ದ ಮಂದಿರಕ್ಕೆ ಅವಳನ್ನು ಕಳಿಸಿಕೊಟ್ಟನಂತೆ. ಅದರಿಂದ ತಲೆಕೆಟ್ಟು ಸೋಮಣ್ಣ ಹುಚ್ಚನಾದ. ರೊಚ್ಚಿಗೆದ್ದು ದೊರೆಗಳನ್ನು ಕೊಚ್ಚಿದ. ತಾನೂ ಚೂರಿಯಿಂದ ಚುಚ್ಚಿಕೊಂಡು ಅಲ್ಲೇ ಸತ್ತ.

1ನೇ : ಅಯ್ಯೋ ಪಾಪ.

2ನೇ : ಯಾರು ?

1ನೇ : ದೊರೆಗಳು...

2ನೇ : ನೀವು ಹುಚ್ಚರೇ? ಸತ್ತವರು ಸತ್ತರು. ಜೀವವಿದ್ದು ಸತ್ತ ಬದುಕಾಗಿತ್ತು ಅವರದು. ಆ ಮಹಾತಾಯಿ ಮಹಾರಾಣಿಯವರ ಸ್ಥಿತಿ ಹೇಳಿ.

1ನೇ : ಹೌದಪ್ಪ, ಅಂತಹ ತಾಯಿಗೆ ಎಂಥ ಗತಿ ಬಂತು.

2ನೇ : ಹಿಂದಿನ ಜನ್ಮದ ಪಾಪದ ಫಲವನ್ನು ಈ ಜನ್ಮದಲ್ಲಿ ಅನುಭವಿಸಬೇಕಂತೆ. ಈ ಜನ್ಮದಲ್ಲಾರ್ಜಿಸಿದ ಪುಣ್ಯ ಮುಂದಿನ ಜನ್ಮಕ್ಕೊದಗುವುದಂತೆ.

1ನೇ : ಈ ಪ್ರಕರಣದಲ್ಲಿ ಸಂಪೂರ್ಣ ಹೊಣೆಗಾರ ಮಾವುತನೆ ಆಗಿರಬೇಕೆಂದು ನನ್ನ ತರ್ಕ. ದೊರೆಗಳು ಅವರ ಸ್ಥಿತಿಯಲ್ಲಿ ಭೋಗಕ್ಕಾಗಿ ಹಂಬಲಿಸುವುದೆಂದರೇನು. ಹಾಸಿಗೆ ಬಿಟ್ಟು ಏಳಲಾರದವರು ಪದ್ಮಾವತಿಯನ್ನು ನೋಡುವುದೆಂದರೇನು, ಅವಳ ರೂಪಕ್ಕೆ ಮಾರು ಹೋದರೆಂದರೇನು. ಇವೆಲ್ಲ ಅಂತೆ ಕಂತೆಗಳೇ ಆಗ ದೊರೆಗಳ ಹೆಸರಿನಲ್ಲಿ ಮಾವುತನೇ

ತನ್ನ ರಾಕ್ಷಸೀ ಲಾಲಸೆಯನ್ನು ಪೂರ್ಣಗೊಳಿಸಿಕೊಂಡಿರಬಾರದೇ? ಕೋತಿ ಬುತ್ತಿ ತಿಂದು ಎಂಜಲನ್ನು ಮೇಕೆ ಬಾಯಿಗೆ ಒರಸಿರಬಹುದು.

2ನೇ : ಸೂಳೆಯ ಪಾಪ, ಸನ್ಯಾಸಿಗೆ ಅಂದ ಹಾಗೆ...

1ನೇ : ಯಾಕಾಗಿರಬಾರದು?

2ನೇ : ಹುಂ. ಇದ್ದರೂ ಇದ್ದೀತು.

1ನೇ : ಏನಾದರೂ ಆಗಲಿ, ಆ ವಿಚಾರವೆಲ್ಲ ನಮಗೆ ಯಾಕೆ? (ಹೋಗುವರು)

-ತೆರೆ-

ರಸ್ತೆ ಪ್ರವೇಶ 11

ಕಾಸರಗೋಡು ತಿಮ್ಮಣ್ಣನನ್ನು ಹಿಂಬಾಲಿಸಿ ಸುಬ್ಬನೀಸ ಕೃಷ್ಣಯ್ಯ ಅವಸರದಿಂದ ಬರುವನು. ಅವನಿಗೆ ಯಾವುದೋ ಸುದ್ದಿಯಿಂದ ಆಘಾತವಾದಂತಿದೆ.

ಸು.ಕೃಷ್ಣಯ್ಯ : ತಿಮ್ಮಣ್ಣನವರೇ. ನಿಲ್ಲಿ. ನಿಲ್ಲಿ. ಘಾತವಾಯಿತು.

ಕಾ.ತಿಮ್ಮಣ್ಣ : (ತಿರುಗಿ ನೋಡಿ ಯಾರು? ಕೃಷ್ಣಯ್ಯನವರು.

ಸು.ಕೃಷ್ಣಯ್ಯ : ನಿಮ್ಮನ್ನರಸಿ ಅಲೆಯದ ತಾವಿಲ್ಲ

ಕಾ.ತಿಮ್ಮಣ್ಣ : ನಮ್ಮ ಕಾರ್ಯಾಚರಣೆಗೆ ಬಲವಾದ ಆಘಾತವಾಯಿತು.

ಕಾ.ತಿಮ್ಮಣ್ಣ : ಏನು ? ವಿಚಾರ ಹೇಳಿ.

ಸು.ಕೃಷ್ಣಯ್ಯ : ಲಕ್ಷ್ಮಯ್ಯನೂ, ವೀಭದ್ರಯ್ಯನೂ ಸೇರಿ ಅಂಧಕ ವೆಂಕಟಯ್ಯನ ಮಗನನ್ನು ಶಿವಪ್ಪನಾಯಕನೆಂಬ ಹೆಸರಿನಿಂದ ಇಕ್ಕೇರಿಯ ಅರಸೆಂದು ಘೋಷಿಸಿದರಂತೆ.

ಕಾ.ತಿಮ್ಮಣ್ಣ : ಏನು? ಅಂಧಕ ವೆಂಕಟಯ್ಯನ ಮಗನನ್ನು? ಇಕ್ಕೇರಿಯ ಗದ್ದುಗೆಯ ಮೇಲೆ ಕೂರಿಸಿದರೆ? ಇದು ಸತ್ಯವೇ?

ಸು.ಕೃಷ್ಣಯ್ಯ : ನನಗೆ ತಿಳಿದ ಸುದ್ದಿಯನ್ನು ನಿಮಗೆ ತಿಳಿಸಿದ್ದೇನೆ.

ಕಾ.ತಿಮ್ಮಣ್ಣ : ದೊರೆಗಳ ಮರಣಾನಂತರ ಮಹಾರಾಣಿಯವರು ರಾಜಸೂತ್ರಗಳನ್ನು ಕೈಗೆ ತೆಗೆದುಕೊಂಡಿದ್ದರಲ್ಲ!

ಸು.ಕೃಷ್ಣಯ್ಯ : ಘಟನೆ ನಡೆದ ಬಗೆ ನನಗೆ ತಿಳಿಯದು. ಅರಮನೆಯ ಕೆಲವರ ಸಹಾಯ ಪಡೆದು ಬರುವೆ ಮಾವುತನೂ ಅಧಿಕಾರಕ್ಕೇರಲು ಹವಣಿಸುತ್ತಿರುವನಂತೆ. ನೀವು ಮಾತ್ರ ಯೋಜನೆಯ ನಿರೂಪಣೆಯಲ್ಲಿಯೇ ಕಾಲ ತಳ್ಳುತ್ತಿದ್ದೀರಿ. ನಮಗೆ ಕೊನೆಯವರೆಗೂ ಇದೇ ಗತಿ ಸ್ಥಿರವೆಂದು ತೋರುತ್ತಿದೆ.

ಕಾ.ತಿಮ್ಮಣ್ಣ : ಹಾಗೆ ಭಾವಿಸಬೇಡಿ ಕೃಷ್ಣಯ್ಯ. ಅವಸರದ ಕೆಲಸ ಅಸ್ಥಿರ. ಲಕ್ಷ್ಮಯ್ಯ ಮತ್ತವರ ಗುಂಪಿನ ಮೇಲೆ ಸೇಡು ತೀರಿಸಿಕೊಳ್ಳದೇ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ರಾಜಧಾನಿಯಲ್ಲಿರುವಾಗ ಅವರು ಕೊಟ್ಟ ಕಿರುಕುಳವನ್ನು, ಉಪಟಳವನ್ನು, ಸಹಿಸಲಾಗದೇ ನಾವು ಬಿಳಗಿಯ ಪಾಳೆಯಗಾರರನ್ನು ಆಶ್ರಯಿಸಬೇಕಾಗಿ ಬಂದುದನ್ನು, ನಾವು ಮರೆಯಬಲ್ಲೆವೆ? ಯಾವುದಕ್ಕೂ ಮೊದಲು ರಾಜಧಾನಿಯ ಸಮಾಚಾರವನ್ನು ಸರಿಯಾಗಿ ತಿಳಿರುಕೊಳ್ಳಬೇಕು. ಹಾದಿಬೀದಿಯಲ್ಲೆಲ್ಲ ಮಾತು ಬೇಡ. ನಮ್ಮವರಾಗಿ ರಾಜಧಾನಿಯಲ್ಲಿರುವ ಜಾತಪ್ಪನ ಭದ್ರಪ್ಪ, ವೀರಭದ್ರನಾಯಕರು ಇವರುಗಳೊಡನೆ ವಿಚಾರ ವಿನಿಮಯ ನಡೆಸಿ ಕಾರ್ಯಕ್ರಮವನ್ನು ಸಿದ್ಧಗೊಳಿಸೋಣ.

ಸು.ಕೃಷ್ಣಯ್ಯ : ನಡೆಯಿರಿ (ನಿರ್ಗಮನ)

- ತೆರೆ -

ಅರಮನೆ ಪ್ರವೇಶ 12

ಸಿಂಹಾಸನದ ಮೇಲೆ ಬಾಲಕನೋರ್ವನು ಕುಳಿತಿದ್ದಾನೆ. ಅವನ ಎಡಬಲದಲ್ಲಿ ಈರ್ವರು ಭಟರು ನಿಂತಿದ್ದಾರೆ.. ಹಳೆಪೈಕದ ವೀಭದ್ರಯ್ಯ, ಕಂದಾಚಾರದ ಲಕ್ಷ್ಮಯ್ಯ, ಮರೆಬೋವಿ ಮೊದಲಾದವರು ಆಸನಗಳಿಲ್ಲಿ ಮಂಡಿಸಿದ್ದಾರೆ. (ಇಮ್ಮಡಿ ಶಿವಪ್ಪನಾಯಕರಿಗೆ ಜಯವಾಗಲಿ ಎಂಬ ಜಯಘೋಷ ಮೊಳಗುತ್ತದೆ)

ಲಕ್ಷ್ಮಯ್ಯ : ದೊರೆಗಳು ಪರಾಂಬರಿಸಬೇಕು. ರಾಜ್ಯದಲ್ಲಿ ಎಲ್ಲೆಂದರಲ್ಲಿ ವಿದ್ರೋಹಿಗಳು ತುಂಬಿಕೊಂಡಿದ್ದಾರೆ. ಒಂದೆಡೆ ಬರುವೆ ಮಾವುತ, ಇನ್ನೊಂದೆಡೆ ಕಾಸರಗೋಡು ತಿಮ್ಮಣ್ಣ ಮತ್ತವರ ಪರಿವಾರ, ಬಸವಪ್ಪನಾಯಕರು, ಮತ್ತು ರಾಣಿವಾಸ ಕೂಡ ಸಿಂಹಾಸನಕ್ಕೆ ಪ್ರತಿಕೂಲವಾಗಿದೆ. ಈ ಸಂದರ್ಭದಲ್ಲಿ ದೊರೆಗಳು ದಿಟ್ಟ ನಿಲುವು ತೆಗೆದುಕೊಂಡು ಹುದ್ದೆಗಳನ್ನು ತುಂಬಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ ಹಾಗೆ ಪಟ್ಟಿಯೊಂದನ್ನು ದೊರೆಗಳ ಆವಗಾಹನೆಗಾಗಿ ಸಿದ್ದಪಡಿಸಿ ತಂದಿದ್ದೇನೆ. (ತೆರೆಯಲ್ಲಿ ಕಲರವ. ಹೆಜ್ಜೆಯ ಸದ್ದು. ಕೆಲವು ಸೈನಿಕರು ಪ್ರವೇಶಿಸುವರು) ಎರಡು ಗುಂಪಿಗೂ ಘರ್ಷಣೆಯಾಗುತ್ತದೆ. ಗದ್ದಲದ ನಡುವೆ ಲಕ್ಷ್ಮಯ್ಯ ವೀರಭದ್ರಯ್ಯ ತಲೆಮರೆಸಿಕೊಳ್ಳುತ್ತಾರೆ. (ಹಿಡಿಯಿರಿ, ಬಂಧಿಸಿರಿ ಎಂಬ ಕೂಗು) ಸಿಂಹಾಸನದಲ್ಲಿದ್ದ ಕುತ್ಸಿತ ಶಿವಪ್ಪನಾಯಕರಾದಿಯಾಗಿ ಮಿಕ್ಕವರನ್ನು ಸೆರೆಹಿಡಿಯಲಾಗುತ್ತದೆ. ರಂಗ ಕತ್ತಲಾಗುತ್ತದೆ.

- ತೆರೆ -

ಪ್ರವೇಶ 13

(ಅಂತಃಪುರದಲ್ಲಿ ಮಹಾರಾಣಿ ಯಾರದೋ ಆತುರದ ನೀರಿಕ್ಷೆಯಲ್ಲಿದ್ದಾಳೆ. ಮಲ್ಲಿ ಪ್ರವೇಶಿಸುವಳು)

ಮಲ್ಲಿ : ಪ್ರಧಾನಿಗಳು ದಯಮಾಡಿಸುತ್ತಿದ್ದಾರೆ ಅಮ್ಮಾಜಿ (ಪ್ರಧಾನಿಯ ಪ್ರವೇಶ)

ಚನ್ನಮ್ಮ : ಬಂದಿರಾ ಪ್ರಧಾನಿಗಳೇ, ಕುಳಿತುಕೊಳ್ಳಿ , ರಾಜ್ಯಕ್ಕೆ ಭಯಂಕರವಾದ ಆಪತ್ತೊದಗಿ ಬಂದಿದೆ.

ಪ್ರಧಾನಿ : ನಮ್ಮ ನಾಡ ಮೇಲೆ ಬಿಜಾಪುರದವರು ದಂಡೆತ್ತಿ ಬರುತ್ತಿರುವ ವಿಚಾರವನ್ನಲ್ಲವೆ ನೀವು ಹೇಳುತ್ತಿರುವುದು? ಇದನ್ನು ತಿಳಿಸಲೆಂದೇ ನಿಮ್ಮೆಡೆಗೆ ಹೊರಟಿದ್ದೆ. ಅಷ್ಟರಲ್ಲಿ ಮಲ್ಲಿ ಬಂದು ತಮ್ಮ ಅಪ್ಪಣೆಯನ್ನು ತಿಳಿಸಿದಳು

ಚನ್ನಮ್ಮ : ಎಂತಹ ಭಯಂಕರ ಪರಿಸ್ಥಿತಿ ಬಂದೊದಗಿತು ಪ್ರಧಾನಿಗಳೇ, ದೇಶದ್ರೋಹಿಗಳ ದೆಸೆಯಿಂದ ರಾಜ್ಯಕ್ಕೆ ಉಳಿಗಾಲವಿಲ್ಲವೆಂದು ತೋರುತ್ತದೆ. ತಿಮ್ಮಣ್ಣನವರು ಇಷ್ಟು ದೂರ ಸಾಗುವರೆಂದು ನಾನು ಭಾವಿಸಿರಲಿಲ್ಲ.

ಪ್ರಧಾನಿ : ಆಸೆಯ ಭೂತವನ್ನು ಬೆಂಬತ್ತಿ ಸಾಗಿದ ಮನುಷ್ಯ ಅದನ್ನು ತೃಪ್ತಿಪಡಿಸಲು ಏನೆಲ್ಲವನ್ನೂ ಮಾಡುತ್ತಾನೆ. ಅದರಿಂದ ತಿಮ್ಮಣ್ಣನೇನು ಹೊರತಾಗಲಿಲ್ಲ.

ಚನ್ನಮ್ಮ : ಸಿಂಹಾಸನದ ನಿಷ್ಠಾವಂತ ಸೇವಕರನ್ನಿಸಿಕೊಂಡವರಿಂದ ಇಂತಹ ಘಾತುಕವನ್ನು ನಾನೆಂದೂ ನಿರೀಕ್ಷಿಸಿರಲಿಲ್ಲ. ತಿಮ್ಮಣ್ಣನವರು ಹೀಗಾದುದಕ್ಕೆ ಮರುಕವಾಗುತ್ತದೆ. ಅದು ಹಾಗಿರಲಿ. ಒಮ್ಮೆ ಆವರು ಸಹಾಯವನ್ನಪೇಕ್ಷಿಸಿದರೂ ಬಿಜಾಪುರದವರಿಗೆ ಯಾವು ಅಪಚಾರವೂ ಆಗದಿರುವಾಗ ನಮ್ಮ ಮೇಲೆ ದಂಡೆತ್ತಿ ಬರುವ ಮೊದಲು ಅವರು ಯುಕ್ತಾಯುಕ್ತತೆಯನ್ನು ಕುರಿತು ಚಿಂತಿಸಬೇಕಾಗಿತ್ತು.

ಪ್ರಧಾನಿ : ನೀವೇಕೆ ಹಾಗೆ ಭಾವಿಸಬೇಕೋ ನನಗೆ ತಿಳಿಯದಾಗಿದೆ. ಕಾಲು ಕೆರೆದು ಜಗಳ ತೆಗೆಯುವ ಸ್ವಭಾವ ಬಿಜಾಪುರದವರದು. ನಮ್ಮ ನಾಡನ್ನು ಮುರಿಯಬೇಕೆಂಬ ಅವರ ಹಂಬಲ ಇಂದು ನಿನ್ನೆ ಉಂಟಾದುದಲ್ಲ. ವಿಜಯನಗರ ಸಾಮ್ರಾಜ್ಯವನ್ನು ಮಣ್ಣುಗೂಡಿಸುವಲ್ಲಿ ಪಾಲುದಾರರಾದ ಆವರ ಸಾಹಸ ಸಾಮರ್ಥ್ಯಗಳಿಗೆ ಸವಾಲಿನಂತಿರುವ ಇಕ್ಕೇರಿಯನ್ನು

ಹೇಗಾದರೂ ಭಂಗಿಸಬೇಕೆಂದು ಅವರ ಬಹುದಿನದ ಕನಸು. ವೀರಭದ್ರನಾಯಕರ ಕಾಲದಲ್ಲಿ ಬಿಜಾಪುರದ ಸೇನಾಪತಿ ರಣಧೂಳೀಖಾನನು ಇಕ್ಕೇರಿಯ ಮೇಲೆ ನಡೆಸಿದ ದಾಳಿಯನ್ನು ಜ್ಞಾಪಿಸಿಕೊಳ್ಳಿ.

ಚನ್ನಮ್ಮ : ಆದರೂ ಈ ರೀತಿ ವಿನಾಕಾರಣ.....

ಪ್ರಧಾನಿ : ರಣದುಲ್ಲಾಖಾನನ ದಾಲಿಗೇನಾದರೂ ಕಾರಣವಿತ್ತೆ? ಸಾಮ್ರಾಜ್ಯದಾಹವೇ ಪ್ರಬಲ ಕಾರಣ. ದಕ್ಷಿಣದ ಹಿಂದೂ ರಾಜ್ಯಗಳಲ್ಲಿ ತಂಜಾವೂರು, ಮಧುರೆ, ಇಕ್ಕೆರಿ ಇವು ಈಗ ಪ್ರಬಲವಾದವುಗಳು. ಆವುಗಳನ್ನು ವಿಜಯನಗರದಂತೆ ಧೂಳೀಪಟ ಮಾಡಿಬಿಡಬೇಕೆಂದು ಅವರ ಬಯಕೆ. ಸಾಹಸ, ಐಶ್ವರ್ಯ, ಕೀರ್ತಿಗಳಲ್ಲಿ ಇಕ್ಕೇರಿಯೇ ಅವರಿಗೆ ಮೊದಲ ಪ್ರತಿಸ್ಪರ್ಧಿ. ಶಿವಪ್ಪನಾಕರು ದೇಶಭ್ರಷ್ಠರಾಗಿದ್ದ ವಿಜಯನಗದರ ಮುಮ್ಮಡಿ ಶ್ರೀರಂಗರಿಗೆ, ಸಕ್ಕರೆಪಟ್ಟಣದಲ್ಲಿ ಪಟ್ಟಗಟ್ಟಿ, ವಿಜಯನಗರದ ಪುನರ್‌ಪ್ರತಿಷ್ಠಾಪನೆ ಮಾಡಿದುದಂತೂ ಅವರ ಒಡಲಿಗೆ ಮೆಣಸು ಅರೆದಂತಾಗಿ, ಅಂದಿನಿಂದಲೂ ಇಕ್ಕೇರಿಯನ್ನು ನಿರ್ನಾಮ ಮಾಡಿ ಬಿಡಬೇಕೆಂದು ಹೊಂಚುಹಾಕುತ್ತಿದ್ದರು. ಅದರಿಲ್ಲಿಯ ದೊರೆಗಳು ಪ್ರಬಲರಾಗಿರುವವರೆಗೆ ಇಕ್ಕೇರಿಯ ನಾಮೋಚ್ಚಾರಣೆ ಮಾಡಲೂ ಅಂಜುತ್ತಿದ್ದರು. ಈಗ ಇಲ್ಲಿಯ ಗೊಂದಲದ ವಾತಾವರಣ, ತಿಮ್ಮಣ್ಣನವರು ಕೋರಿದ ಸಹಾಯ, ಅವರ ಬಯಕೆಯ ಬಳ್ಳಿಗೆ ನೀರೆರೆದಂತಾಯಿತು.

ಚನ್ನಮ್ಮ : ಈ ಹೋರಾಟದ ಅಂತಿಮ ಪರಿಣಾಮ ಏನಾಗುವುದೋ ?

ಪ್ರಧಾನಿ : ಈ ಸನ್ನಿವೇಶದಲ್ಲಿ ಜಯಲಾಭವು ಸಂದೇಹಾಸ್ಪದವಾಗಿಯೇ ತೋರುವುದು. ತಿಮ್ಮಣ್ಣಮತ್ತು ಕೃಷ್ಣಯ್ಯನವರಿಗೆ ಬಿಳಗಿಯವರು ಆಶ್ರಯಕೊಟ್ಟಿದುದು ಮಾತ್ರವಲ್ಲದೆ ಅವರು ಈ ಹೋರಾಟದಲ್ಲಿ ಬಿಜಾಪುರದವರೊಂದಿಗೆ ಪಾಲುಗೊಳ್ಳುವರೆಂದು ಬಾತ್ಮಿ ಬಂದಿದೆ.

ಚನ್ನಮ್ಮ : ಏನೆಂದಿರಿ? ತುಂಡುನೆಲದ ಪಾಳೆಗಾರರು, ನಮ್ಮ ಸಾಮಂತರು, ಅವರಿಗೂ ನಮ್ಮ ಮೇಲೆ ತಿರುಗಿಬೀಳುವಷ್ಟು ಸೊಕ್ಕು ಬಂದಿತೆ? ಇದು ಆವರ ಉದ್ಧಟತನವೋ, ನಮ್ಮ ದೌರ್ಭಾಗ್ಯವೋ? ಇದನ್ನು ಹೀಗೆ ಬಿಡುವುದು ನಾಡಿನ ಹಿತಕ್ಕೆ ಒಳ್ಳಿತಲ್ಲ. ಈ ದುರಭಿಮಾನಿಗಳ ದುರ್ಬುದ್ಧಿಯ ಕುಡಿಯನ್ನು ಕಡಿದುಹಾಕಲೇಬೇಕು.

ಪ್ರಧಾನಿ : ಅದಕ್ಕೆ ಇದು ಸಕಾಲವಲ್ಲ ತಾಯಿ. ನಮ್ಮ ಪರಿಸ್ಥಿತಿಯು ದೌರ್ಬಲ್ಯವರಿತು ಅವರ ಈ ದ್ರೋಹಚಿಂತನೆಯಲ್ಲಿ ಮುಂದಾಗಿದ್ದಾರೆ. ಅಪ್ರಯೋಜಕ ಹುಲ್ಲುಕಡ್ಡಿಯೂ ಇಂದು ನಮ್ಮ ಮೇಲೆ ಮಲೆತು ಹೆದರಿಸುತ್ತಿದೆ. ಇಲ್ಲವಾದಲ್ಲಿ ಎಲ್ಲಿಂದಲೋ ಬಂದು ಸೇರಿಕೊಂಡ ಬರುವೆ ಮಾವುತ ರಾಜ್ಯಕ್ಕಾಗಿ ಸಂಚು ನಡೆಸುವುದೆಂದರೇನು! ಲಕ್ಷ್ಮಯ್ಯ, ವೀಭದ್ರಯ್ಯ, ಬೊಕ್ಕಸದ ಬಸವಯ್ಯ, ಬಿಳಗಿ ಕೋನಪ್ಪಯ್ಯ, ಚಿಟನೀಸ ಗಿರಿಯಪ್ಪ, ಕೊನೆಗೆ ಸೇವಕ ಮಸೂಲ್ ಮೊದಲಾಗಿ ನಮ್ಮ ಅಧಿಕಾರಿಗಳೇ ಸಿಂಹಾಸನದ ದ್ರೋಹಚಿಂತನೆಯಲ್ಲಿ ತೊಡಗಿರುವುದು ವಿಧಿಯ ಸಂಚು ಅಷ್ಟೆ

ಚನ್ನಮ್ಮ : ನಿಜ ಪ್ರಧಾನಿಗಳೇ, ನಮಗೆ ಈಗ ಕಾಲ ಚೆನ್ನಾಗಿಲ್ಲ. ಆದರೂ ನಾವು ಇವೆಲ್ಲರನ್ನೂ ಎದುರಿಸಲೇಬೇಕು. ವಿಧಿಯೊಂದಿಗೆ ಸೆಣಸಾಡಲೂಬೇಕು.

ಪ್ರಧಾನಿ : ಬಿಜಾಪುರದರೊಡನೆ ಕಾದಿ ಗೆಲ್ಲವ ವಿಚಾರದಲ್ಲಿ ನೀವೂ ಸಂದೇಹವನ್ನು ವ್ಯಕ್ತಪಡಿಸಿದಿರಿ. ನನಗೂ ಅಪು ಸರಿಯೆನ್ನಿಸುತ್ತಿದೆ. ವ್ಯರ್ಥ ಹೊರಾಡಿ ಅನರ್ಥಕ್ಕೆಡೆಮಾಡಿಕೊಡುವುದಕ್ಕಿಂತ ಅವರೊಂದಿಗೆ ಸಂಧಿ ಮಾಡಿಕೊಂಡು ಯುದ್ಧವನ್ನು ನಿವಾರಿಸುವುದು ಜಾಣತನವಾದೀತು.

ಚನ್ನಮ್ಮ : ಆ ತುರುಕರೊಡನೆ ಸಂಧಿಯೇ?

ಪ್ರಧಾನಿ : ಅಭಿಮಾನಕ್ಕೆ ಬರೆಬೀಳುವುದೆಂದು ಚಿಂತಿಸಿದರೆ ರಾಜ್ಯವೇ ಆನ್ಯಾಕ್ರಾಂತವಾಗುವುದಲ್ಲ ತಾಯಿ

ಚನ್ನಮ್ಮ	:	ನಮ್ಮನ್ನು ಕಾಫಿರರೆಂದು ಕರೆಯುವ ಆ ಕುಲಂಗಾರರಲ್ಲಿ ಸಂಧಿಯನ್ನು ಬಯಸುವುದೆ? ಒಮ್ಮೆ ಅವರು ಸಂಧಿಗೊಪ್ಪುವಾಗ ನಮ್ಮ ರಾಜ್ಯದ ಕೆಲವು ಪ್ರದೇಶಗಳನ್ನು ತಮಗೆ ಬಿಟ್ಟು ಕೊಡಬೇಕೆಂದು ಷರತ್ತು ಹಾಕಿದರೆ ಅಥವಾ ಭಾರಿ ಮೊತ್ತದ ಧನವನ್ನು ಕೇಳಿದರೆ...
ಪ್ರಧಾನಿ	:	ಷರತ್ತು ನಮಗೊಪ್ಪಿಗೆಯಾಗಲಿಲ್ಲವೆಂದು ತಿರಸ್ಕರಿಸಿದರಾಯಿತು.
ಚನ್ನಮ್ಮ	:	ನಾವಾಗಿ ಸಂಧಿಯನ್ನಪೇಕ್ಷಿಸಿದಾಗ ಅವರ ವಿಧಿಗೆ ಒಪ್ಪಲೇಬೇಕಾಗುತ್ತದೆ. ಅಲ್ಲದೆ ನಾವು ಅವರ ಷರತ್ತುಗಳನ್ನು ತಿರಸ್ಕರಿಸಿ ಸಂಧಿ ಮುರಿದರೂ ಸಂಧಿ ಯಾಚಿಸಿದ ಕಳಂಕ ತೊಲಗುವುದಿಲ್ಲ. ಬೇಡ ಇದಕ್ಕೆ ನಾನೊಪ್ಪುವುದಿಲ್ಲ. ನಾಡದೇವಿಯ ಮಾನಸಂರಕ್ಷಣೆಗಾಗಿ ನನ್ನನ್ನೇ ಬಲಿಕೊಡಬೇಕಾಗಿ ಬಂದರೂ ಸರಿಯೆ. ಆತ್ಮಾರ್ಪಣಮಾಡಿಯಾದರೂ ಇಕ್ಕೇರಿ ಉಳಿವಿಗಾಗಿ ಹೆಣಗುತ್ತೇನೆ. ನಿರಾಯಾಸವಾಗಿ ಅವರಿಗಂಜಿ ಸಂದಿಗಾಗಿ ಹಲ್ಗಿರಿಯುವುದು ಬೇಡ. ನೀಡುವ ಕೈ ಬೇಡುವುದು ಸಲ್ಲ. ಅದರಲ್ಲೂ ಉಂಡಮನೆಗೆ ಮಾರಿಯಾಗಿರುವ ಆ ರಾಜದ್ರೋಹಿಗಳಲ್ಲಿ ಪರೋಕ್ಷವಾಗಿಯಾದರೂ ಸಂಧಿ ಭಿಕ್ಷೆಗಾಗಿ ಕೈಚಾಚುವುದು ಎಂದಿಗೂ ಸಾಧ್ಯವಿಲ್ಲ.
ಪ್ರಧಾನಿ	:	ನಿಮ್ಮ ರಾಜ್ಯಾಭಿಮಾನ, ಕ್ಷಾತ್ರತೇಜ ಹಿರಿದಾದುದೆ ತಾಯಿ. ಆದರೆ ಜಯದಾಸೆ ದೂರವಾಗಿರುವಾಗ ವೃಥಾ ಕದನ ಏಕೆಂದು ಹೇಳಿದೆ.
ಚನ್ನಮ್ಮ	:	ಉತ್ಕಟ ದೇಶಾಭಿಮಾನಿಗಳೂ, ಗಂಡೆದೆಯವರಯೂ ಆದ ನೀವು ಹೋರಾಟಕ್ಕೆ ಹಿಂದೇಟು ಹಾಕುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.
ಪ್ರಧಾನಿ	:	ನನ್ನ ಮಾತನ್ನು ಅನ್ಯಥ ತಿಳಿಯಬೇಡಿ. ಬಂದಿರುವ ಸಂಕಟ ಕಳೆಯಲೆಂಬುದೇ ನನ್ನ ಅಭಿಪ್ರಾಯ ತಾವು ಹೇಗೆ ಅಪ್ಪಣೆ ಕೊಡಿಸಿದರೆ ಹಾಗೆ ನಡೆದುಕೊಳ್ಳಲು ನಾನು ಸಿದ್ಧ.
ಚನ್ನಮ್ಮ	:	ಯೋಗ್ಯರಾದವರ ನಾಯಕತ್ವದಲ್ಲಿ ಸೈನ್ಯವು ಯುದ್ಧಕ್ಕೆ ಸಿದ್ಧವಾಗಲಿ, ಬೆನ್ನಿನಲ್ಲಿ ಚೂರಿಯಿರಿಯುವ ಘಾತುಕರಿಗೆ ಅವಕಾಶ ಕೊಡಬೇಡಿ.
ಪ್ರಧಾನಿ	:	ಈಗ ಯಾರನ್ನು ನಂಬಬೇಕೋ ತಿಳಿಯುವುದಿಲ್ಲ. ಆ ದ್ರೋಹಿಗಳ ಪಕ್ಷದವರೂ ಸೈನ್ಯದಲ್ಲಿದ್ದಾರೆ.
ಚನ್ನಮ್ಮ	:	ಹೌದು ಜಾತಪ್ಪನ ಭದ್ರಪ್ಪನಂತವರೂ ಇದ್ದಾರೆ. ಆದರೆ ನಮ್ಮ ಸೈನ್ಯ ಅವರ ಅಂಕೆಗೊಳಗಾಗುವುದಿಲ್ಲ. ನಮ್ಮಿಂದ ನಿಯೋಜಿಸಲ್ಪಟ್ಟ ನಾಯಕನ ಅಂಕೆಯಲ್ಲಿ ಮಾತ್ರ ನಿಲ್ಲುತ್ತಾರೆ. ಆ ಭರವಸೆ ನನಗಿದೆ. ಚಿಟನೀಸ ಗಿರಿಯಪ್ಪನನ್ನು ನಾಯಕನಾಗಿ ಆರಿಸಬಹುದೆಂದು ನನ್ನ ಅಭಿಮತ. ಅವನು ಲಕ್ಷ್ಮಯ್ಯನ ಹಿಂಬಾಲಕ. ತಿಮ್ಮಣ್ಣನವರ ಗುಂಪಿನ ವಿರೋದಿ.
ಪ್ರದಾನಿ	:	ಲಕ್ಷ್ಮಯ್ಯನ ವಿರೋಧಿಗಳೊಂದಿಗೆ ಇಂದಿನ ಕದನವಾದುದರಿಂದ ಅವನನ್ನು ನಂಬಬಹುದು. ಆವನೇ ಆಗಲಿ.
ಚನ್ನಮ್ಮ		ಈಗ ಲಕ್ಷ್ಮಯ್ಯ ಮತ್ತು ಅವರ ಅನುಯಾಯಿಗಳ ಸಮಾಚಾರವೇನು?
ಪ್ರಧಾನಿ	:	ಅವರು ರಾಜಧಾನಿಯಲ್ಲದ್ದರಲ್ಲವೇ? ಸರ್ವಾಧಿಕಾರಿಗಳಾಗಿ ಮೆರೆಯಲೋಸುಗ ಏನೇನೋ ಆಟ ಕಟ್ಟಿದರು. ಕುತ್ಸಿತ ಶಿವಪ್ಪನಾಯಕನನ್ನು ಅರಸೆಂದು ಘೋಷಿಸಿದರು. ಜನತೆಯ ಸಹಾನುಭೂತಿಗಳಿಸಿಕೊಳ್ಳಲೆತ್ನಿಸಿದರು. ಎಲ್ಲ ಯತ್ನಗಳಲ್ಲೂ ವಿಫಲರಾಗಿ ರಾಜ್ಯದ ಮೇಲೆ ಬಿಜಾಪುರದವರು ದಾಳಿವರಿದು ಬರುವುದನ್ನರಿತ ಮೇಲೆ ಅವರೆಲ್ಲ ಪಲಾಯನ ಮಾಡಿದ್ದಾರೆ. ಶಿವಪ್ಪನಾಯಕನನ್ನು ಬಂಧನದಲ್ಲಿಡಿಸಿದ್ದೇನೆ.
ಚನ್ನಮ್ಮ	:	ಅವನನ್ನು ಮತ್ತು ಬಿದನೂರಿನಲ್ಲಿರುವ ಬಸವಲಿಂಗನಾಯಕರನ್ನೂ ಕಣ್ಣು ಕೀಳಿಸಿ ಹೊಸಂಗಡಿಗೆ ಕಳಿಸಿಬಿಡಿ.
ಪ್ರಧಾನಿ	:	ಅಪ್ಪಣೆ, ನಾನಿನ್ನು ತೆರಳಲು ಅನುಮತಿ ನೀಡಿರಿ

ಚೆನ್ನಮ್ಮ : ಆಗಲಿ ಹೋಗಿ. ಎಲ್ಲ ಸಂದರ್ಭಗಳಲೂ ಬಹಳ ಎಚ್ಚರಿಕೆಯಿಂದ ನಡೆಯಬೇಕು. (ಪ್ರಧಾನಿ ಅಪ್ಪಣೆ ಎಂದು ನಮಸ್ಕರಿಸಿ ಹೋಗುವನು)

(ರಂಗ ಕತ್ತಲಾಗುವುದು. ಬೆಳಕು ಬಿದ್ದಾಗ ಅದೇ ಅಂತಃಪುರದಲ್ಲಿ ಚೆನ್ನಮ್ಮ ಆತುರ ಅಸಹನೆಗಳಿಂದ ಕೂಡಿದ್ದಾಳೆ ಜೊತೆಯಲ್ಲಿ ಮಲ್ಲಿ ಇರುವಳು. ಯುದ್ಧದ ವಾರ್ತೆ ತಿಳಿಯದೇ ರಾಣಿ ಚಡಪಡಿಸುತ್ತಿರುವಳು. ಯುದ್ಧರ,ಗಕ್ಕೆ ಹೋಗಬೇಕೆಂಬ ಉತ್ಸಾಹದಿಂದ ಕೂಡಿರುವ ಅವಳನ್ನು ಮಲ್ಲಿ ತಡೆಯುತ್ತಿದ್ದಾಳೆ)

ಚೆನ್ನಮ್ಮ : ಯಾವ ಸುದ್ದಿಯೂ ತಿಳಿಯಬಾರದಲ್ಲ ಮಲ್ಲಿ ಯುದ್ಧ ರಂಗಕ್ಕೆ ಧುಮುಕಿ ಶತ್ರು ದಳವನ್ನು ಹೊಕ್ಕು ಮನದಣಿಯೆ ಹೋರಾಡಬೇಕೆಂದರೆ ನೀನೂ, ಪ್ರಧಾನಿಗಳೂ ನನ್ನನ್ನು ಕಟ್ಟಿ ಹಾಕುತ್ತಿದ್ದೀರಿ.

ಮಲ್ಲಿ : ನಿಮ್ಮ ಸಾಹಸವನ್ನು ಮೆರೆಯಲು ಇದು ಸಕಾಲವಲ್ಲ ತಾಯೀ ಮಹಾ ಮುತ್ಸದ್ದಿಗಳಾದ ಪ್ರಧಾನಿಗಳು ಅರಿಯದ್ದೇನಿದೆ. ಅಂತಃಪುರದಿಂದ ಹೊರಗೆ ನಿಮ್ಮನ್ನು ಹೋಗಗೊಡಬಾರದೆಂದು ಅವರೇ ನನಗೆ ಅಣತಿ ಮಾಡಿದ್ದಾರೆ.

ಚೆನ್ನಮ್ಮ : ಮಹಾರಾಣಿಯಾಗಿ ನಾನು ಅಜ್ಞೆ ಮಾಡುತ್ತೇನೆ. ನನ್ನನ್ನು ಬಿಡು ಹಸಿದು ನನ್ನೀ ಖಡ್ಗ ಶತ್ರುಗಳ ಬಿಸಿರಕ್ತವನ್ನು ಹೀರಲು ಹಾತೊರೆಯುತ್ತಿದೆ. ನನ್ನನ್ನು ತಡೆಯಬೇಡ ಬಿಡು.(ಮುಂದುವರಿಯುವಳು)

ಮಲ್ಲಿ : ಊಹುಂ ಬಿಡುವುದಿಲ್ಲ. (ಬಾಗಿಲಿಗೆ ಅಡ್ಡಲಾಗಿ ನಿಲ್ಲುವಳು)

ಚೆನ್ನಮ್ಮ : ರಾಣಿಯ ಆಜ್ಞೆಯನ್ನು ಧಿಕ್ಕರಿಸುವೆಯಾ?

ಮಲ್ಲಿ : ನನ್ನನ್ನು ಅಪರಾಧಿಯನ್ನಾಗಿ ನಿಲ್ಲಿಸಬೇಡಿ ತಾಯಿ. ಮಹಾರಾಣಿಯ ಆಜ್ಞೆಯನ್ನು ಧಿಕ್ಕರಿಸುವಷ್ಟು ಉದ್ಧಟಳು ನಾನಲ್ಲ, ಉಲ್ಲಂಘಿಸುವ ಧೈರ್ಯವಿಲ್ಲ. ಆದನ್ನು ಮಾತೆಯ [illegible] ಭಾವಿಸುತ್ತೇನಷ್ಟೆ

ಚೆನ್ನಮ್ಮ : ಸ್ವಾಮಿನಿಗೆ ತೋರಬೇಕಾದ ಗೌರವ ಎಳ್ಳಿನಿತೂ ನಿನ್ನಲ್ಲಿಲ್ಲ ಮಲ್ಲಿ ನಿನ್ನನ್ನು ಬೇಡಿಕೊಳ್ಳುವೆನು. [illegible] ರಣಧೀರತನವನ್ನೂ ಯುದ್ಧವೈಖರಿಯನ್ನೂ ಆ [illegible] ಒಮ್ಮೆ ತೋರಿಸುತ್ತೇನೆ. ಇಕ್ಕೇರಿಯನ್ನು ಕಾಯುತ್ತಿರುವ ಕ್ರೂರ ದೇವತೆಗೆ ರಣರಂಗದಲ್ಲಿ ನರಬಲಿಯನ್ನಿತ್ತು ತೃಪ್ತಿಪಡಿಸುತ್ತೇನೆ.

ಮಲ್ಲಿ : [illegible] ನಿಮ್ಮ ಯುದ್ಧೋತ್ಸಾಹವನ್ನು [illegible] ಕೇಳಿಕೊಳ್ಳುವೆ.

ಪ್ರಧಾನಿ : [illegible] ತಾಯಿ, ವಿಧಿ ನಮ್ಮನ್ನು ವಂಚಿಸಿತು. [illegible] ಮಹಾಸೇನಾಪತಿ ಚಿಟನೀಸ ಗಿರಿಯಪ್ಪನು..

ಚೆನ್ನಮ್ಮ : [illegible]?

ಪ್ರಧಾನಿ : [illegible] ಬಂದಿತು. ಸಾಹಸದಿಂದ ವೈರಿ ಸೈನ್ಯವನ್ನು [illegible]. ನಮ್ಮ ಸೈನ್ಯ ಚದುರಿ ದಿಕ್ಕೆಟ್ಟು [illegible].

ಚೆನ್ನಮ್ಮ : [illegible]? ನಡೆಯಿರಿ ಪ್ರಧಾನಿಗಳೇ ನಾವು ಅಂತಃಪುರದಲ್ಲಿ [illegible] ದೇಶದ ಸಂರಕ್ಷಣೆಯಾಗುವುದಿಲ್ಲ. ಚದುರಿದ ಸೈನ್ಯವನ್ನೊಂದುಗೂಡಿಸಿ ಕಾದೋಣ. ನಾನೇ ಸೇನಾಪತ್ಯ ವಹಿಸಿ ಶತ್ರು ದಮನಕ್ಕೆ ಮುಂದಾಗುತ್ತೇನೆ.

ಪ್ರಧಾನಿ : [illegible] ನಾನಿದ್ದು [illegible] ಕೊಡುವುದಿಲ್ಲ

ಮಲ್ಲಿ : ಆಗಿನಿಂದಲೂ ಇದೇ ರೀತಿ ಹಠಮಾಡುತ್ತಿರುವರು. ನಾನು ತಡೆದುದಕ್ಕೆ ನನ್ನ ಮೇಲೆ

ಮುನಿಸಿಕೊಂಡಿದ್ದಾರೆ.

ಚನ್ನಮ್ಮ : ನನ್ನನ್ನು ಹೀಗೇಕೆ ತಡೆಯುತ್ತಿರುವಿರಿ ಪ್ರಧಾನಿಗಳೇ ?

ಪ್ರಧಾನಿ : ಕಾರಣವಿದೆ. ಈಗ ನಾವೆಷ್ಟೇ ಪರಾಕ್ರಮದಿಂದ ಹೋರಾಡಿದರೂ ವಿಜಯ ಲಾಭವು ಮಾತ್ರ ಕನಸೇ ಸರಿ. ಈ ರೀತಿ ಪ್ರಾಣಾರ್ಪಣೆ ಮಾಡುವುದರಿಂದ ಲಾಭವೇನು ತಾಯಿ : ನಿಮ್ಮ ಪ್ರಾಣ ಅಷ್ಟು ಅಗ್ಗವಾದ ವಸ್ತುವೆಂದು ನಾವು ಬಾವಿಸಿಲ್ಲದಿರುವುದೇ ಕಾರಣ. (ತೆರೆಯಲ್ಲಿ ಕೋಲಾಹಲ ಕೇಳಿ ಬರುತ್ತದೆ) ನೋಡಿ ತಾಯಿ. ವೈರಿ ಸೈನಿಕರು ಅರಮನೆಗೆ ನುಗ್ಗಿರುತಂತಿದೆ. ಈಗ ನಾವು ಏನೇ ಮಾಡಿದರೂ ವಿಪತ್ತನ್ನು ನಿವಾರಿಸಿಕೊಳ್ಳಲಾಗುವುದಿಲ್ಲ ನಡೆಯಿರಿ ತಾಯಿ ನನ್ನ ಮಾತು ಕೇಳಿ ಈ ಒಂದು ಗಂಡಾಂತರದ ಘಳಿಗೆ ಕಳೆದುಹೋಗಲಿ. ನಾವು ಜೀವ ಉಳಿಸಿಕೊಂಡು ಅದೃಷ್ಟ ಪರೀಕ್ಷೆ ಮಾಡೋಣ. ನಡಿ ಮಲ್ಲಿ ಮಹಾರಾಣಿ, ನಾನೂ ನಿಮ್ಮನ್ನೂ ಹಿಂಬಾಲಿಸುವೆನು (ನಿಷ್ಕ್ರಮಣ) ಇನ್ನೊಂದೆಡೆಯಿಂದ ಮುಸಾಫಿರ್‌ಖಾನ್, ಸುಬ್ಬನೀಸ ಕೃಷ್ಣಯ್ಯ. ಕಾಸರಗೋಡು ತಿಮ್ಮಣ್ಣ ಮೊದಲಾದವರು ಹಿರಿದ ಕತ್ತಿಯೊಡನೆ ಪ್ರವೇಶಿಸುವರು)

ಮು.ಖಾನ್ : ಹಕ್ಕಿಗಳು ಹಾರಿಹೋಗಿವೆ. ನಾವು ಬಂದುದು ತಡವಾಗಿರಬೇಕು..........

- ತೆರೆ -

ರಸ್ತೆ ಪ್ರವೇಶ 14

ಹಾಡುವರು :

ಹರಿದು ಹಂಚಾಯಿತಲ್ಲೊ
ಇಕ್ಕೇರಿ ರಾಜ್ಯ
ನಾಯಿನರಿ ಪಾಲಾಯಿತಲ್ಲೊ ॥
ಪದವಿಯ ಲೋಭದಿ
ತಮ್ಮ ತಮ್ಮಲೆ ಸಂಚು
ಹೊಂಚಿಗೆ ಬಲಿಯಾಯಿತೇ॥
ಬಿಜಾಪುರ ಖಾನರ
ಸಂಚಿನ ಕೈಸೇರಿತೋ ।
ಅರಮನೆ ಪರಿವಾರ
ಪರದೇಶಿಯಾದರಲ್ಲೋ ॥
ಕಾಡಲಿ ಅಲೆಯುತ ಮೇಡನು ತಳಿಯುತ
ಮಹಾರಾಣಿ ಏನಾದಳೋ
ಚನ್ನಮ್ಮ ರಾಣಿ ಯಾವೆಡೆ ನೆಲೆಗೊಂಡಳೋ ॥

ಒಬ್ಬ : ಸಿಂಹಾಸನದ ಆಸೆಗೆ ಏನೆಲ್ಲ ಮಾಡ್ತಾರಪ್ಪ ಎಂತಹ ರಾಜ್ಯ..ಅನಾಯಕವಾಗಿ ಹೋಯ್ತಪ್ಪ..

(ಬರುವೆ ಮಾವುತ, ಚನ್ನಿ, ಪುಟ್ಟತಾಯಿ ಓಡಿಹೋಗುತ್ತಿವಾಗ ಕೆಲವು ಸೈನಿಕರು ಅವರನ್ನು ಅಟ್ಟಿಸಿಕೊಂಡು ಬರುತ್ತಿರುವವರು ಹಾಡುವವರು ಅವರನ್ನೇ ಕಣ್ಣು ಕಣ್ಣು ಬಿಟ್ಟು ನೋಡುತ್ತಾ ತಾವು ಅವರ ವಿರುದ್ಧ ದಿಕ್ಕಿಗೆ ಹೋಗುತ್ತಾ.....)

ಒಬ್ಬ : ನಡಿಯಪ್ಪ, ಇಲ್ಲಿ ನಿಲ್ಲೋದು ಅಪಾಯ. ಯಾರ ಕತಿ ಏನೇನೋ, ನೋಡಿದೆಯಲ್ಲ, ದೊಂಗೆಗಳನ್ನ ಪಗಡೆಕಾಯಿಯಂತೆ ಆಡಿಸಿದ ಮಾವುತ ಮತ್ತವನ ಪರಿವರದವರ ಗತಿ........

ನಮ್ಮ ತಲೆ ಉಳೀಲಿ, ನಡಿ. ರಣಧೂಳಿಖಾನ್ ಇಕ್ಕೇರಿ ಹಾಳು ಕೆಡವಿದ. ಈಗ ಮುಸಾಫಿರ್ ಖಾನನನ ಸರದಿ. ಒಂದು ಕುಂತಾನಲ. ಬಿದನೂರ ಗತಿ ಏನೋ (ನಿಷ್ಕ್ರಮಣ)

- ತೆರೆ -

ಪ್ರವೇಶ 15

(ಬಿಜಾಪುರದ ದಳಪತಿ ಮುಸಾಫಿರ್‌ಖಾನನ ಬಿಡಾರ. ಖಾನ್ ಮುಂಚದ ಮೇಲೆ ಗುಡುಗುಡಿ ಎಳೆಯುತ್ತ ಯೋಚಿಸುತ್ತಿದ್ದಾನೆ

ಮು.ಖಾ. : ಕೌನ್ ಹೈ ವಹಾ ...ಓ ನಮಕ್ ಹರಾಮ್ ತಿಮ್ಮಣ್ಣ್ ಕು ಅಭಿ ಬುಲಾಲೇಕು ಆವ್..ಜಲ್ದಿಸೆ..ಏ ಕೈಸಾ ಬದ್ಮಾಶ್‌ಲೋಗ್..(ಗುಡುಗುಡಿ ಎಳೆದು) ಏ ತಿಮ್ಮಣ್ಣ ಸಾಬಾ ನಹಿಂ ಅವನ ಕೆಲಸ ಆಯ್ತು.... ನಮ್ಮನ್ನ ಬೂಲ್ ದಿಯಾ.. (ಎದ್ದು ತಿರುಗಾಡುತ್ತಾ) ಮಾತಿನಂತೆ ನಮಗೆ ಕೊಡಬೇಕಾದುದನ್ನು ಕೊಟ್ಟಿರುವುದಿಲ್ಲ. ಮತ್ತೆ ಮುಖ ಮರೆಸಿಕೊಂಡಿದ್ದಾನೆ....ಹರ್ಗ್..ಇವರನ್ನು ನಂಬಿ ನಾನು ಬೇವಕೂಫ್ ಆದೆ...(ಎರಡು ಬಾರಿ ಅತ್ತಿತ್ತ ಓಡಾಡಿ, ತಟ್ಟನೆ ನಿಂತು) ಅರೆ. ಮೈ ಐಸಾ ಕ್ಯೋಂ ಸೋಚ್ ರಹಾ ಹೋಂ ...ಅಬಿ ಕ್ಯಾ ಹುವಾ, ಅಚ್ಛಾ ಹಿ ಹುವಾ.. ಇಬೆ ಅಲ್ಲಾನ ಇರಾದ ಇದ್ದೀತು..ಸಚ್..ನನ್ನ ಮೇಲೆ ಅಲ್ಲಾನ ಕೃಪೆ ಆದರೆ..ಐಸಾ ಹಿ ಹೋಗಾ..(ನಗು) ತಿಮ್ಮಣ್ಣ ಯಾಕೆ ಹಣವಿಲ್ಲವೆಂದರೆ ಹೇಗೆ ನಂಬಬೇಕು. ಇಲ್ಲವೆ ಭಂಡಾರವನ್ನು ಬಚ್ಚಿಟ್ಟಿರಬೇಕು. ಬೇರೆಲ್ಲೋ ಸಾಗಿಸಿರಬೇಕು.. ಹೂತಿದ್ದರೂ ಆಶ್ಚರ್ಯವಿಲ್ಲ. ಈ ಕಾಫಿರ್ ಹಿಂದುಗಳನ್ನು ನಂಬಲು ಸಾಧ್ಯವಿಲ್ಲ..ಛೆ..ಏ ಸಬ್ ಚಿಂತಾ ಕ್ಯೋ ಕರೂಂ ಇಕ್ಕೇರಿ ಬಿಜಾಪುರದಲ್ಲಿ ಸೇರಿಹೋದರೆ ಪ್ರಬಲ ಹಿಂದೂ ರಾಜ್ಯವೊಂದು ನಕಾಶೆಯಿಂದ ಕಣ್ಮರೆಯಾಪುದು. (ತೆರೆಯಲ್ಲಿ ಹುಜೂರ್ ಎಂಬ ಧ್ವನಿ)

ಮು.ಖಾನ್ : ಕೌನ್..ಕ್ಯಾ ಬಾತ್ ಹೈ

ತಿಗೆ : ತಿಮ್ಮಣ್ಣ ಔರ್ ಕೃಷ್ಣಯ್ಯಾ ಆಯೆ ಹೈ

ಮು.ಖಾನ್ : ಆನೆ ದೋ ಅಂದರ. (ತಿಮ್ಮಣ್ಣ, ಕೃಷ್ಣಯ್ಯ ಬರುವರು)

ಇಬ್ಬರೂ : ಖಾನರಿಗೆ ನಮಸ್ಕಾರ .(ಇಬ್ಬರೂ ಕೈ ಮುಗಿಯುವರು)

ಮು.ಖಾನ್ : ಸಲಾಂ ಸಲಾಂ ಬೈಠಿಯೆ. ನಿಮ್ಮೊಂದಿಗೆ ಅಗತ್ಯವಾಗಿ ಮಾತನಾಡುವುದಿತ್ತು. ಅದಕ್ಕಾಗಿ ಕರೆಸಿಕೊಂಡೆ ನಮ್ಮ ಒಪ್ಪಂದದಂತೆ ರಾಜ್ಯವನ್ನು ಗೆದ್ದು ನಿಮಗೆ ಕೊಟ್ಟೆವು. ಆದರೆ ನಿಮ್ಮ ವಚನವನ್ನು ನೀವು ಈಡೇರಿಸಿಕೊಳ್ಳಲಿಲ್ಲ. ನಿಮ್ಮ ದರ್ದ್ ತೀರಿದ ನಂತರ ನಮ್ಮನ್ನು ಮರೆತು ಬಿಟ್ಟಂತೆ ತೋರುತ್ತಿದೆ.

ಕಾ.ತಿಮ್ಮಣ್ಣ : ಛೇ, ಛೇ, ಹಾಗೇನಿಲ್ಲ ಅದೇ ಚಿಂತೆಯಲ್ಲೇ ನಾವಿದ್ದೇವೆ

ಮು. ಖಾನ್ : ಚಿಂತೆ! ಕ್ಯಾ ಚಿಂತೆ? ಇಸಮೆ ಸೋಚನಾ ಕ್ಯಾ?

ಸು.ಕೃಷ್ಣಯ್ಯ : ರಾಜ್ಯವನ್ನು ಕೊಡಿಸಿಕೊಟ್ಟ ನಿಮ್ಮನ್ನು ಯಥೋಚಿತವಾಗಿ ಸತ್ಕರಿಸಬೇಕೆನ್ನುವ ಹಿರಿಯಾಸೆ ನಮಗೂ ಇದೆ.

ಕಾ.ತಿಮ್ಮಣ್ಣ : ಆದರೀಗ ಕೈಕಟ್ಟಿದಂತಾಗಿದೆ.

ಮು.ಖಾನ್ : ತಕ್‌ಲೀಫ್ ತೋ ಕಾ ಬೋಲೋ ತಿಮ್ಮಣ್ಣ

ಕಾ.ತಿಮ್ಮಣ್ಣ : ನಿಮ್ಮ ಸಾಹಸದ ಫಲವಾಗಿ ರಾಜ್ಯವೇನೋ ನಮಗೆ ದೊರಕಿತು. ಆದರೆ ಖಜಾನೆ ದಕ್ಕಲಿಲ್ಲವಲ್ಲ ಖಾನರೇ

ಮು.ಖಾನ್ : ಫಿರ್ ಕಾ ಹುವಾ? ಖಜಾನೆ ಎಲ್ಲಿಗೆ ಹೋದ ?

ಸು.ಕೃಷ್ಣಯ್ಯ : ನಮಗೇನು ಗೊತ್ತು. ಯಾವ ಘಳಿಗೆಯಲ್ಲಿ ಹೇಗೆ ಎಲ್ಲಿಗೆ ಸಾಗಿಸಿದರೋ ಅಂತೂ ಖಜಾನೆ ಖಾಲಿ

ಮು.ಖಾನ್ : ಅಂತು ಖಜಾನೆ ಇದ್ದಾನೆ ಎಂದಾಯಿತು.

ಕಾ.ತಿಮ್ಮಣ್ಣ : ಅವನಿದ್ದು ಏನು ಬಡಕೋಬೇಕು. ಅದರಲ್ಲಿ ಒಂದೇ ಒಂದು ಕುರುಡು ಕಾಸೂ ಕಲ್ಲ.

ಮು.ಖಾನ್ : ಅದಕ್ಕೆ ನಾನೇನು ಮಾಡಬೇಕು. ಬೊಕ್ಕಸವನ್ನು ನಿಮಗೆ ಕೊಡಿಸುತ್ತೇವೆಂದು ಕರಾರು ಮಾಡಿಕೊಂಡಲ್ಲ. ಆ ಸಬೂಬುಗಳನ್ನೆಲ್ಲ ನೀವು ಹೇಳಬಾರದು. ನೀವು ಅದರ ಬಗ್ಗೆ ಎಚ್ಚರಿಕೆ ವಹಿಸಕೊಳ್ಳಬೇಕಿತತು. ಈಗ ಏನೆಲ್ಲಾ ಹೇಳಿದರೆ ಕೇಳುವವರು ಯಾರು. ಮಾತಿನಂತ ನಮ್ಮ ಬಾಕಿ ಸಂದಾಯವಾದರೆ ತೀರಿತು. ನಮ್ಮದು ತಕರಾರೇಯಿಲ್ಲ. ನೀವು ತೋರುತ್ತಿರುವ ವಿಲಂಬ ನೀತಿ ನಮಗೆ ತೀರಾ ಬೇಸರಿಕೆ ತರುತ್ತಿದೆ.

ಸು.ಕೃಷ್ಣಯ್ಯ : ನಿಮ್ಮನ್ನೀರೀತಿ ಕಾಯಿಸುತ್ತಿರುವುದಕ್ಕೆ ನಮಗೂ ತುಂಬಾ ಖೇದವೇನಿಸುತ್ತದೆ, ಆದರೆ ವಿಧಿಯಿಲ್ಲ. ನೀವೂ ಸಹ ಸುಧಾರಿಸಿಕೊಂಡು ನಮಗೆ ಋಣಮುಕ್ತರಾಗಲು ಅವಕಾಶ ಕೊಡಬೇಕು

ಮು.ಖಾನ್ : ಇನ್ನೇಷ್ಟು ಅವಕಾಶ ಕೊಡಬೇಕು ಕೃಷ್ಣಯ್ಯ ? ನನ್ನ ಕರ್ತವ್ಯವನ್ನು ಆಗುಮಾಡಿಕೊಟ್ಟು ಎಷ್ಟೆ ದಿನಗಳಿಂದ ನಿಮ್ಮ ನಿರೀಕ್ಷೆಯಲ್ಲಿ ಕಾದು ಕುಳಿತಿಲ್ಲ ! ನಾವಿಲ್ಲಿರುವುದೇ ನಿಮ್ಮ ನೆನಪಿನಲ್ಲಿಲ್ಲವೇನೋ ಎನ್ನಿಸುತ್ತಿದೆ. ಕೆಲಸವಾದ ಮೇಲೆ ನಿಮ್ಮ ಮುಖದರ್ಶನವೂ ದುರ್ಲಭವಾಯಿತು.

ಕಾ.ತಿಮ್ಮಣ್ಣ : ನೀವು ಹಾಗೆ ಭಾವಿಸಬಾರದು. ನಿಮ್ಮಿಂದಾದ ಉಪಕೃತಿಯನ್ನು ಸುಲಭದಲ್ಲಿ ಮರೆತು ಬಿಡುವಂತಹ ಕೃತಘ್ನರು ನಾವಲ್ಲ.

ಮು.ಖಾನ : ಇನ್ನೇನು ಭಾವಿಸಬೇಕೋ ನನಗೆ ತಿಳಿಯದು. ಈ ವೇಳೆಗಾಗಲೇ ನಾನು ಬಿಜಾಪುರದಲ್ಲಿರಬೇಕಾಗಿತ್ತು. ರಾಜಧಾನಿಗೆ ಹೊರಟು ಬರಬೇಕೆಂದು ವರಾತ ಮಾಡಿ ಬಾದುಷಹರು ಮೇಲಿಂಬ ಮೇಲೆ ದೂತರನ್ನು ಕಳಿಸುತ್ತಿದ್ದಾರೆ. ಸೈನ್ಯ ರಾಜಧಾನಿಯಿಂದ ದೂರವಿರುವುದು ಕ್ಷೇಮವಲ್ಲವೆಂದೂ, ಆದುದರಿಂದ ಕೂಡಲೇ ವ್ಯವಹಾರವನ್ನು ಮುಗಿಸಕೊಂಡು ಹೊರಟು ಬರಬೇಕೆಂದು ದೂತರ ಮುಖೇನ ಈ ದಿನ ಮತ್ತು ವರ್ತಮಾನ ಕಳುಹಿಸಿದ್ದಾರೆ. ಅಲ್ಲಿಯ ಪರಿಸ್ಥಿತಿಯೇನೋ ಯಾರಿಗೆ ಗೊತ್ತು. ಬಿಜಾಪುರಕ್ಕೆ ಶತ್ರುಗಳು ಹೆಚ್ಚಾಗಿದ್ದು ಬೇರೆಯವರ ಸಹಾಯಕ್ಕೆಂದು ಹೋಗಿ ನಮಗೇ ಎಲ್ಲಿ ಗಂಡಾಂತರವೊದಗಬಹುದೋ ಎಂದು ಆವರು ಚಿಂತಿಸುತ್ತಿರಬಹುದು.

ಕಾ.ತಿಮ್ಮಣ್ಣ : ನೀವು ಹೇಳುತ್ತಿರುವುದು ಸರಿ. ನಿಮ್ಮ ಋಣ ನಮ್ಮ ಮೇಲೆ ಅಪಾರವಾಗಿದೆ. ನಮ್ಮ ಮಾತನ್ನುಳಿಸಿಕೊಳ್ಳಲು ಇನ್ನು ಸ್ವಲ್ಪ ಅವಕಾಶ ಕೊಡಿ

ಮು.ಖಾನ್ : ನೋಡಿ ತಿಮ್ಮಣ್ಣ, ನಮ್ಮನ್ನು ಅದಷ್ಟು ಬೇಗ ಕಳಿಸಿಕೊಡುವುದರಿಂದ ನಿಮಗೂ ಹೆಚ್ಚಿನ ಅನುಕೂಲವಿದೆ ಈಗ ಇಲ್ಲಿರುವ ಸೈನ್ಯದ ಖರ್ಚುವೆಚ್ಚಗಳೇನು? ನಿಮ್ಮ ಸಹಾಯಕ್ಕಾಗಿ ಬಂದಿರುವಾಗ ನಾವದನ್ನು ಭರಿಸಲು ಸಾಧ್ಯವೆ? ದಿನಕಳೆದಂತೆ ಖರ್ಚು ಹೆಚ್ಚುತ್ತಲೇ ಹೋಗಿ ಕಡೆಗೆ ತಲೆಗಿಂತಲೂ ಮುಂಡಾಸು ದೊಡ್ಡದು ಎಂಬಂತಾಗುವುದು. ನೌಕರನಾದ ನಾನು ಏನು ತಾನೆ ಸೌವಲತ್ತು ನೀಡಲು ಸಾಧ್ಯ? ಮೇಲಿನವರ ಹುಕುಂನಂತೆ ನಾನು ನಡೆದುಕೊಳ್ಳಬೇಕು. ಇವನ್ನೆಲ್ಲ ಯೋಚಿಸಿ ತಿಮ್ಮಣ್ಣ.

ಕಾ.ತಿಮ್ಮಣ್ಣ . ನೀವು ಹೇಳುತ್ತಿರುವುದೆಲ್ಲ ನಿಜ ಖಾನರೇ, ನಮ್ಮ ಸ್ಥಿತಿಯನ್ನೂ ಸ್ವಲ್ಪ ಅರ್ಥಮಾಡಿಕೊಳ್ಳಿ

ಮು.ಖಾನ್ : ವ್ಯವಹಾರ ಸಾಫ್ ಸೀದ ಇರಬೇಕು ತಿಮ್ಮಣ್ಣ. ಮಾತಿಗೂ ನಡತೆಗೂ ಹೊಂದಿಕೆಯಿಲ್ಲದೆ

ವ್ಯವಹಾರದ ದೆಸೆಯಿಂದ ಸ್ನೇಹ ಕೆಡಿಸಿಕೊಳ್ಳಬಾರದು. ಇನ್ನೊಮ್ಮೆ ನೀವು ಕೋರಿದರೆ ನಾವು ಸಹಾಯ ನೀಡುವಂತಿರಬೇಕು. ಮನಸ್ಸು ಬೇಸರಪಟ್ಟಕೊಂಡರೆ ವಿಶ್ವಾಸವುಳಿಯುವುದೇ ಹೇಳಿ. ಈ ರೀತಿ ವ್ಯವಹಾರವನ್ನು ನಮ್ಮ ಬಾದುಷಹರು ಮೆಚ್ಚುವುದಿಲ್ಲ.

ಸು.ಕೃಷ್ಣಯ್ಯ : ನಿಮ್ಮ ಮಾತುಗಳು ನಿಜ ಖಾನರೇ, ಆದರೆ ಹಣ ಭರಸಿಕೊಳ್ಳವ ಮಾರ್ಗ ಕಾಣದೇ ನಾವು ಪೇಚಿನಲ್ಲಿ ಸಿಕ್ಕುಬಿದ್ದಿದ್ದೇವೆ.

ಮು.ಖಾ. : ಬಸ್ ಬಸ್ ನೀವಿಷ್ಟು ಬುದ್ಧಿಗುರುಡರೆಂದು ನಾನು ತಿಳಿದಿರಲಿಲ್ಲ. ಹಲವಾರು ವರ್ಷಗಳು ನೀವು ರಾಜ್ಯದ ಉನ್ನತಾಧಿಕಾರದಲ್ಲಿದ್ದೊ ಆಡಳಿತಾನುಭವ ನಿಮಗಿಲ್ಲ. ಪ್ರಜೆಗಳಿಂದ ತೆರಿಗೆಯ ರೂಪದಲ್ಲಿ ವಸೂಲ್ಮಾಡಿ, ಇಲ್ಲಾ ರಾಜ್ಯದ ಧನಿಕ ವರ್ತಕರಿಂದ ಸಾಲದ ರೂಪದಲ್ಲೋ, ಭಯ ಬಲತ್ಕಾರಗಳಿಂದಲೋ ಶೇಖರಿಸಿ ಭಂಡಾರ ಭರಿಸಿಕೊಳ್ಳಿ . ಅದು ನಮಗೆ ಮುಖ್ಯವಲ್ಲ ಆದರೆ ನಮ್ಮ ಭಾಗವನ್ನು ಮಾತ್ರ ನಮಗೊಪ್ಪಿಸಿಬಿಡಿ. ನಿಮ್ಮ ಗೌರವವನ್ನು ಕಾಪಾಡಿಕೊಳ್ಳಿ.

ಕಾ.ತಿಮ್ಮಣ್ಣ : ಅದೇ ನಮ್ಮ ಬಯಕೆ ಖಾನರೆ,

ಮು.ಖಾನ್ : ಬಯಕೆಯಿದ್ದರೆ ಬಟ್ಟೆ ಇದ್ದೆ ಇರುತ್ತದೆ. ಹೀಗೆ ಮಾಡಿ. ಬ್ರಿಟಿಷರು, ಡಚ್ಚರು, ಪೋರ್ಚುಗೀಸರು ಮೊದಲಾದ ವಿದೇಶೀ ವ್ಯಾಪಾರಿಗಳು ನಿಮ್ಮ ರಾಜ್ಯದ ಬಂದರುಗಳ ಮೂಲಕ ವ್ಯವಹಾರ ನಡೆಸಿ ಹೇರಳವಾದ ಐಶ್ವರ್ಯವನ್ನು ಸಂಪಾದಿಸಿದ್ದಾರೆ. ಈಗಲೂ ಅವರ ವ್ಯಾಪಾರ ನಿಮ್ಮ ರಾಜ್ಯದ ಬಂದರುಗಳ ಮೂಲಕ ಅವ್ಯಾಹತವಾಗಿ ನಡೆಯುತ್ತಿದೆ. ನಿಮ್ಮ ಬಂದರುಗಳ ಅವಶ್ಯಕತೆ ಅವರಿಗಿರುವಾಗ ದೇಶದ ಆಡಳಿತ ಅಸ್ಥಿರವಾಗಿದ್ದರೆ ಅವರ ವ್ಯಾಪಾರಕ್ಕೂ ಧಕ್ಕೆ ತಗುಲುವುದೆಂಬ ಭಯ ಅವರನ್ನು ಆವರಿಸಿರುತ್ತದೆ. ಆದ್ದರಿಂದ ನೀವು ಕೇಳಿದರೆ ನಿಮ್ಮ ಕೋರಿಕೆಯನ್ನವರು ಮಾನ್ಯ ಮಾಡಿ ನೀಡಬಹುದು.

ಸು.ಕೃಷ್ಣಯ್ಯ : ಅದೂ ಕೂಡ ಅಸಂಭವವೆಂದೇ ನನ್ನಣಿಕೆ.

ಮು.ಖಾನ್ : ಇದಾವುದಕ್ಕೂ ನೀವು ಸಮರ್ಥರಲ್ಲವಾದಾಗ ಮುಖ ದಾಕ್ಷಿಣ್ಯಕ್ಕಾಗಿ ನಿಮ್ಮ ಸಮಯ ಕಾಯುತ್ತಾ ನಾನು ಕೂರಲಾರೆ. ನಿಮ್ಮ ರಾಜ್ಯದ ಅರ್ಧಭಾಗ ಒಪ್ಪಿಸಿಬಿಡಿ.

ಇಬ್ಬರೂ : (ಅನಿರೀಕ್ಷಿತವಾದ ಬೇಡಿಕೆಯಿಂದ ದಿಗ್ಭ್ರಾಂತರಾಗಿ) ಆಂ! ಏನೆಂದಿರಿ ?

ಮು.ಖಾನ್ : ಅತಂಕವೇನಿದೆ? ಇಡೀ ರಾಜ್ಯವನ್ನು ನಾವು ಗೆದ್ದಿದ್ದೇವೆ. ಒಂದು ರೀತಿಯಿಂದ ನಮ್ಮದಾದ ರಾಜ್ಯವನ್ನು ಮಾತಿಗೆ ಕಟ್ಟಬಿದ್ದು ನಿಮಗೆ ಬಿಟ್ಟುಕೊಟ್ಟದ್ದೇವೆ. ಮಾತಿನಂತೆ ನಡೆದುಕೊಳ್ಳಲು ನೀವು ಅಸಮರ್ಥರಾದಾಗ ಅರ್ಧಭಾಗವನ್ನು ಒಪ್ಪಿಸಿಬಿಡಿ. ಅಂದರೆ ತೀರಿತು.

ಕಾ.ತಿಮ್ಮಣ್ಣ : ನೀವು ಸ್ನೇಹದಲ್ಲಿ ಕರುಳು ಕತ್ತರಿಸುವಿರೆಂದು ನಾವು ತಿಳಿದಿರಲಿಲ್ಲ.

ಮು.ಖಾನ್ : ಆ ಭಾವನೆ ನಮ್ಮಲ್ಲಿಲ್ಲ . ಅಂತಹ ಜನವು ನಾವಲ್ಲ.

ಸು.ಕೃಷ್ಣಯ್ಯ : ನಮ್ಮ ಸಂದಿಗ್ಧ ಸ್ಥಿತಿ, ಅಸಹಾಯಕತೆ ನಿಮಗೆ ಬಾಯಿ ಕೊಟ್ಟಿದೆ ಎಂದೆ ಈ ಮಾತನಾಡಿದಿರಿ. ಅಲ್ಲವೆ ಮುಸಫರ್‌ಖಾನ್ ?

ಮು.ಖಾನ್ : ನಿಮ್ಮ ಮರ್ಜಿ ಕಾಯುತ್ತ ಎಷ್ಟು ದಿನ ನಾವಿಲ್ಲಿ ಕುಳಿತುಕೊಳ್ಳಲು ಸಾಧ್ಯ ಕೃಷ್ಣಯ್ಯ ! ನಿಮ್ಮಂತೆ ನಾನು ಸ್ವತಂತ್ರನೇ? ನಿಮ್ಮ ಸಹಾಯಕ್ಕೆ ಬಂದುದರಿಂದ ನಮಗಾದ ಹಾನಿನೇನು ಅಲ್ಪವೆ?

ಕಾ.ತಿಮ್ಮಣ್ಣ : ನಮಗೆ ತಿಳಿದಂತೆ ಅಧಿಕಾರ ಹಿಡಿದುಕೊಂಡಿದ್ದ ಲಕ್ಷ್ಮಯ್ಯ ವೀಭದ್ರಯ್ಯ ಇವರುಗಳು ಸಮರಕ್ಕೆದುರಾಗದೆ ರಾಣಿಯೇ ಮುಂದೆ ಬಂದು ನಿಂತಿದ್ದರಿಂದ ಇಷ್ಟೆಲ್ಲಾ ಅನರ್ಥಕ್ಕವಕಾಶವಾಯಿತು.

ಮು.ಖಾನ್ : ನೀವು ಎಣಿಕೆ ತಪ್ಪಿದಿರಿ ಅದರಿಂದ ನಮಗೆ ವಿಶೇಷ ಹಾನಿಯಾಯಿತು. ಆ ಹಾನಿಯ ಭರಣಕ್ಕೆ

		ನಾವು ನಿಮ್ಮಿಂದ ನಿರೀಕ್ಷಿಸುವವರೇ ಸರಿ. ನಿಮಗೋಸ್ಕರವಾಗಿ ನಮಗಾದ ಹಾನಿಗೆ ಅರ್ಧರಾಜ್ಯ ಕೊಡುವುದೇನೂ ದೊಡ್ಡ ಮಾತಲ್ಲ. ಅಂದಹಾಗೆ ತಿಮ್ಮಣ್ಣನವರೇ..ಲಕ್ಷ್ಮಯ್ಯ ಮೊದಲಾದವರು ಕುತ್ಸಿತ ಶಿವಪ್ಪನಾಯಕರನ್ನು ಪಟ್ಟಕ್ಕೇರಿಸಿದ್ದರೆಂದು ಅಂದು ನೀವು ಹೇಳಿದ್ದಿರಿ. ಅವರು ಕದನ ಕೊಡದೆ ಅಧಿಕಾರ ಕಳೆದುಕೊಂಡ ಮಹಾರಾಣಿಯವರು ಯುದ್ಧಕ್ಕೆ ಪ್ರವೇಶಿಸಲು ಕಾರಣವೇನು?
ಕಾ.ತಿಮ್ಮಣ್ಣ	:	ಇದು ವಿಸ್ಮಯದ ಸಂಗತಿ. ನಮಗೂ ಅದು ಅರ್ಥವಾಗಲಿಲ್ಲ. ಆ ಕುಲಹೀನ ಶಿವಪ್ಪನಾಯಕನನ್ನು ಅಧಿಕಾರದಿಂದ ಹೊಡೆದೋಡಿಸಬೇಕೆಂಬುದೇ ನಮ್ಮ ಉದ್ದೇಶಯವಾಗಿತ್ತು. ಅದಕ್ಕಾಗಿ ನಿಮ್ಮ ಸಹಾಯ ಕೋರಿದೆವು.
ಮು.ಖಾನ್	:	ಅಚ್ಛಾ , ಅದು ಹೇಗೂ ಇರಲಿ ಈಗ ನಮಗೇನು ಹೇಳುವಿರಿ ?
ಕಾ.ತಿಮ್ಮಣ್ಣ	:	ಇದೊಂದು ಬಾರಿ ನಮಗೆ ಸ್ವಲ್ಪ ಅವಕಾಶ ಕೊಡಿ. ಋಣಮುಕ್ತರಾಗುತ್ತೇವೆ.
ಮು.ಖಾನ್	:	(ತಿಮ್ಮಣ್ಣನನ್ನು ನೋಡಿ ಏನೋ ಯೋಚಿಸಿ) ಅಚ್ಛಾ ಆಗಬಹುದು. ನೀವೇ ಆಲೋಚಿಸಿ ಒಂದು ಗಡುವನ್ನು ಹೇಳಿ. ಆ ಅವಧಿಯೊಳಗೆ ನೀವು ನಮ್ಮ ಹಣ ತುಂಬಲು ಅಸಮರ್ಥರಾದರೆ ಈಗ ನಾನು ಹೇಳಿದಂತೆ ಅರ್ಧರಾಜ್ಯವನ್ನು ಒಪ್ಪಿಸಬೇಕು. ಸಮ್ಮತವೆ?
ಸು.ಕೃಷ್ಣಯ್ಯ	:	ಈ ಬಾರಿ ಖಂಡಿತ ತಪ್ಪುವುದಿಲ್ಲ.
ಮು.ಖಾನ್	:	ಅಚ್ಛಾ ದೇಖೆಂಗೆ. ಜಾವ್. ಕೇವಲ ಹಣಕ್ಕಾಗಿ ನಮ್ಮ ನಿಮ್ಮಲ್ಲಿರುವ ಮಿತ್ರತ್ವ ಕೆಡಿಸಿಕೊಳ್ಳಲು ನಾನು ಸಿದ್ಧನಿಲ್ಲ. ನಮ್ಮ ಬಾದುಷಹರಾದರೂ ಸ್ನೇಹಪರರೆಂಬುದನ್ನು ತಿಳಿಯಿರಿ. ಹಮ್ ದೋನೋ ಭಾಯಿ ಭಾಯಿ. ಹಾಥ್ ಮಿಲಾವ್. (ಮುಸಫರ್ ಖಾನ್ ತಿಮ್ಮಣ್ಣ ಇಬ್ಬರೂ ಪರಸ್ಪರ ಕೈಕುಲುಕುವರು)
ಕಾ. ತಿಮ್ಮಣ್ಣ	:	ಕೈಕೊಡುವುದರಿಂದಲೇ ಸ್ನೇಹ ಬೆಸೆಯುವುದಿಲ್ಲ. ಬೆಳೆಯುವುದಿಲ್ಲ. ಮನಸ್ಸು ಕೊಡಬೇಕು ಖಾನರೇ (ಇಬ್ಬರು ನಗುವರು)
ಮು.ಖಾನ್	:	ಠೀಕ್ ಹೈ. ಠೀಕ್ ಹೈ. (ನಗುವರು)

ರಸ್ತೆ ಪ್ರವೇಶ 16

1ನೇ ಪೌರ	:	ನಾವು ಬೇಡುವುದೊಂದಾದರೆ ದೇವರು ನೀಡುವುದು ಮತ್ತೊಂದು. ದುಡಿದದ್ದು ಉಣ್ಣುತೀರೋ, ಪಡೆದದ್ದು ಉಣ್ಣುತೀರೋಂತ. ಏನೇನೋ ಪ್ರಯತ್ನದಿಂದ ಯಾರು ಯಾರ ಕಾಲನ್ನೋ ಕಟ್ಟಿಕೊಂಡು ಸಹಾಯ ಪಡೆದು ಪ್ರಯಾಸಪಟ್ಟು ರಾಜ್ಯ ಹಿಡಿದುಕೊಂಡರು. ಆದರೆ ದೊರೆತ ಪ್ರಯೋಜನ....
2ನೇ	:	ಏಕೆ ! ಏನೂ ಇಲ್ಲವೇ ? ರಾಜ್ಯ ಸಿಕ್ಕಿದೆಯಲ್ಲ.
1ನೇ	:	ಅದು ಹೇಗಿದೆ ಗೊತ್ತೆ. ಜೀವವಿಲ್ಲದ ದೇಹ. ಪ್ರೇಮವಿಲ್ಲದ ಸ್ತ್ರೀ. ಸುಖವು ಇಲ್ಲ. ಶಾಂತಿಯೂ ಇಲ್ಲ.
2ನೇ	:	ನಿಮ್ಮ ಮಾತಿನ ಅರ್ಥವಾಗಲಿಲ್ಲ.
1ನೇ	:	ರಾಜ್ಯ ಸಿಕ್ಕದರೂ ಭಂಡಾರ ಬರಿದಲ್ಲ. ಕೊಡಬೇಕಾದದ್ದಕ್ಕೆ ಅವನು ಬೇಡೆ ಕಾಡುತ್ತಿದ್ದಾನೆ. ಶನಿ ಹಿಡಿದವ ಸಂತೆಗೆ ಹೋದರೆ ಇಲಿ ಹಿಡಿದು ತಲೆ ಬೋಳಿಸಿತ್ತಂತೆ. ಹಾಗಾಗಿದೆ ಇವರ ಪಾಡು.
2ನೇ	:	ಬರಿದಾದ ಭಂಡಾರವನ್ನು ಜನರಿಂದ ತುಂಬಿಸಿಕೊಳ್ಳುತ್ತಾರೆ.
1ನೇ	:	ರಾಜ ಭಂಡಾರ ಹೇಗೆ ಬರಿದೊ. ಹಾಗೆ ಅವರ ಪಾಲಿಗೆ ಜನರ ಒಲವೂ ಬರಿದೋ ಬರಿದು. ಈಗವರು ಜನರ ತಳ್ಳಿಗೆ ಹೋದರೆ ಒದೆಯುವ ಆಕಳ ಕೆಚ್ಚಲಿಗೆ ಕೈಹಾಕಿದ ಹಾಗಾಗುತ್ತೆ.

ಜನತೆಯ ಬೆಂಬಲವಿದ್ದರೆ ರಾಜರ ಅಧಿಕಾರ. ಹೆಣ್ಣು, ಹೊನ್ನು, ಮಣ್ಣು ಇವು ತಾವಾಗೇ ಒಲಿದು ಬಂದರೆ ಸುಖವಿದೆ. ದೇಶದ ಯಾವ ಪ್ರಜೆಗೂ ಇವರ ಮೇಲೆ ಅಭಿಮಾನವಿಲ್ಲ.

2ನೇ : ಹಾಗಾದರೆ ಈಗ ಅವರಿಗೆ ಅಧಿಕಾರವು ಬೇಡ. ಅಂತರಂಗ ಕ್ಷೋಭೆಯೂ ಬೇಡ ಅನ್ನಿಸಿರಬೇಕು. ಆ ಖಾನ್ ಬೇರೆ ಸಪ್ತಮ ಶನಿಯ ಹಾಗೆ ಇಲ್ಲೆ ವಕ್ಕರಿಸಿಕೊಂಡಿದಾನೆ.

1ನೇ : ಬಿಟ್ಟು ಹೋದಾನೇನು ? ಅವನು ಕುಕ್ಕರಿಸಿಕೊಂಡಿದ್ದರಿಂದಲೇ ಇವರು ಇಕ್ಕಟ್ಟಿನಲ್ಲಿ ಸಿಕ್ಕು ಒದ್ದಾಡುತ್ತಿರುವುದು. ಇವರು ಕೊಡುವುದಿಲ್ಲ. ಅವನು ಬಿಡುವುದಿಲ್ಲ. ಖಾನ್ ಇವರ ಪ್ರಾಣ ಹಿಂಡುತ್ತಿದ್ದಾನೆ.

2ನೇ : ಇದ್ದರೆ ತಾನೇ ಕೊಡುವುದು.

1ನೇ : ಈಗ ಉಳಿದಿರುವುದನ್ನೇ ಕೇಳುತ್ತಿದ್ದಾನೆ, ಅರ್ಧರಾಜ್ಯ

2ನೇ : ಹೂಂ. ಕಡೆಗೂ ಸಂಪೂರ್ಣ ರಾಜ್ಯವನ್ನು ಅವನೇ ನುಂಗಿ ನೀರು ಕುಡಿಯುವನೋ

1ನೇ : ಶರಾವತಿ ನೀರು......

2ನೇ : ಇದೇನೋ ಹೊಸ ಗತ್ತು ತೆಗೆದಿರಲ್ಲ ?

1ನೇ : ಹೊತ್ತೆ ಅಂತಾದ್ದರಿ. ಪಟ್ಟಿಗೆ ಪ್ರತಿಪಟ್ಟು. ಇಲ್ಲಿ ಬನ್ನಿ (ಕಿವಿಯಲ್ಲಿ ಏನೋ ಹೇಳಿ) ಹೇಗಾದರೂ ಆ ಖಾನನನ್ನು ಕಾಸುಕೊಡದೇ ಓಡಿಸಬೇಕೆಂದು ತಿಮ್ಮಣ್ಣ ಮತ್ತು ಅನುಯಾಯಿಗಳ ಮಸಲತ್ತು.

2ನೇ : (ನಕ್ಕು) ಸೌಲತ್ತು ಬೇಕಲ್ಲ. ಸಾಧ್ಯವೇ ಹೇಳಿ.

1ನೇ : ಸಾಧ್ಯವೋ, ಅಸಾಧ್ಯವೋ, ಪ್ರಯತ್ನವಂತೂ ನಡೆದಿದೆ.

2ನೇ : ಮಹಾರಾಣಿಯವರಿಂದಲೇ ಆಗದ್ದನ್ನು ಇವರೇನು ಸಾಧಿಸಿಯಾರು ? ಇವರ ಗುಟ್ಟನ್ನೆಲ್ಲ ಆ ಖಾನ್ ತಿಳಿದುಕೊಂಡು ಬಿಟ್ಟಿದ್ದಾನೆ. ಮತ್ತಷ್ಟು ಅರಾಜಕತೆಗೆ ಕಾರಣ ಅಷ್ಟೆ. ಈಗರ್ಧ ಕೇಳಿದ್ದಾನೆ. ಬಡ್ಡಿಯಾಗಿ ಉಳಿದರ್ಧವನ್ನು ಸೇರಿಸಿ ಕಬಳಿಸುತ್ತಾನೆ.

1ನೇ : ಈ ಮಾತುಗಳನ್ನು ಇಲ್ಲೆಲ್ಲ ಆಡಬಾರದು. ಬನ್ನಿ.

2ನೇ : ಆಗಿರೋದನ್ನಾಡೋದಕ್ಕೇನಂತೆ ?

1ನೇ : ಆಗಿದ್ದಾದರೂ ಆಡಿದರೆ ಅಪರಾಧ. ಈ ವಿಷಮ ಕಾಲದಲ್ಲಿ ಸೆರೆಮನೆಯ ಅತಿಥಿಗಳಾಗಲು ಇಷ್ಟೆ ವಿಷಯ ಸಾಕು.

2ನೇ : ಈ ಗೊಂದಲದ ಬೀಸು ದೊಣ್ಣೆ ತಪ್ಪಿಸಿಕೊಂಡು ಅವರೆಲ್ಲಿಯೋ ಹೋಗಿಯೇ ಬಿಟ್ಟರು. ಲಕ್ಷ್ಮಯ್ಯ ವೀರಭದ್ರಯ್ಯ, ಬರುವೆ ಮಾವುತ.

1ನೇ : ಬಿಜಾಪುರದ ಸೈನ್ಯ ಮುತ್ತಿಗೆ ಹಾಕೋ ಹೊತ್ತಿಗೆ ಪತ್ತೆಯೇ ಇಲ್ಲದ ಹಾಗೆ ಪರಾರಿಯಾದರು

2ನೇ : ಆ ನರ್ತಕಿ ಚನ್ನಿ ವಿಚಾರವೇನೋ ?

1ನೇ : ಅವರ ಪರಿವಾರವೇ ಪರಾರಿಯಾಗಿ ಹೋಗಿದೆ. ಬನ್ನಿ ಹೋಗೋಣ

2ನೇ : ರಾಜ್ಯ ಬಿಟ್ಟು... ?

1ನೇ : ಹೀಗೆ ಆದರೆ ನಾವೂ ಬಿಡಬೇಕಾದೀತು. (ನಿಷ್ಕ್ರಮಿಯ)

– ತೆರೆ –

ಪ್ರವೇಶ 17

ಹಾಡುವವರು :

ಬಿಜಾಪುರದ ಖಾನ ಬಂದು
ಬಿದನೂರಾಗೆ ಕುಂತ
ರಾಣಿ ಯುದ್ಧ ಗೆಲ್ಲಲಾರದೆ

ರಾಜಧಾನಿ ತೊರೆದಾಳೊ
ಪ್ರಧಾನಿ ಪರಿವಾರ ಅವರ ಜೊತೆ ಸೇರ್ಯಾರೊ
ಲಕ್ಷ್ಮಯ್ಯ, ಕೃಷ್ಣಯ್ಯ
ಬಿಳಗಿಯ ಸೇರ್ಯಾರೋ
ಭಂಡಾರ ಬರಿದೈತೆ
ಜನಮನ ಕುದಿತೈತೆ
ತಿಮ್ಮಣ್ಣ, ವೀರಭದ್ರ
ಕಂಗಾಲೋ ಕಂಗಾಲು
ಯುದ್ಧದ ಖರ್ಚು ಜೋರಲು
ಖಾನನ ದಂಡಾಳು
ದೊರೆಯಿಂದ ಬಾಲಕನಿರಿಯಾದ ನೋಡಣ್ಣ
ಇಕ್ಕೇರಿ ಕತೆ ಹೀಗಾಯ್ತು ಕಾಣಣ್ಣ ॥....................
ಭುವನಗಿರಿ ದುರ್ಗದಲ್ಲಿ ಚೆನ್ನಮ್ಮ ಕುಂತಳು
ಪ್ರಧಾನಿ ಪರಿವಾರ ಅವರ ಜೊತೆ ನಿಂತರು.
ಬಂಡೆದ್ದವರೆಲ್ಲ ರಾಜ್ಯ ಬಿಟ್ಟು ಪರಾರಿ
ಬಿದನೂರಾಗೆ ಕುಂತೈತೆ ಖಾನನ ಸವಾರಿ

ಒಬ್ಬ : ಮುಂದೇನು ಕತೆ ನೋಡಾಣ ಬನ್ನಿರ್ರೆ................ (ನಿಷ್ಕ್ರಮಣ)

ತೆರೆ

ಪ್ರವೇಶ 18

(ಭುವನಗಿರಿಯ ಅರಮನೆ. ರಾಣಿ ಚಿಂತಾಮಗ್ನಳಾಗಿದ್ದಾಳೆ. ಇಕ್ಕೇರಿಯಲ್ಲಿ ಕಳೆದ ಕೆಲವು ದಿನಗಳಿಂದ ನಡೆದ ಘಟನೆಗಳನ್ನು ಸ್ಮರಿಸಿ ಕಣ್ಣೀರಿಡುತ್ತಿದ್ದಾಳೆ)

ಮಲ್ಲಿ : ಏಕೆ ತಾಯೀ ಕಣ್ಣೀರು ? ಹೀಗೆ ಶೋಕದ ತಾಪಕ್ಕೊಳಪಡಿಸಿ ದೇಹವನ್ನು ದಂಡಿಸುವುದರಿಂದ ಪ್ರಯೋಜನವೇನು ? ಚಿಂತೆಯನ್ನು ಕಳೆಯಿರಿ.

ಚನ್ನಮ್ಮ : ಅದು ಹೇಗೆ ಸಾಧ್ಯ ಮಲ್ಲಿ ?

ಮಲ್ಲಿ : ಆ ಕಾಲವನ್ನು ಮರೆತರೆ ಸಾಧ್ಯ ತಾಯೀ

ಚನ್ನಮ್ಮ : ಹೇಗೆ ಮರೆಯಲಿ (ನಿಟ್ಟುಸಿರು ಬಿಟ್ಟು) ಇಂದು-ಸುಮಾರು ಹತ್ತು ವರ್ಷಗಳ ಹಿಂದೆ, ಮೈಸೂರಿನವರೊಡನಾದ ಯುದ್ಧದಲ್ಲಿ ವಿಜಯ ಪಡೆದ ಸಂತೋಷಕ್ಕಾಗಿ ರಾಮೇಶ್ವರ ಸ್ವಾಮಿಗೆ ವಿಶೇಷಪೂಜೆ ಸಲ್ಲಿಸಲೆಂದು ಕೆಳದಿಗೆ ಹೋದಾಗ ಅಲ್ಲಿ ಏರ್ಪಡಿಸಲಾಗಿದ್ದ ನೃತ್ಯ ಸಮಾರಂಭದಲ್ಲಿ ನನ್ನ ಸ್ವಾಮಿ ಕ್ಷಣವೊಂದು ಮೈಮರೆದು ಆ ನರ್ತಕಿಯ ರೂಪದಿಂದಾಕರ್ಷಿತರಾಗಿ ಅವಳಲ್ಲಿ ಅನುರಕ್ತರಾದರು. ದೊರೆಗಳು ಅವಳನ್ನು ರಾಜಧಾನಿಗೆ ಕರೆತಂದುದು ಅನರ್ಥಕ್ಕೆ ಆಹ್ವಾನವಾಯಿತು. ಅಲ್ಲಿಂದ ಇದುವರೆಗೆ ನಡೆದುದೆಲ್ಲವೂ ಚಿತ್ರಕಾರನಾಗಿ ಕಣ್ಮುಂದೆ ಚಿತ್ತಫಲಕದ ಮೇಲೆ ರೂಪುಗೊಂಡು ಮನಸ್ಸನ್ನು ಕದಡುತ್ತಿದೆ. ನಾಡಿಗೊದಗಿದ ದುರ್ಗತಿಗಾಗಿ ಕರುಳು ಉರಿಯುತ್ತಿದೆ. ರಾಜ್ಯಕ್ಕೊದಗಿದ ಆಪತ್ತನ್ನು ನಿವಾರಿಸುವಲ್ಲಿ ನನ್ನ ಅಸಹಾಯ ಸ್ಥಿತಿಯನ್ನು ನೆನೆದು ದುಃಖ ಉಮ್ಮಳಿಸಿ ಶೋಕಾಶ್ರುಗಳುದುರುತ್ತವೆ. ಆ ಯುವಜನಗಳಲ್ಲಿ ನಾಡು ಧಾರೆಯೆರೆಯಲ್ಪಡುವುದೋ ಎಂಬ ಚಿಂತೆ. ಅದನ್ನೆಲ್ಲ ಸಹಿಸುವುದೆಂತು ಮಲ್ಲಿ.

ಬೀಳಬಹುದೆಂದು ಹೇರಳ ಯುದ್ಧ ಸಾಮಾಗ್ರಿಗಳನ್ನು ಮದ್ದುಗುಂಡುಗಳನ್ನೂ ಇಲ್ಲಿ ಶೇಖರಿಸಿಟ್ಟು, ಅನಿವಾರ್ಯವಾದರೆ ಇರಲೆಂದು ತಕ್ಕಷ್ಟು ;ಉ,ತ ಉಪಯೋಗಕ್ಕೆ ಬೀಳಬಹುದೆಂದು ಹೇರಳ ಯುದ್ಧ ಸಾಮಾಗ್ರಿಗಳನ್ನು , ಮದ್ದುಗುಂಡುಗಳನ್ನು ಇಲ್ಲಿ ಶೇಖರಿಸಿಟ್ಟು, ಅನಿವಾರ್ಯವಾದರೆ ಇರಲೆಂದು ತಕ್ಕಷ್ಟು ಸೈನ್ಯವನ್ನೂ ಈ ದುರ್ಗದಲಿರಿಸಿದ್ದೆ. ಉಪಯೋಗಕ್ಕೆ ಬೀಳಬಹುದೆಂದು ಹೇರಳ ಯುದ್ಧ ಸಾಮಾಗ್ರಿಗಳನ್ನು , ಮದ್ದುಗುಂಡುಗಳನ್ನು ಇಲ್ಲಿ ಶೇಖರಿಸಿಟ್ಟು, ಅನಿವಾರ್ಯವಾದರೆ ಇರಲೆಂದು ತಕ್ಕಷ್ಟು ಸೈನ್ಯವನ್ನೂ ಈ ದುರ್ಗದಲಿರಿಸಿದ್ದೆ

ಚನ್ನಮ್ಮ : ನಿಮ್ಮ ಕರ್ತವ್ಯ ಜಾಗೃತಿ ನನಗೆ ವಿಸ್ಮಯವನ್ನುಂಟುಮಾಡಿದೆ. (ಗದ್ಗದಳಾಗಿ) ಪ್ರಧಾನಿಗಳೇ, ಮುಪ್ಪಿನ ಮುದುಕರಿಂದ ನೀವು ನಿರಾಂತಂಕವಾಗಿ ತುತ್ತು ಅನ್ನವನ್ನು ತಿನ್ನಲವಕಾಶವಿಲ್ಲದಂತೆ ನಿರ್ಭಾಗ್ಯಳಾದ ನನ್ನ ಬೆಂಗಟ್ಟಿಕೊಂಡು ಹೆಣಗುತ್ತಿದ್ದೀರಿ. ಯಾವ ಸ್ವಾರ್ಥವೂ ಇಲ್ಲದೆ ಶ್ರಮವನ್ನು ಲೆಕ್ಕಿಸದೇ ನೀವೆಲ್ಲ ದುಡಿಯುತ್ತಿರುವುದರ ಫಲವಾಗಿ ದೇಶಕ್ಕೆ ಹಿತವಾದರೆ....

ಪ್ರಧಾನಿ : ನಾನು ಧನ್ಯನಾಗುತ್ತೇನೆ. ನನ್ನ ಶ್ರಮ ನನ್ನ ನಾಡಿಗಾಗಿ, ನನ್ನನ್ನು ಪೋಷಿಸಿ ಬೆಳೆಸಿದ ತಾಯಿಗಾಗಿ. ಇನ್ನಾದರೂ ಮನದ ಕೋಟಲೆಗಳನ್ನು ಬದಿಗಿರಿಸಿ ಕಲಿಯಾಗಿ ತಾಯಿ. ಖಾನನ ಸೈನ್ಯದೊಡನೆ ಕಾದಾಡಬೇಕೆಂದು ಹಂಬಲಿಸುತ್ತಿದ್ದ ಅಂದಿನ ನಿಮ್ಮ ಬಯಕೆಗೆ ಈಗ ಇಂಬು ದೊರೆತೀತು.

ಚನ್ನಮ್ಮ : ಖಾನನೊಡನೆ ಯುದ್ಧ ನಿಶ್ಚಯಿಸಿರುವಿರಾ ಪ್ರಧಾನಿಗಳೇ ? ಅವನ ಅಪಾರ ಸೈನ್ಯವನ್ನು ಎದುರಿಸಲು ಈ ಸ್ಥಿತಿಯಲ್ಲಿ ನಮ್ಮಿಂದ ಸಾಧ್ಯವೇ ? ಯಾವ ಭರವಸೆಯ ಮೇಲೆ ಯುದ್ಧ ?

ಪ್ರಧಾನಿ : ಈಗೇನು ಯುದ್ಧವನ್ನು ನಿಶ್ಚಯಿಸಿಲ್ಲ ಆದರೆ ಯುದ್ಧ ಹೂಡಬೇಕಾಗಬಹುದು. ಅದಕ್ಕೆ ಇದು ತಕ್ಕ ಸಮಯವೂ ಆಗಿದೆ. ಇಕ್ಕೇರಿಯ ಅಧೀನದಲ್ಲಿದ್ದ ಪಾಳೆಯಪಟ್ಟುಗಳನ್ನು ಗೆದ್ದು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳುವ ಉದ್ದೇಶದಿಂದ ಬಿಜಾಪುರದ ದಳಪತಿಯು ಪಡೆಯನ್ನು ದಿಕ್ಕು ದಿಕ್ಕಿಗೆ ಹಂಚಿ ಕಳಿಸಿರುವನು. ಈಗ ಬಿದನೂರಿನಲ್ಲಿರುವುದು ಅವರ ಅಲ್ಪಸೈನ್ಯ ಮಾತ್ರ. ಸಮಯ ಸಾಧಿಸಿ ನಾವವನ ಮೇಲೆ ಆಕ್ರಮಣ ಮಾಡಿದ್ದಾದರೆ ಹೊರಗೆ ಹೋದ ಸೈನ್ಯವು ಅವನನ್ನು ಬಂದು ಕೂಡುವುದರೊಳಗೆ ಅವನನ್ನು ರಾಜ್ಯದಿಂದಲೇ ಓಡಿಸಿಬಿಡಬಹುದು.

ಚನ್ನಮ್ಮ : ನನಗಂತೂ ಇದು ಅಸಾಧ್ಯವೆಂದೇ ಕಾಣುತ್ತಿದೆ.

ಪ್ರಧಾನಿ : ಹಿಂದಿನ ಪರಾಭವ ನಿಮ್ಮಲ್ಲಿ ನಿರಾಶೆಯನ್ನುಂಟುಮಾಡುತ್ತಿದೆ. ಆದರೆ ಈಗಿನ ಸ್ಥಿತಿಯೇ ಬೇರೆ. ರಾಜ್ಯದ ಸೈನ್ಯ ನಮ್ಮ ಸಹಾಯಕ್ಕೆ ಬರುತ್ತದೆ. ರಾಜ್ಯದ ಜನತೆ ಕೆರಳಿದೆ. ಖಾನನ ಸೈನ್ಯವನ್ನು ಹೊಡೆದಟ್ಟಲು ಕಾತರರಾಗಿದ್ದಾರೆ. ಆದರೆ ಅವರಿಗೆ ಸರಿಯಾಗಿ ನಿರ್ದೇಶಕನ ನೀಡುವ ನಾಯಕನಿಲ್ಲವಾಗಿದೆ. ಆ ಕೊರತೆಯನ್ನು ನಾವು ತುಂಬಿಕೊಟ್ಟರೆ ಖಾನನು ಸರಕು ಕಟ್ಟಿಯೇ ತೀರಬೇಕಾಗುವುದು.

ಚನ್ನಮ್ಮ : ನಿಮ್ಮ ಉತ್ಸಾಹ , ಕಾರ್ಯತತ್ಪರತೆಗಳೆದುರು ನಾನು ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ.

ಪ್ರಧಾನಿ : ಕೇಳಿ ತಾಯೀ, ತಿಮ್ಮಣ್ಣನಿಗೂ ಇಲ್ಲಿಗೆ ಬರುವಂತೆ ಹೇಳಿ ಕಳಿಸಿದ್ದೇನೆ. ಕೃಷ್ಣಯ್ಯನೂ ಅವರೊಡನೆ ಬಂದಾನು. ಖಾನನ ಪೀಡೆಯಿಂದ ನೊಂದ ಅವರು ಅವನನ್ನು ಎಬ್ಬಟ್ಟಲು ನಮಗೆ ಬೆಂಬಲ ನೀಡಲೂ ಬಹುದು. ಅವರಿಗೆ ಅವನ ಕಾಟದಿಂದ ಪಾರಾದರೆ ಸಾಕಾಗಿದೆ. ಖಾನನ ಒತ್ತಡದಿಂದ ಈಗವರು ಪೇಚಿನಲ್ಲಿ ಸಿಕ್ಕು ಒದ್ದಾಡುತ್ತಿದ್ದಾರೆ.

ಚನ್ನಮ್ಮ : ಬರುವರೆನ್ನುವಿರಾ ?

ಪ್ರಧಾನಿ : ಹೌದು. ಬಂದೇಬರುತ್ತಾರೆ. ನೋಡುತ್ತೀರಿ. ತಿಮ್ಮಣ್ಣ ಅವರ ಅಂತರ್ಯ ವೇನೆಂಬುದು ಸ್ಪಷ್ಟವಾಗುವುದು. ಆಮೇಲೆ ಯಾವುದನ್ನೂ ನಿರ್ಧರಿಸಬೇಕು. (ದೂತನೊಬ್ಬನು ಪ್ರವೇಶಿಸಿ

ತಿಮ್ಮಣ್ಣನೂ, ಕೃಷ್ಣಯ್ಯನೂ ಬಂದಿರುವರೆಂದು ತಿಳಿಸುವನು) ಬಂದರೇ ? ನಾನು ಹೇಳಲಿಲ್ಲವೇ ತಾಯೀ. (ದೂತನ ಕಡೆ ತಿರುಗಿ) ಅವರನ್ನಿಲ್ಲಿಗೆ ಕಳಿಸಿಕೊಡು. (ದೂತ ನಿರ್ಗಮಿಸುವನು ನೀವು ಸ್ವಲ್ಪ ಮರೆಯಲ್ಲಿರಿ. ಆಗತ್ಯ ಕಂಡುಬಂದರೆ ಪ್ರಕಟವಾಗುವಿರಂತೆ. (ಚನ್ನಮ್ಮ ತೆರೆಯ ಹಿಂದೆ ಸರಿಯುವಳು. ಮಲ್ಲಿಯೂ ಕೂಡ ಕೃಷ್ಣಯ್ಯ, ತಿಮ್ಮಣ್ಣ ಬಂದು ಪ್ರಧಾನಿಗೆ ನಮಸ್ಕರಿಸುವರು) ಬನ್ನಿ... ಬನ್ನಿ.... ಇಬ್ಬರೂ ಚಿತ್ತೈಸಬೇಕು ಕುಳಿತುಕೊಳ್ಳಿ. ಬಡವರ ಅತಿಥ್ಯ ಮನಸ್ಸಿಗೆ ಬೇಸರ ತಂದುಕೊಳ್ಳಬಾರದು. ದೀನರ ಮೇಲೆ ಕನಿಕರಿಸಿ ಇಲ್ಲಿಯವರೆಗೆ ಪಾದ ಬೆಳೆಸಿದುದೇ ಹೆಚ್ಚು. ಅಲಭ್ಯ ಆಗಮನ.

ಸು.ಕೃಷ್ಣಯ್ಯ : ನೀವು ಮಾತಿನ ದೊಡ್ಡ ಹೊರೆಯನ್ನೇ ನಮ್ಮ ಮೇಲೆ ಹೊರಿಸುತ್ತಿರುವಿರಿ. ಬಡವರು ಯಾರು? ಏನು ? ಎತ್ತ ?

ಪ್ರಧಾನಿ : ಚನ್ನಮ್ಮಾಜಿಯವರು, ಅವರನ್ನನುಸರಿಸಿದ ನಾವು. ರಾಜಕಾರಣಗಳ ಗೊಂದಲದಲ್ಲಿ ನಮ್ಮ ನೆನಪಾದುದೂ, ಬಿಡುವು ದೊರೆತು ಇಲ್ಲಿಗೆ ಆಗಮಿಸಿದುದೂ ನಮ್ಮಗಳ ಭಾಗ್ಯವಿಶೇಷವೇ ಸರಿ.

ಕಾ. ತಿಮ್ಮಣ್ಣ : ರಾಜಕಾರಣದ ಗೊಂದಲದಿಂದ ಒಮ್ಮೆ ಬಿಡುಗಡೆ ಹೊಂದಬೇಕೆಂದು ನಾವೂ ಆಲೋಚಿಸಿತ್ತಿದ್ದೆವು. ಆ ಕಾಲಕ್ಕೆ ಸರಿಯಾಗಿ ನಿಮ್ಮ ಪತ್ರವೂ ತಲುಪಿತು.

ಪ್ರಧಾನಿ : ಬಿಡುಗಡೆಗಾಗಿ ಚಿಂತಿಸುತ್ತಿದ್ದಿರೆಂದರೆ.....ಆಶ್ಚರ್ಯವೇ ಸರಿ.

ಕಾ. ತಿಮ್ಮಣ್ಣ : ಮನುಷ್ಯ ಬಳಲಿದಾಗ ವಿಶ್ರಾಂತಿ ಬಯಸುವುದು ಸಹಜವಲ್ಲವೇ, ಅದಲ್ಲದೆ ನಿಮ್ಮ ಆಜ್ಞಾಪತ್ರವು ಕೈಸೇರಿದ ಮೇಲೆ ಅದನ್ನು ತಿರಸ್ಕರಿಸಲು ನಾವೆಷ್ಟರವರು.

ಪ್ರಧಾನಿ : ಕುಚೋದ್ಯವಾಡುತ್ತಿರುವಿರಾ ತಿಮ್ಮಣ್ಣ ? ಇಕ್ಕೇರಿಯ ಅನಭಿಷಕ್ತ ಅರಸರಾಗಿರುವ ನಿಮಗೆ ಅಜ್ಞೆ ಮಾಡಲು ನಾನು ಯಾರು ? ಯಾವ ಅಧಿಕಾರವಿದೆ ? ಹೇಳಿ ಕೇಳಿ ನಿಲ್ಲಲು ನೆಲೆಯಿಲ್ಲದ ದೇಶಿಗ ನಾನು.

ಕಾ. ತಿಮ್ಮಣ್ಣ : ಈ ಹಾರಿಕೆಯ ಮಾತು ಸಾಕು . ಪ್ರಧಾನಿಯವರನ್ನುಳಿದು ರಾಜ್ಯದ ಆಡಳಿತ ರಥ ಮುಂದೆ ಸಾಗುವುದೆಂತು, ಇರಲಿ. ರಾಣಿಯವರು ಕುಶಲ ತಾನೆ ?

ಪ್ರಧಾನಿ : ಏನೋ ಇದ್ದಾರಷ್ಟೆ, ರಾಜ್ಯದ ಭವಿತವ್ಯದ ಚಿಂತಯಿಂದ ಕೊರಗುತ್ತಿದ್ದಾರೆ.

ಕಾ. ತಿಮ್ಮಣ್ಣ : ಅಧಿಕಾರದ ಹೊರೆ ಹೊತ್ತವರು ಆ ಕುರಿತು ವಿಚಾರ ಮಾಡುತ್ತಾರೆ ಪ್ರಾಧಾನಿಗಳೇ

ಪ್ರಧಾನಿ : ಸುಳ್ಳು ಮಾತು. ಹೆರವರ ಸೊತ್ತನ್ನು ಬಲತ್ಕಾರವಾಗಿ ಕಿತ್ತುಕೊಳ್ಳುವುದರಲ್ಲಿ ದುರಾಸೆಯಡಗಿರುತ್ತದೆಯೇ ಹೊರತು ಅದರ ಉದ್ದಾರದ ಉದ್ದೇಶವಿರುವುದಿಲ್ಲ. ಅಧಿಕಾರವನ್ನುಳಿಸಿಕೊಳ್ಳುವುದರಲ್ಲಿ ನೀವು ನಿರತವಾಗಿರುವಿರಲ್ಲದೆ ರಾಜ್ಯದ ಪ್ರಗತಿಯನ್ನು ಕುರಿತು ಯೋಚಿಸಲು, ಕೆಲಸ ಮಾಡಲು ನಿಮಗೆ ಅವಕಾಶವೇ ದೊರಕುವುದಿಲ್ಲ. ಹೀಗಾದರೆ ರಾಜ್ಯದೇಳ್ಗೆ ಹೇಗೆ ಸಾಧಿತವಾಗಬೇಕು ? ಆ ಖಾನನ ಕಾಟ ತಪ್ಪಿಸಿಕೊಂಡರೆ ನಿಮಗೆ ಸಾಕಾಗಿದೆ.

ಕಾ. ತಿಮ್ಮಣ್ಣ : ನೀವು ನಮ್ಮ ಮೇಲೆ ಮಿಥ್ಯಾರೋಪ ಹೊರಿಸುತ್ತಿದ್ದೀರಿ.

ಪ್ರಧಾನಿ : ತಿಮ್ಮಣ್ಣ. ನೀವಿಂದು ಇಕ್ಕೇರಿಯ ಸರ್ವಾಧಿಕಾರಿಗಳು. ನೆಲೆಯಿಲ್ಲದ ನಮ್ಮ ಮೇಲೆ ಏನು ಹೇಳಿದರೂ ನಡೆಯುತ್ತದೆ. ಆದರೆ ಇದನ್ನು ಮಾತ್ರ ಖಂಡಿತವಾಗಿ ತಿಳಿದುಕೊಂಡಿರಿ. ನಿಮ್ಮ ಅಧಿಕಾರ ರಾಜಕೀಯ ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ಹೊಯ್ದೊಡುತ್ತಿದೆ. ಇಂದು ನಾಳೆಯೆನ್ನುವುದರಲ್ಲೆ ನಿಮ್ಮ ಅಧಿಕಾರದ ಪರಿಸಮಾಪ್ತಿಯಾಗುವುದು ಖಂಡಿತ. ಅದನ್ನುಳಿಸಿಕೊಳ್ಳುವ ಸಾಮರ್ಥ್ಯ ನಿಮ್ಮಲಿಲ್ಲ, ನಿಮ್ಮ ಮುಂದಿನ ದೊರೆಗಳಿಗೂ ಇಲ್ಲ.

ಸು. ಕೃಷ್ಣಯ್ಯ : ಅದು ನಮಗೆ ಸಂಬಂಧಿಸಿರುವ ವಿಚಾರ

ಪ್ರಧಾನಿ : ಅಷ್ಟೆ ರಾಜ್ಯದ ಅಳಿವು ಉಳಿವಿಗೂ ಸಂಬಂಧಪಟ್ಟ ವಿಚಾರ. ಪೂರ್ವಜರ ತ್ಯಾಗ ಸಾಹಸಗಳಿಂದಾಗಿ ಜನ್ಮತಾಳಿ ವೃದ್ಧಿ ಹೊಂದಿರುವ ಈ ರಾಜ್ಯ ಶಿವಪ್ಪನಾಯಕರು, ಹಿರೇವೆಂಕಟಪ್ಪನಾಯಕರು, ದೊಡ್ಡಸಂಕಣ್ಣ ನಾಯಕರು, ಅಳಿದ ಸೋಮಶೇಖರ ನಾಯಕರು ಇವರುಗಳು ತಮ್ಮ ತೋಳ್ಬಲವನ್ನು ಮೆರೆದು ಕಟ್ಟಿದ ಈ ರಾಜ್ಯ ದೀರ್ಘಕಾಲದ ಹಾಗೂ ಅನೇಕರ ಪ್ರಯತ್ನ ಬಲಿದಾನಗಳಿಂದಾಗಿ ವಿಶಾಲವಾಗಿ ಹಬ್ಬಿರುವ ಈ ನಾಡು ವಿಜಯನಗರದ ನಂತರದಲ್ಲಿ ಕನ್ನಡಿಗರ ಆಶೋತ್ತರಗಳ ಕೇಂದ್ರವಾದೀ ಕರುನಾಡು ಅಬಲರ ಆಳ್ವಿಕೆಯಿಂದಾಗಿ ಎಲ್ಲಿ ಪತನ ಹೊಂದುವುದೋ, ಕನ್ನಡಿಗರ ಕಲಿತನ, ಪ್ರತೀಕವಾದೀ ಕಲಿವೀಡು ಎಲ್ಲಿ ನಿರ್ನಾಮವಾಗುವುದೋ, ಕನ್ನಡಿಗರ ಹಿತ ಮಣ್ಣುಗೂಡಿ ಇದು ಸಹ ಎಲ್ಲಿ ಮಗದೊಂದು ವಿಜಯನಗರದಂತೆ ಪಾಳುಬೀಳುವುದೋ ಎಂದು ಕಳವಳವಾಗುತ್ತದೆ. ನಮ್ಮ ಅಂತಃಕಲಹಗಳಿಂದಾಗಿ ಮುಸಲರ ದಬ್ಬಾಳಿಕೆಗೆ, ಕ್ರೌರ್ಯಕ್ಕೆ ತುತ್ತಾಗಿ ಕನ್ನಡಿಗರ ಹೆಮ್ಮೆಯ ವಿಜಯನಗರ ನಾಶವಾದುದೇ ಸಾಕು. ಹಿಂದೂಧರ್ಮಕ್ಕೆ, ಕನ್ನಡ ಸಂಸ್ಕೃತಿಗೆ ಬಿದ್ದ ಆ ಪೆಟ್ಟಿನ ನೋವಿನ್ನೂ ಶಮನವಾಗಿಲ್ಲ. ಆ ಸಾಮ್ರಾಜ್ಯದ ನಂತರ ಹಿಂದುಗಳಿಗೆ ಅದರಲ್ಲೂ ಕನ್ನಡಿಗರಿಗೆ ಆಸೆಯನ್ನು ಚಿಗುರಿಸಿದ್ದ ಪ್ರಬಲ ಹಿಂದೂ ರಾಜ್ಯಗಳಲ್ಲೊಂದಾದ ಕನ್ನಡಿಗರು ಹೆಮ್ಮೆಪಟ್ಟುಕೊಳ್ಳಬಹುದಾದ ಕನ್ನಡ ರಾಜ್ಯ 'ಇಕ್ಕೇರಿ ಇಂದು ತುರುಕರ ರಾಜ್ಯದಲ್ಲಿ ವಿಲೀನ ಹೊಂದಲಿದ್ದು ಸಂಪೂರ್ಣವಾಗಿ ಕನ್ನಡತನ ನಾಶವಾಗುವುದೋ ಎಂದು ದುಃಖವಾಗುತ್ತಿದೆ.

ಸು. ಕೃಷ್ಣಯ್ಯ : ಅಂತಹ ಅಸಂಗತವಾಗುವುದಕ್ಕೆ ಎಂದಿಗೂ ಅವಕಾಶವಿಲ್ಲ. ಸೈನ್ಯವಿದೆ. ಹೋರಾಡುವ ಪ್ರಸಂಗವೊದಗಿದರೆ ಹಿಂಜರಿಯುವುದಿಲ್ಲ. ನಮ್ಮ ಸಾಮರ್ಥ್ಯಕ್ಕೂ ಮೀರಿದ ದೈವಯತ್ನಕ್ಕೆ ಯಾರು ಹೊಣೆಯಲ್ಲ. ಆದಕ್ಕೆ ವಿಜಯನಗರದ ವೀರ ರಾಮರಾಯರೇ ಸಾಕ್ಷಿ. ಮಹಾರಾಣಿಯವರು ಸಹ ಪರಾಜಿತರಾಗಲಿಲ್ಲವೆ ?

ಪ್ರಧಾನಿ : ನಾಡಿನ ಅಂತಃಸತ್ವವನ್ನರಿತಿರುವ ನಿಮ್ಮಂತಹವರು ಎದುರಾಗಿ ಮಲೆತು ನಿಂತಿರುವಾಗ... ನಾಡಿಗೆ ಅವರ ಸೇವೆಯನ್ನು ತಪ್ಪಿಸಿದಿರಿ.

ಕಾ. ತಿಮ್ಮಣ್ಣ : ನಾವೇ ಏಕಾಏಕಿ ಕಾರ್ಯಶೀಲರಾಗಲಿಲ್ಲ. ಹೆಂಗಸಿನ ಆಡಳಿತವನ್ನು ಪ್ರಜರೊಪ್ಪಲಿಲ್ಲ. ಅದೇ ಕಾರಣವಾಯಿತು. ಪ್ರಜೆಗಳ ಭಾವಪ್ರಚೋದನೆಯ ಒತ್ತಡವೇ ಲಕ್ಷ್ಮಯ್ಯ , ವೀರಭದ್ರಯ್ಯ ಇವರುಗಳನ್ನು ಈ ಕ್ರಾಂತಿಗೆ ಪ್ರಚೋದಿಸಿತು. ಅವರ ತಪ್ಪನ್ನು ತಿದ್ದಲು ಹೋದ ನಾವು ಪ್ರಜಾಭಿಪ್ರಾಯಕ್ಕೆ ಮಣಿದು ರಾಣಿಯವರನ್ನಿಳಿದು ಬೇರೆಯವರನ್ನು ರಾಜ ಗದ್ದುಗೆಗೆ ಮೇಲೆ ಕುಳ್ಳಿರಿಸಬೇಕಾಗಿದೆ.

ಪ್ರಧಾನಿ : ಸ್ವಾರ್ಥವನ್ನು ಪ್ರಜಾಭಿಪ್ರಾಯವೆಂದು ಸುಳ್ಳು ಮುಸುಕಿನಿಂದ ಮುಚ್ಚಿಕೊಳ್ಳಬೇಡಿ ತಿಮ್ಮಣ್ಣ. ಅಧಿಕಾರ ದಾಹವು ನಿಮ್ಮನ್ನೀ ಕಾಯಕಕ್ಕೆ ಪ್ರಚೋದಿಸಿತಲ್ಲದೆ ರಾಜ್ಯ ಹಿತದ ಯಾವ ಉದ್ದೇಶವೂ ಅಲ್ಲ. ಪ್ರಜಾಪ್ರಿಯವೂ ಅಲ್ಲ. ಒಂದು ತಪ್ಪನ್ನು ತಿದ್ದಲು ಹೊರಟ ನೀವು ಮತ್ತೊಂದು ಘನವಾದ ತಪ್ಪನ್ನೇ ಮಾಡಿರುವಿರೆಂದು ನಾನು ತೋರಿಸಿಕೊಡಬೇಕಾಗಿಲ್ಲ.

ಸು. ಕೃಷ್ಣಯ್ಯ : ಹಾಗೇ ಹೇಳುವುದಕ್ಕೆ ನಿಮಗಿರುವ ಆಧಾರವೇನು ?

ಪ್ರಧಾನಿ : ನಮ್ಮ ನಾಡಿನ ಜನತೆಯನ್ನು ನಾನರಿತಿರುವಷ್ಟು ಚೆನ್ನಾಗಿ ನೀವರಿತಿಲ್ಲ. ರಾಜನಿಷ್ಠ ಜನತೆಯ ಕಂಠದಿಂದು ಮಹಾರಾಣಿಯವರ ಆಡಳಿತದ ವಿಚಾರವಾಗಿ ಅಪಸ್ವರದ ಎಳೆ ಕೂಡ ಹೊರಡಲು ಸಾಧ್ಯವಿಲ್ಲ. ಅಧಿಕಾರ ಲಾಲಸೆಯ ಭೂತ ಹಿಡಿದ ಕೆಲವು ಅಧಿಕಾರಿಗಳು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಆರೋಪವನ್ನು ಪ್ರಜರ ಕೊರಳಿಗೆ ಕಟ್ಟಿದರು. ಈಗಲಾದರೂ ಏನು, ನೀವು ರಾಜಸೂತ್ರಗಳನ್ನು ಹಿಡಿದುಕೊಂಡಿರುವಿರಿ. ಪ್ರಜರ ಅಧಿಕಾರಿಗಳ ಬೆಂಬಲವಿದೆಯೆಂದು ಹೇಳುತ್ತಿದ್ದೀರಿ. ಸೈನ್ಯ ನಿಮ್ಮ ಕೈಯಲ್ಲಿದೆ ಇರಲಿ. ನಾಡಿನ ಪ್ರಜೆಗಳಿಗೆ

ನಿಮ್ಮ ಮೇಲೆ ಸ್ವಲ್ಪವೂ ವಿಶ್ವಾಸವಿಲ್ಲವೆಂಬುದನ್ನು ಮೂರು ದಿನಗಳೊಳಗಾಗಿ ಸ್ಪಷ್ಟಪಡಿಸಿ ತೋರಿಸುತ್ತೇನೆ. ನೋಡುವಿರೇನು :

ಕಾ. ತಿಮ್ಮಣ್ಣ : ನೀವು ಇಕ್ಕೇರಿ ಪ್ರಧಾನಾಮಾತ್ಯರಾಗಿ ಆಡಳಿತದಲ್ಲಿ ಅನುಭವ ಹೊಂದಿದವರಾಗಿ, ನುರಿತ ರಾಜಕಾರಣಿಗಳಾಗಿ, ನಾಡಿನ ಸೂತ್ರದ ಏಳೆಏಳೆಯನ್ನೂ ನಿಮಗೆ ಬೇಕಾದಂತೆ ಆಡಿಸಬಲ್ಲಿರಿ. ಆದರದು ನ್ಯಾಯವೇ ?

ಪ್ರಧಾನಿ : ನಿಮ್ಮ ವರ್ತನೆ ನ್ಯಾಯಸಮ್ಮತದ್ದಾದರೆ ನನ್ನದೇಕೆ ನ್ಯಾಯಬಾಹಿರವಾದುದು ಹೇಳಿ.

ಸು. ಕೃಷ್ಣಯ್ಯ : ಸೋಮಶೇಖರನಾಯಕರು ಶಿವೈಕ್ಯರಾಗುವ ಮೊದಲು ದತ್ತು ಸ್ವೀಕರಿಸದಿದ್ದುದು ಇಷ್ಟೆಲ್ಲ ಗೊಂದಲಕ್ಕೆ ಕಾರಣವಾಯಿತು. ಆದರಿಂದಾಗುವ ಅನಾಹುತಗಳನ್ನೆಲ್ಲ ಮಹಾರಾಣಿಯವರಲ್ಲಿ ಅಂದೇ ನಿವೇದಿಸಿಕೊಂಡಿದ್ದೆವು.

ಪ್ರಧಾನಿ : ನನಗೂ ತಿಳಿದಿದೆ. ಅಂದೂ ಸಹ ಸ್ವಾರ್ಥರಹಿತರಾಗಿ ನೀವು ಆ ಸೂಚನೆಯನ್ನು ಕೊಟ್ಟಿರಲಿಲ್ಲ. ಉನ್ನತಧಿಕಾರಿಗಳಲ್ಲಿ ಎರಡು ಬಣಗಳಾಗಿ ಪರಸ್ಪರರನ್ನು ವಂಚಿಸಲೋಸುಗ ಭಿನ್ನ , ಭಿನ್ನ ವ್ಯಕ್ತಿಗಳನ್ನು ದತ್ತು ಸ್ವೀಕರಿಸುವಂತೆ ಎರಡೂ ಬಣಗಳೂ ಒತ್ತಾಯಿಸಿದುದೆ ಅದನ್ನು ತಡೆಹಿಡಿಯಲು ಕಾರಣವಾಯಿತು. ಒಬ್ಬರನ್ನು ತೃಪ್ತಿಪಡಿಸಿದರೆ ಮತ್ತೊಬ್ಬರ ವಿರೋಧ ಕಟ್ಟಿಕೊಳ್ಳಬೇಕಾಗುತ್ತಿತ್ತು. ಅದಕ್ಕಾಗಿ ಮಹಾರಾಣಿಯವರು ಮೂರನೆಯವನೊಬ್ಬನನ್ನು ಸ್ವೀಕರಿಸಲು ನಿರ್ಧರಿಸಿದ್ದರು. ಅದರೆ ಅಂದಿನ ಪರಿಸ್ಥಿತಿ ಅದಕ್ಕೂ ಅವಕಾಶ ನೀಡಲಿಲ್ಲ.

ಸು.ಕೃಷ್ಣಯ್ಯ : ಇಂದು ಅರಸಾನಾಗಲಿರುವ ವೀರಭದ್ರನಾಯಕರನ್ನು ಮಗನಾಗಿ ಸ್ವೀಕರಿಸಿದ್ದರೆ ನಮ್ಮ ಸಂಪೂರ್ಣ ಬೆಂಬಲ ಮಹಾರಾಣಿಯವರಿಗೆ ದೊರಕುತ್ತಿದ್ದಿತು. ಆಮೇಲೆ ವಿದ್ರೋಹಿಗಳನ್ನು ಸುಲಭದಲ್ಲಿ ಮಟ್ಟ ಹಾಕಬಹುದಾಗಿತ್ತು.

ಪ್ರಧಾನಿ : ವಿರುದ್ಧ ಬಣ ಹೇಳುತ್ತಿದ್ದದೂ ಇದನ್ನೆ ಯಾರ ಮಾತನ್ನಂಗೀಕರಿಸಬೇಕಿತ್ತು. ನೀವೇ ಹೇಳಿ.

ಕಾ.ತಿಮ್ಮಣ್ಣ : ಲಕ್ಷ್ಮಯ್ಯ, ವೀರಭದ್ರಯ್ಯ ಇವರುಗಳು ರಾಜ್ಯದ ಸಿಂಹಾಸನಕ್ಕೆ ಕಳಂಕ ತಟ್ಟುವಂತೆ ಮಾಡಿದ್ದರಿಂದ ಅದನ್ನು ತೊಡೆದುಹಾಕುವ ಸಲುವಾಗಿ ನಾವು ಈ ದಾರಿಯಲ್ಲಿ ಮುಂದುವರಿಯಬೇಕಾಯಿತು. ನ್ಯಾಯವಾದ ಹಕ್ಕುದಾರರನೇ ಸಿಂಹಾಸನಕ್ಕೇರಿಸಲಿದ್ದೇವೆ.

ಪ್ರಧಾನಿ : ಪ್ರಜೆಗಳ ಒಪ್ಪಿಗೆ ದೊರಕಿದೆಯೇ ? ಸಾಮಂತರು ಸಮ್ಮತಿಸಿರುವರೆ ?

ಕಾ. ತಿಮ್ಮಣ್ಣ : ಪ್ರಜೆಗಳು ಬಂಡೇಳದಿರುವುದೇ ಅದಕ್ಕೆ ಸಾಕ್ಷಿ

ಪ್ರಧಾನಿ : ತಪ್ಪು ಕಲ್ಪನೆ ಪ್ರಜೆಗಳ ಉದಾಸೀನತೆಯನ್ನು ಒಪ್ಪಿಗೆಯೆಂದು ಬಗೆದಿದ್ದೀರಿ. ಅವರ ಆಲಸ್ಯಕ್ಕೆ ಕಾರಣವಿಲ್ಲದಿಲ್ಲ. ನಿಮ್ಮ ಸಹಾಯಕ್ಕೆಂದು ಬಂದು ರಾಜಧಾನಿಯಲ್ಲಿ ಭದ್ರವಾಗಿ ತಳವೂರಿರುವ ಬಿಜಾಪುರದ ಸೈನ್ಯದ ದೆಸೆಯಿಂದಾಗಿ ನೀವು ನಿಮ್ಮ ಅಧಿಕಾರವನ್ನು ಹಿಡಿದುಕೊಳ್ಳುವಂತಾಗಿದೆ. ಅದಿಲ್ಲವಾಗಿದ್ದರೆ ಬಣ್ಣವೇ ಬೇರೆಯಾಗುತ್ತಿತ್ತು. ಪ್ರಕ್ಷುಬ್ಧ ಪರಿಸ್ಥಿತಿಯಿಂದಾಗಿ ಜನತೆಯ ಮನ ಕದಡಿದೆ. ಅವರಂತರಂಗದಲ್ಲಿ ಹಾಲಾಹಲ ತುಂಬಿದೆ. ಇದೇ ಸ್ಥಿತಿ ಮುಂದುವರಿಯುವುದಾದರೆ ಅವತಂತರಂಗ ದ್ವೇಷಶಿಳಿ ಜ್ವಾಲಮುಖಿಯಾಗಿ ಯಾವತ್ತು ಸ್ಫೋಟಗೊಳ್ಳುವುದೋ ತಿಳಿಯದು. ರಾಜ್ಯಕ್ಕೆ ಇಂತಹ ದುರಂತ ಸಂಭವಿಸದಿದ್ದರೆ ಸಾಕು.

ಕಾ.ತಿಮ್ಮಣ್ಣ : ಅಂತಹ ದುರ್ದೆಸೆ ಪ್ರಾಪ್ತವಾಗದಿರಲೆಂದೇ ನಾವೂ ಹಾರೈಸುತ್ತೇವೆ. ಈ ಪರ್ವಕಾಲದಲ್ಲಿ ಮಹಾರಾಜರಿಗೆ ಆಡಳಿತದಲ್ಲಿ ನಿಮ್ಮ ಮಾರ್ಗದರ್ಶನದ ಅಗತ್ಯವರಿತು ನಿಮ್ಮನ್ನು ಕರೆದೊಯ್ಯುವ ಸಲುವಾಗಿ ಇಲ್ಲಿಗೆ ಬಂದಿದ್ದೇವೆ.

ಪ್ರಧಾನಿ : ಸಾಕು ನಿಲ್ಲಿಸಿ. ನಾನು ಯಾವ ಮಹಾರಾಜನ ಅಡಿಯಾಳಾಗಿ ದುಡಿಯಾಲೂ ಸಿದ್ಧನಿಲ್ಲ. ನಿಮ್ಮ ಕುತಂತ್ರದ ಬೊಂಬೆಯಾಟದ ಶಿಶು ಇಕ್ಕೇರಿಯ ಅರಸು, ಸ್ವಾರ್ಥಪರರದ ನೀವು, ರಾಜ್ಯದ ಉದ್ಧಾರಕರು. ನಿಮ್ಮ ಸೇವೆಯನ್ನು ನಾನಂಗೀಕರಿಸಬೇಕೆ? ನ್ಯಾಯಬಾಹಿರವಾದ ವಿಚಾರಗಳಿಗೆ ನನ್ನ ಮನಸ್ಸು ಒಪ್ಪುವುದಿಲ್ಲ. ನನ್ನ ಸೇವೆಯೇನಿದ್ದರೂ ಮಹಾರಾಣಿಯವರ ಉತ್ಕರ್ಷಕ್ಕೆ ಮೀಸಲು.

ಸು.ಕೃಷ್ಣಯ್ಯ : ಮಹಾರಾಣಿವರಿಗಿಂತಲೂ ರಾಜ್ಯ ರಾಜಸಿಂಹಾಸನ ಹಿರಿದೆಂಬುದನ್ನು ನಿಮ್ಮಂತಹ ರಾಜನಿಷ್ಠರಗೆ ಕರ್ತವ್ಯನಿಷ್ಠ ಅಧಿಕಾರಿಗಳಿಗೆ ನಾವು ಹೇಳಬೇಕೆ? ರಾಜ್ಯದೇಳಿಗೆಯಲ್ಲಿ - ಉನ್ನತಿ ನಿಮ್ಮ ಕಷ್ಟದ ಫಲವೂ ಸೇರಿದೆ. ಆವರ ವಿನಾಶವನ್ನು ನೀವು ಸಹಿಸುವಿರಾ?

ಪ್ರಧಾನಿ : ನಿಮ್ಮಂತವರು ರಾಜ್ಯವನ್ನು ವಿನಾಶದತ್ತ ಕೊಂಡೊಯ್ಯುತ್ತಿರಬೇಕಾದರೆ ಹುಲುಮನುಷ್ಯ ನನ್ನೊಬ್ಬನಿಂದ ರಾಜ್ಯಕ್ಕೇನು ಪ್ರಯೋಜನವಾದೀತು. ನನ್ನ ಸೇವೆ ಅಗತ್ಯವೆನಿಸಿದಾಗ ನಾಡು ನನ್ನನ್ನು ಕರೆಸಿಕೊಳ್ಳುವುದು. ನ್ಯಾಯವಿಲ್ಲದೆಡೆಯಲ್ಲಿ ನಿಂತು ಕೆಲಸಮಾಡಲು ನಾನು ಸಿದ್ಧನಿಲ್ಲ. ಅದು ದೇಶಸೇವೆಯಾಗಲಾರದು. ವ್ಯಕ್ತಿಪೂಜೆಯಾಗುವುದು. ರಾಜದ್ರೋಹವಾಗುತ್ತದೆ.

ಕಾ.ತಿಮ್ಮಣ್ಣ : ರಾಜ್ಯದ ಘನತೆ ಗೌರವಗಳನ್ನು ಕಾಪಾಡಬೇಕಾದುದು ರಾಜ್ಯದ ಪ್ರತಿಯೊಬ್ಬ ಕರ್ತವ್ಯ. ನಮ್ಮ ಶ್ರಮವೂ ಅದಕ್ಕಾಗಿಯೇ. ಅನೈತಿಕ ಸಂಬಂಧದಿಂದ ದಾಸಿಯೊಬ್ಬಳಲ್ಲಿ ಜನಿಸಿರುವ ಅಂಧಕ ವೆಂಕಟಯ್ಯನ ಮಗ ಕುತ್ಸಿತ ಶಿವಪ್ಪನಾಯಕನನ್ನು ಗದ್ದುಗೆಯಿಂದ ತಳ್ಳಿದುದೇಕೆ! ಕುಕಹೀನನಾದ ಅವರ ಆರೋಹಣದಿಂದ ಸಿಂಹಾಸನಕ್ಕೆ ತಟ್ಟಿದ ಮೈಲಿಗೆಯನ್ನು ಕಾಜ್ಯಕ್ಕೆ ತಟ್ಟಿದ ಕಲಂಕವನ್ನು ತೊಡೆದುಹಾಕುವ ಸಿಂಹಾಸನಕ್ಕೆ ತಟ್ಟಿದ ಮೈಲಿಗೆಯನ್ನು ರಾಜ್ಯಕ್ಕೆ ತಟ್ಟಿದ ಕಲಂಕವನ್ನು ತೊಡೆದುಹಾಲುವ ಸಲುವಾಗಿಯಲ್ಲವೆ? ಸೋಮಶೇಖರನಾಯಕರ ಅಸ್ವಸ್ಥತೆಯ ಕಾಲದಿಂದಲೂ ಮಲೆತು ಕೊಬ್ಬಿ ಮರೆಯುತ್ತಾ ಅಧಿಕಾರಕ್ಕಾಗಿ ಸಂಚು ನಡೆಸಿ ಸರ್ವಾಧಿಕಾರಿಗಳಾಗಿ ಇಕ್ಕೇರಿಯನ್ನು ಪತನದ ಪಥದೆಡೆಗೊಯ್ಯುತ್ತಿದ್ದ ಲಕ್ಕ ೃ ಯ ೨ ್ಯ ವೀರಭದ್ರಯ್ಯ, ವಿನಾಶಕಾರಿ ವೈದ್ಯರಾಜ ಬರುವೆ ಮಾವುತ ಮೊದಲಾವರನ್ನು ಮಟ್ಟ ಹಾಕದಿರುತ್ತಿದ್ದರೆ ನಾಡು ಏನಾಗುತ್ತಿತ್ತೊ ಬಲ್ಲವರಾರು? ಇವೆಲ್ಲದರಲ್ಲೂ ರಾಜ್ಯದ ಹಿತ ಅಡಗಿಲ್ಲವೆ ?

ಪ್ರಧಾನಿ : ಅಂತರಂಗವನ್ನು ಮುಚ್ಚಿಡಲು ವಸ್ತುಸ್ಥಿತಿಯನ್ನು ಮರೆಮಾಚುವಿರೇಕು ತಿಮ್ಮಣ್ಣ . ಲಕ್ಕಷ್ಮಯ್ಯ ವೀರಭದ್ರಯ್ಯ ಇವರುಗಳನ್ನು ನೀವು ಹೊಡೆದೋಡಿಸಿದಿರೆ? ಅಲ್ಲದೆ ಕುತ್ಸಿತ ಶಿವಪ್ಪನಾಕನು ಇಕ್ಕೇರಿಯ ಅರಸಾದುದೆಂದು ಲಕ್ಕಷ್ಮಯ್ಯ, ವೀರಭದ್ರಯ್ಯ ಇವರುಗಳು ಸರ್ವಾಧಿಕಾರಿಗಳಾದುಲೆಲ್ಲಿ? ಇವೆಲ್ಲ ಸತ್ಯದ ವಿಪರ್ಯಾಸವಷ್ಟೆ. ಅರಸೆಂದಾಗಲಿ, ಅಧಿಕಾರಿಗೆಂದಾಗಲಿ ತಮ್ಮಷ್ಟಕ್ಕೆ ತಾವೇ ಘೋಷಿಸಿಕೊಂಡ ಮಾತ್ರಕ್ಕೆ ಅವರಂತಾಗಲು ಸಾಧ್ಯವೆ? ಹುಚ್ಚು ಸಾಹಸದಿಂದ ಘೋಷಿಸಿಕೊಂಡರು. ಸಿಂಹಾಸನದ ಮೇಲೆ ಕೂರಿಸಿದರು. ಅದರೆ ರಾಜ್ಯದ ಜನತೆ ಒಪ್ಪಿಕೊಂಡಿತ್ತೇನು? ಮಹಾರಾಣಿಯವರ ಹೆಸರಿನಿಂದ ಹೊರಡಿಸಲ್ಪಟ್ಟ ಮುದ್ರೆಯೊತ್ತಿದ ಆಜ್ಞೆ ಮಾತ್ರ ರಾಜಾಜ್ಞೆಯೆಂದು ಪಾಲಿಸಲ್ಪಡುತ್ತಿತ್ತೆಂಬುದು ಗಮನಾರ್ಹ. ನೀವು ರಾಜಧಾನಿಯಿಂದ ದೂರವಿದ್ದು ಹೇಳಿಕೆಯ ಅಂತೆಕಂತೆಗಳಿಗೆ ಕಿವಿಗೊಟ್ಟು ಏನೆಲ್ಲ ನಡೆಸಿದಿರಿ.

ಸು.ಕೃಷ್ಣಯ್ಯ : ಇದೇನು ಪ್ರಧಾನಿಗಳೇ! ಲಕ್ಷ್ಮಯ್ಯ ಅವನ ಸಂಗಡಿಗರೂ ಸೇರಿ ರಾಣಿಯವರನ್ನು ಅಧಿಕಾರದಿಂದ ಪದಚ್ಯುತಿಗೊಳಿಸಿದುದು ಸುಳ್ಳೆ ? ಅಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ಕುತ್ಸಿತ ಶಿವಪ್ಪನಾಯಕನನ್ನು ಪಟ್ಟದ ಮೇಲೆ ಕೂರಿಸಿದುದು ಸರಿಯೇ?

ಪ್ರಧಾನಿ : ಆಡಳಿತವು ಅವರಾದಾಗಿದ್ದರೆ ಅದನ್ನುಳಿಸಿಕೊಳ್ಳಲು ಅವರು ನಿಮ್ಮನ್ನೆದುರಿಸಿ

ಹೋರಾಡಲಿಲ್ಲವೇಕೆ? ಸುಮ್ಮನಿರುವರೆಂದು ಮಾತ್ರ ಭಾವಿಸಬೇಡಿ. ನಿಮ್ಮ ಆಡಳಿತವನ್ನುರುಳಿಸಲು ಅವರೂ ಸಂಚು ನಡೆಸುವವರೆ. ರಾಜ್ಯದಲ್ಲಿ ಹೀಗೆ ವಿಪ್ಲವ, ಕ್ರಾಂತಿ ಪ್ರತಿಕ್ರಾಂತಿಗಳು ನಡೆಯುತ್ತಾ ದಿನಕ್ಕೊಬ್ಬೊಬ್ಬರ ಅಧಿಕಾರ ಪತನದಿಂದ ಬೇರೊಬ್ಬರು ಅಧಿಕಾರಕ್ಕೇರುತ್ತಾ ಬರುವುದಾದರೆ ನಾಡಿನಬಿವೃದ್ಧಿಗೆ ಪ್ರಗತಿಗೆ, ದೇಶದ ಶಾಂತಿಗೆ ಅವಕಾಶವೆಲ್ಲಿ? ಸುಭದ್ರ ಆಡಳಿತ ನೆಲೆಸುವುದೆಂತು ಯಸಾಧ್ಯ?

ಸು.ಕೃಷ್ಣಯ್ಯ : ಅವರು ಅಧಿಕಾರ ಹಿಡಿದು ಕುತ್ಸಿತ ಶಿವಪ್ಪನಾಯಕರನ್ನು ಪಟ್ಟಕ್ಕೇರಿಸಿದರೆಂದು ತಿಳಿದು ನಾವು ಈ ರೀತಿ ವರ್ತಿಸಿದೆವಲ್ಲದೆ ಮಹಾರಾಣಿವರನ್ನು ಪದಚ್ಯುತಗೊಳಿಸಬೇಕೆಂದಲ್ಲವಲ್ಲ.

ಪ್ರಧಾನಿ : ಮಾತಿನಿಂದ ಜಾರಿಕೊಳ್ಳಲು ನೀವು ಯತ್ನಿಸಬೇಡಿ. ವೀರಭದ್ರಯ್ಯನನ್ನು ದತ್ತಕ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದಾಗಲೇ ನಿಮ್ಮ ಅಂತಸ್ಥ ವಿಚಾರವೇನೆಂಬುದನ್ನು ತಿಳಿದುಕೊಂಡಿದ್ದೇನೆ. ನಮ್ಮ ನಮ್ಮಲ್ಲಿಯ ಅಭಿಪ್ರಾಯ ಬೇಧವನ್ನು ನಾವೇ ಒಂದೆಡೆ ಕುಳಿತು ವಿಮರ್ಶಿಸಿ ಒಂದು ನಿರ್ಧಾರ ಕೈಗೊಳ್ಳುವ ಮೂಲಕ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದಿತ್ತು. ನಮ್ಮ ರಾಜಕಾರಣದಲ್ಲಿ ಅನ್ಯರು ತಲೆಹಾಕುವುದನ್ನು ವಿರೋಧಿಸುವುದು ಬಿಟ್ಟು ನಾವೇ ಅನ್ಯರ ಪ್ರವೇಶಕ್ಕೆ ಅವಕಾಶ ಮಾಡಿಕೊಡುವುದು ದೇಶಹಿತಕ್ಕೆ ಧಕ್ಕೆತರುವಂತಹ ಕೃತಿಯಲ್ಲವೆ? ನನಗಿದು ತುಂಬಾ ಬೇಸರ ತಂದಿದೆ

ಕಾ.ತಿಮ್ಮಣ್ಣ : ಪ್ರತಿಯೊಬ್ಬರನ್ನೂ ಮೆಚ್ಚಿಸುವುದು ಯಾರಿಂದಲೂ ಸಾಧ್ಯವಿಲ್ಲ. ಬಹುಮತದಂತೆ ನಡೆದುಕೊಳ್ಳಬೇಕಾಗುವುದು. ಪ್ರಜಾಭಿಪ್ರಾಯದಂತೆ ನಾವು ವರ್ತಿಸಿದ್ದೇವೆ

ಪ್ರಧಾನಿ : ಇಂತಹ ಕುಂಟುನೆಪವನ್ನು ಮುಂದೆ ಮಾಡಿ ಕಣ್ಣುಕಟ್ಟಲು ಪ್ರಯತ್ನಿಸಬೇಡಿ ತಿಮ್ಮಣ್ಣ. ರಾಜ್ಯದ ಭದ್ರತೆಯ ಕಡೆ ಲಕ್ಷ್ಯಕೊಡಿ. ನಾಡನ್ನು ನಾಡಿನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ. ಇಂದಿನ ವಿಷಯ ಪರಿಸ್ಥಿತಿಯ ಅರಿವು ನಿಮಗಿದೆ. ಸುತ್ತಮುತ್ತಲಿನ ಇಕ್ಕೇರಿಯ ಸಾಮಂತ ಪಾಳೆಯಗಾರರು ರಾಜ್ಯದ ಪತನವನ್ನು ಹಾರೈಸುತ್ತಾ ಸ್ವಾತಂತ್ರರಾಗಲು ಸಮಯವನ್ನೇದುರು ನೋಡುತ್ತಿದ್ದಾರೆ. ಈಗಿನ ಮಹಿಷೂರ ದೊರೆಗಳು ಬಲಶಾಲಿಗಳು. ನಮ್ಮ ನಮ್ಮಲ್ಲಿ ಸ್ನೇಹದ ಮಧುರ ಭಾಂಧವ್ಯ ಮೊದಲಿನಿಂದಲೂ ಬೆಳೆದುಬಂದಿಲ್ಲ. ರಾಜಭ್ರಷ್ಟ ಮುಮ್ಮಡಿ ಶ್ರೀರಂಗರಿಗೆ ಶಿವಪ್ಪನಾಯಕರು ಸಕ್ಕರೆಪಟ್ಟಣದಲ್ಲಿ ಪಟ್ಟಗಟ್ಟಿ ವಿಜಯನಗರದ ಪುನಃಪ್ರತಿಷ್ಠಾಪನೆ ಮಾಡಿದುದರಿಂದಂತೂ ನಮ್ಮ ಮೇಲೆ ಅವರ ದ್ವೇಷ ಹೆಚ್ಚಾಗಿದೆ. ಎಷ್ಟೋ ವೇಳೆ ನಮ್ಮ ನಮ್ಮಲ್ಲಿ ಯುದ್ಧಗಳಾಗಿವೆ. ಮುಂದೂ ಆಗಬಹುದು. ಬಸ್ವಯ್ಯನು ಅವರ ಸಹಾಯ ಕೋರಲೂ ಬಹುದು ನಮ್ಮ ನಾಡಿನ ವಿಸ್ತಾರ, ಸಂಪತ್ತು ಶತ್ರುಗಳು ಎಲ್ಲರ ಕಣ್ಣು ಕುಕ್ಕುತ್ತಿವೆ. ಇದಲ್ಲದೆ ರಾಜ್ಯದ ಪ್ರಚ್ಛನ್ನ ಸಮರ ದೇಶದ ಭದ್ರತೆಯ ಅಡಿಗಲ್ಲನ್ನು ಅಲುಗಿಸುತ್ತಿದೆ. ಇವೆಲ್ಲಾ ಒಂದೆಡೆ ಹಾಗಿರಲಿ. ಮುಸಲ್ಮಾನ ರಾಜ್ಯಗಳು ಹಿಂದೂ ಅರಸೊತ್ತಿಗೆಯನ್ನು ಮಣ್ಣುಗೂಡಿಸಲು ಹೊಂಚುಹಾಕಿ ಕಾಯುತ್ತಿವೆ. ಬಿಜಾಪುರದವರಂತೂ ನಮಗೆ ಬದ್ಧದ್ವೇಷಿಗಳು. ವೀರಭದ್ರನಾಯಕರ ಕಾಲದಲ್ಲಿ ಬಿಜಾಪುರದ ದಳಪತಿ ರಣದೂಳಖಾನನು ರಾಜ್ಯವನ್ನೇ ಲೂಟಿ ಮಾಡಿದ. ಮೊದಲಿನ ರಾಜಧಾನಿಯಾದ ಇಕ್ಕೇರಿಯನ್ನು ನಾಶಮಾಡಿದ. ಹಿಂದೂ ರಾಜ್ಯಗಳ ಅಸ್ತಿತ್ವವನ್ನೇ ನಾಶಮಾಡುವುದಾಗಿ ಅವನು ಪಣತೊಟ್ಟಿದ್ದ. ಮೈಸೂರಿನ ರಣಧೀರ ಕಂಠೀರವರು ಅವನನ್ನು ಪರಾಭವಗೊಳಿಸದಿದ್ದಿದ್ದರೆ ಹಿಂದೂ ರಾಜ್ಯಗಳೇ ನಿರ್ನಾಮವಾಗುತ್ತಿದ್ದವು.

ಸು.ಕೃಷ್ಣಯ್ಯ : ಇವೆಲ್ಲ ನಮಗೂ ತಿಳಿದ ವಿಷಯವೇ ಸರಿ.

ಪ್ರಧಾನಿ : ತಿಳಿದಿದೆ, ಹೌದು ಆದರೂ ಮತ್ತೊಮ್ಮೆ ಜ್ಞಾಪಿಸಿಕೊಳ್ಳಿ. ಇಂದಿನ ನಮ್ಮ ಪರಿಸ್ಥಿತಿಗೆ ಅವೆಷ್ಟು ಹೊಂದಿಕೊಂಡಿವೆಯೆಂದು ತಿಳಿದುಕೊಳ್ಳಿ. ಪ್ರತಿಯೊಂದು ದಿಕ್ಕಿನಿಂದಲೂ ನಾವು

		ಅವಗಢವನ್ನು ನಿರೀಕ್ಷಿಸುತ್ತಿರಬೇಕಾಗಿದೆ. ಇತಿಹಾಸ ಪರಿವರ್ತನೆಯನ್ನು ತಾಳಿ ಹಾಕಲಾಗದು.
ಕಾ.ತಿಮ್ಮಣ್ಣ	:	ಇನ್ನೇನು ಹೇಳಿ.
ಪ್ರಧಾನಿ	:	ನಿರ್ಲಕ್ಷ್ಯರಾಗಿ ಕೇಳುವುದರಿಂದ ಪ್ರಯೋಜನವೇನು ತಿಮ್ಮಣ್ಣ, ನಮ್ಮ ವಿನಾಶವನ್ನೇ ಹಾರೇಸುತ್ತಿರುವ ಬಿಜಾಪುರದವರ ಸಹಾಯವನ್ನು ನೀವು ಕೋರಿದಿರಿ. ಅವರೂ ನೀಡಿದರು, ಏಕೆ'/ ಸ್ವಾಮಿ ಕಾರ್ಯದ ಹಿಂದೆ ಸ್ವಕಾರ್ಯ ಸಾಧನೆಯ ಉದ್ದೇಶದಿಂದ. ಅವರು ನಮ್ಮ ನೂತನ ರಾಜಧಾನಿಯಾದ ಬಿದನೂರಿನ ಸ್ಥಳ ಪರಿಶೀಲನೆ ಮಾಡಿಕೊಂಡರು. ಸದ್ಯಕ್ಕೆ ಉತ್ತರದ ಮೊಗಲ್ ಬಾದುಷಹ ಔರಂಗಜೇಬನ ಹದ್ದಿನ ಕಣ್ಣು ನಮ್ಮ ಮೇಲೆ ಬಿದ್ದಿಲ್ಲ. ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ನಿಮ್ಮ ರಾಜರು ರಾಜ್ಯವನ್ನು ಕಾಪಾಡಲು ಶಕ್ತರಾಗಿರುವರೆ? ಸೈನ್ಯವೆಷ್ಟಿದ್ದರೂ ಸಮರ್ಥರಾದವರ ನಿರ್ದೇಶನವಿಲ್ಲದೆ ಕಾರ್ಯ ನಿರ್ವಹಣೆ ಸಮರ್ಪಕವಾಗಿ ಸಾಗದು. ರಾಜಕಾರಣದ ಗಂಧಗಾಳಿ ಸಹ ಇಲ್ಲದವರು ಏನು ಮಾಡಲು ತಾನೆ ಸಾಧ್ಯ ?
ಸು.ಕೃಷ್ಣಯ್ಯ	:	ನಾವು ತಪ್ಪು ಮಾಡಿದೆವೆಂದೇ ತಿಳಿದುಕೊಳ್ಳೋಣ, ಈಗ ನಾವೇನು ಮಾಡಬೇಕೆನ್ನುವಿರಿ?
ಪ್ರಧಾನಿ	:	ನಿಮಗೆ ರಾಜ್ಯದ ಹಿತದ ಬಗ್ಗೆ-ಆಗುಹೋಗಿನ ಬಗ್ಗೆ ಆಸಕ್ತಿಯಿದೆ. ಸಂಕುಚಿತ ಭಾವನೆಯನ್ನು ತೊಡೆದುಹಾಕಿ. ದೇಶದೇಳ್ಗೆಗಾಗಿ, ಕನ್ನಡದ ಮೇಲ್ಮೆಗಾಗಿ ದುಡಿಯುವ ಮುಂದಾಗಿ, ಪ್ರಜೆಗಳ ಅಶೋತ್ತರಗಳಿಗೆ ಮನ್ನಣೆಕೊಡಿ. ಇಂದಿಗೂ ಪ್ರಜೆಗಳಿಗೆ ಚನ್ನಮ್ಮಾಜಿಯವರ ಮೇಲೆ ಅಪಾರ ವಿಶ್ವಾಸವಿದೆ. ನೀವು ಒಮ್ಮತದಿಂದ ಸಮ್ಮತಿಸಿ ರಾಜಕಾರ್ಯಗಳನ್ನು ಮಹಾರಾಣಿಯವರಿಗೆ ವಹಿಸಿಕೊಟ್ಟು ಅವರಿಗೆ ಬೆಂಬಲವಾಗಿ ನಿಂತು ನಾಡಿನ ಸರ್ವತೋಮುಖವಾದ ಏಳಿಗೆಗೆ ಅವಕಾಶ ಮಾಡಿಕೊಡಿ. ಅವರು ಕೆಚ್ಚೆದೆಯ ವೀರ ಕನ್ನಡ ಮಹಿಳೆ. ಅಂತಹ ದಿಟ್ಟರ-ಧೀರರ ಆಡಳಿತ ಇಕ್ಕೇರಿಗಿಂದ ಅತ್ಯಗತ್ಯವಾಗಿದೆ. ರಾಜ್ಯದ ಅಂತಃಕಲಹದ ವಿಪನ್ನಾವಸ್ಥೆ ಕೊನೆಗೊಂಡು ರಾಜಕೀಯರ ವಾತಾವರಣ ಇನ್ನಾದರೂ ತಿಳಿಯಾಗುದುವಕ್ಕೆ ನಿಮ್ಮ ಸಂಪೂರ್ಣ ಬೆಂಬಲ ಕೊಡಿ. (ತಿಮ್ಮಣ್ಣ ಕೃಷ್ಣಯ್ಯ ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತ ಏನೋ ಹೇಳಬೇಕೆಂದಿರುವುದನ್ನು , ಹೇಳಲು ಹಿಂಜರಿಯುತ್ತಿರುವುದನ್ನು ತಿಳಿದು) ಏನದು, ಹೇಳಿ. ಏನಾದರೂ ಸಂಶಯವಿದ್ದರೆ ಈಗಲೇ ಪರಿಹರಿಸಿಕೊಳ್ಳುವುದೊಳ್ಳೆಯದು.)ಆದರೂ ಅವರು ಅನುಮಾನಿಸುತ್ತಿರುವರು) ನಿಮ್ಮ ವಿಚಾರವೇನೆಂದು ತಿಳಿದುಕೊಂಡಿರುವೆನು ತಿಮ್ಮಣ್ಣ. ನೀವಾಗಿ ಹೇಳಲು ಸಂಕೋಚಪಟ್ಟುಕೊಳ್ಳುವುದಾದರೆ ನಾನೇ ಅದನ್ನು ಬಹಿರಂಗಪಡಿಸುವೆನು. ನೀವಿಲ್ಲಿಗೆ ಬಂದಾಗ, ನನ್ನನ್ನು ನನ್ನ ಅಧಿಕಾರಕ್ಕೆ ಮರಳಬೇಕೆಂದು ಕೇಳಿದಾಗ ಆ ಕಾರಣವನ್ನರಿತೆ. ಸಂದಿಗ್ಧತೆಯ ಒತ್ತಡ ನಿಮ್ಮನ್ನಿಲ್ಲಿಗೆ ಎಳೆತಂದಿದೆ. ನನ್ನ ಪತ್ರ ನೀವಿಲ್ಲಿಗೆ ಬರಲು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಅಂತರಂಗ ಬೇರೆಯಾದರೂ ತೋರಿಕೆಯ ಬಿಂಕ ನಿಮ್ಮಲ್ಲಿ ಒಂದು ಸಣ್ಣ ತಪ್ಪು ಎಷ್ಟೊಂದು ಅನರ್ಥಕ್ಕೆ ಕಾರಣವಾಗಿದೆ. ಹೆದರಬೇಕಾದ ಕಾರಣವಾಗಿದೆ. ಹೆದರಬೇಕಾದ ಕಾರಣವಿಲ್ಲ. ಇಕ್ಕೇರಿಯನ್ನು ಕಬಳಿಸಬೇಕೆಂದು ಕಾದು ಕುಳಿತಿರುವ ಆ ಗೃಧ್ರವನ್ನು ಹೊಡೆದೋಡಿಸೋಣ. ಅವನ ದುರಾಸೆಗೆ ಸರಿಯಾದ ಪುರಸ್ಕಾರ ನೀಡೋಣ. ನೀವೆಲ್ಲ ಸಹಕರಿಸುದುದಾದರೆ ಅದೆಷ್ಟರ ಕೆಲಸ.
ಕಾ.ತಿಮ್ಮಣ್ಣ	:	ಅದು ಸಾಧ್ಯವಿದೆಯೆ? ಅವನ ಮೇಲೆ ಯುದ್ಧ ಹೂಡಬೇಕಾದರೆ ಸಾಧನ ಸಾಮಗ್ರಿಗಳು, ಸೈನ್ಯ ಹಿರಿಯ ಪ್ರಮಾಣದಲ್ಲಿ ಬೇಕಲ್ಲವೇ ಪ್ರಧಾನಿಗಳೆ?
ಪ್ರಧಾನಿ	:	ನಾಡಜನ ನಮ್ಮ ಹರಿಬಕ್ಕೊದಗುತ್ತಾರೆ ತಿಮ್ಮಣ್ಣ ಮಹಾರಾಣಿಯವರದ ಹೆಸರು ಸಂಜೀವಿನಿಯಾಗಿ ತಾರಕಮಂತ್ರವಾಗಿ ಮಲಗಿದ್ದ ಅವರನ್ನು ಹೊಡೆದೆಬ್ಬಿಸುವುದು. ರಾಜಧಿನಿಯಲ್ಲಿರುವ ಸೈನ್ಯದ ನೋಡಿಕೊಳ್ಳುತ್ತೇನೆ. ಇಲ್ಲಿಯೂ ಸಾಕಷ್ಟು ಸೈನ್ಯ, ಬೇಕಷ್ಟು

ಯುಯುದ್ಧಸಾಮಗ್ರಿಗಳಿಗೆ. ಮಿಕ್ಕೆಲ್ಲ ವ್ಯವಸ್ಥೆ ನನಗಿರಲಿ. ಆದರೆ ಸಮರ ಸನ್ನಾಹದ ಸುಳಿವು ತಪ್ಪಿ ಕೂಡ ಆ ಖಾನನಿಗೆ ತಿಳಿಯದಂತೆ ಎಚ್ಚರಿಕೆ ವಹಿಸಬೇಕು. ಅಷ್ಟೇ ಗೌಪ್ಯ ನಿವಿಲ್ಲಿಗೆ ಬಂದ ವಿಚಾರದಲ್ಲೂ ಇರಬೇಕು. ಸಮಯವರಿತು ಅವನು ಅಜಾಗರೂಕನಾಗಿರುವಾಗ ಇಕ್ಕೆಡೆಯಿಂದ ಒಮ್ಮೇಲೆ ಹಲ್ಲೆ ನಡೆಸಬೇಕು.

ಕಾ.ತಿಮ್ಮಣ್ಣ : ಮಹಾರಾಣಿಯವರ ಅಭಿಪ್ರಾಯವನ್ನು ತಿಳಿದುಕೊಳ್ಳುವು ಲೇಸಲ್ಲವೇ?

ಪ್ರಧಾನಿ : ನೀವೇ ಅಮೇಲೆ ಅವರನ್ನು ಬೇಟಿ ಮಾಡಿ ಮಾತಾಡುವಿರಂತೆ, ಪ್ರಯಾಣದ ಆಯಾಸದಿಂದ ನೀವು ಬಳಲಿದ್ದೀರಿ. ಮೊದಲು ನೀವು ವಿಶ್ರಾಂತಿಯನ್ನು ಪಡೆದು ದೇಹಶ್ರಮವನ್ನು ಪರಿಹರಿಸಿಕೊಳ್ಳಿ ಆಗಬಹುದಲ್ಲವೆ?

ಸು.ಕೃಷ್ಣಯ್ಯ : ತಮ್ಮ ಅಭಿಪ್ರಾಯದಂತೆಯೇ ಆಗಲಿ (ಏಳುವರು)

– ತೆರೆ –

ರಸ್ತೆ ಪ್ರವೇಶ 19

1ನೇ : ಯಾವುದೋ ಅನಿಷ್ಟಗ್ರಹದ ವಕ್ರದೃಷ್ಟಿ ರಾಜ್ಯದ ಮೇಲೆ ಬಿದ್ದಿರಬೇಕು. ಅದುದರಿಂದಲೇ ವಿಶೇಷದ ಮೇಲೆ ವಿಶೇಷ, ಘಟನೆಗಳ ಮೇಲೆ ಘಟನೆಗಳು ಜರುಗುತ್ತಿವೆ. ಘಟಿತಾಘಟಿತಗಳು ಸಂಘಟಿಸಿ ಸಂಕಟಕ್ಕೆ ಕಾರಣವಾಗುತ್ತಿದೆ.

2ನೇ : ಒಮ್ಮೆ ಅಪಜಯ ಹೊಂದಿ ಮರೆಯಾಗಿದ್ದ ಮಹಾರಾಣಿವರು ಇದ್ದಕ್ಕಿದ್ದ ಹಾಗೆ ಖಾನರ ಮೇಲೆ ತಿರುಗಿಬಿದ್ದಿರುವುದು ಆಶ್ಚರ್ಯವೇ ಸರಿ.

1ನೇ : ಆಗ ಪರಾಜಿತರಾದವರು ಈಗ ಜಯಗಳಿಸುವುದು ಹೇಗೆಂದು ನಿಮ್ಮ ಸಂದೇಹ. ಅಗಿದ್ದ ಪರಿಸ್ಥಿತಿಯೇ ಬೇರೆ. ಈಗಿರುವುದು ಬೇರೆ. ಆಗ ಸೈನ್ಯದಲ್ಲಿ ಒಡಕಿತ್ತು ಖಾನನಿಗೆ ಸಮಸ್ತರ ಬೆಂಬಲವಾಗಿದ್ದರು.

2ನೇ : ಈಗಲೂ ಇದೇಯಲ್ಲ!

1ನೇ : ಅದೇ ನಿಮಗೆ ತಿಳಿದಿಲ್ಲ. ಆಗ ಖಾನನ್ನು ಬೆಂಬಲಕ್ಕೆ ಕರೆದಿದ್ದ ತಿಮ್ಮಣ್ಣ ಮಂತ್ರಿವರು ಈಗ ಅವನಿಗೆ ವಿರೋಧವಾಗಿ ಮಹಾರಾಣಿಯವರನ್ನು ಕೂಡಿಕೊಂಡಿರುವಂತೆ.

2ನೇ : ಇದು ಸುಳ್ಳು. ಖಾನನ ಸಹಾಯದಿಂದ ಮಹಾರಾಣಿಯವರನ್ನು ಸ್ಥಾನಭ್ರಷ್ಟಗೊಳಿಸಿ ಅಧಿಕಾರ ಹಿಡಿದುಕೊಂಡರು. ಈಗದಕ್ಕೆ ಎಳ್ಳುನೀರು ಬಿಡುತ್ತಾರೆಂದರೆ ಅಂತಹ ಮೂಢರೇನು ಅವರು?

1ನೇ : ಮೊದಲು ಅವರು ತಿಳಿದುಕೊಂಡುದು ಮುಖೀಚ್ಛನ ಎಂದು ಈಗ ಅರಿವಿಗೆ ಬಂತು. ಅ ತಪ್ಪಿದ ದಾರಿಯನ್ನು ಈಗ ಸರಿಪಡಿಸಿಕೊಳ್ಳುತ್ತಿದ್ದಾರೆ. ಈ ಮಾರ್ಗವನ್ನು ತುಳಿಯದಿದ್ದರೆ ರಾಜ್ಯವನ್ನು ಖಾನನಿಗೆ ಧಾರೆಯೆರೆದು ಕೊಡುವ ಕಾಲ ಪ್ರಾಪ್ತವಾಗಿದೆ.

2ನೇ : ಮಹಾರಾಣಿವರೂ ಇವರೂ ಒಂದಾದ ಬಗೆ ಹೇಗೆ?

1ನೇ : ಪ್ರಧಾನಿ ನರಸಪ್ಪಯ್ಯನ ಚಾಣಕ್ಯ ತಂತ್ರದ ಸಿದ್ಧಿ ಅದೆಂದು ಹೇಳುತ್ತಿದ್ದಾರೆ. ಸೈನ್ಯ ಸಾಲದಾದರೆ ಅಗತ್ಯವನ್ನು ಪೂರೈಸಲು ಜನರನ್ನೂ ಹುರಿದುಂಬಿಸಿ ಸಜ್ಜುಗೊಳಿಸುತ್ತಿದ್ದಾರಂತೆ.

2ನೇ : ಇದೂ ಒಂದು ರೀತಿಯ ಮಾರಣ ಅಗ್ನಿ. ನರಮೇಧ.

1ನೇ : ಈ ಸಾಹಸ ವಿಫಲವಾಗಿ ಖಾನ ಈ ರಾಜ್ಯದಲ್ಲೇ ತಳವೂರಿದರೆ ರಾಜ್ಯದ ಪ್ರತಿ ನರಮೇಧ ಪ್ರಾರಂಭವಾಗುತ್ತೆ. ಈಗಲೇ ಅಕ್ಕಪಕ್ಕದ ಪಾಳೆಯಗಾರರನ್ನು ಗೆಲ್ಲಲು ಸೈನ್ಯ ಕಳಿಸಿರುವನಂತೆ.

2ನೇ : ಆಡಳಿತ ನಡೆಸುವವರ ಕುಲ, ಗೋತ್ರಗಳನ್ನು ಕಟ್ಟಿಕೊಂಡು ನಮಗೇನಾಗಬೇಕು. ಯಾರಾದರೂ ಆಳಿಕೊಳ್ಳಲಿ, ಹೊಟ್ಟೆಗೆ ಬೇಕಾಗುವಷ್ಟು ದಾಗಿ ಸಿಕ್ಕರೆ ಸರಿ.

1ನೇ : ತಿಂದು ಜೀವಿಸುವುದೊಂದೇ ಜೀವನದ ಗುರಿಯಲ್ಲವಲ್ಲ. ಹಾಗಿದರೆ ಮನುಷ್ಯನೂ ಪಶುವಿನಂತೆ ಧರ್ಮದ ಗತಿಯೇನು?

2ನೇ : ಮೊದಲು ನೆಮ್ಮದಿ ಬಾಳು ಮುಖ್ಯ. ಹೀಗೆ ಅಧಿಕಾರಕ್ಕಾಗಿ ಕಚ್ಚಾಟ, ದಂಗೆ, ಯುದ್ಧ ಇವೆಲ್ಲ ಮನುಷ್ಯತ್ವದ ಲಕ್ಷಣವೇ? ಪ್ರಗತಿಯ ಕುರುಹೇ? ಅನಾಯಕ ಆಡಳಿತದಿಂದ ಬೊಕ್ಕಸ ಖಾಲಿಯಾಯಿತೆಂದರೆ ಪ್ರಜೆಗಳ ಮೇಲೆ ತೆರಿಗೆ ಹೊರೆ.

1ನೇ : ದುರಾಶಾಪೀಡಿತರ ದುರಾಗ್ರಹದಿಂದ ಹೀಗಾಗಿದೆ. ಮಹಾರಾಣಿಯವರು ಆಡಳಿತಕ್ಕೆ ಬಂದರೆ ಸುಖೀ ರಾಜ್ಯವನ್ನು ಕಾಣಬಹುದು.

2ನೇ : ಯುದ್ಧದ ಫಲಿತಾಂಶವೇನೋ, ಆಡಳಿತ ರಾಣಿಗೋ ಖಾನನಿಗೋ?

1ನೇ : ಈ ಬಾರಿ ಖಾನನ ಪರಾಭವ ಖಚಿತ.

2ನೇ : ಅದು ಹೇಗೆ ?

1ನೇ : ಅರ್ಧದಷ್ಟು ಸೈನ್ಯ ಹೊರಗಡೆಗೆ ಹೋಗಿದೆ. ಉಳಿದರ್ಧ ನಮ್ಮವರಿಗೆಲ್ಲ ಅತು ನಿಲ್ಲಬೇಕು. ಪ್ರಧಾನಿಯವರ ಪ್ರಚಂಡ ಬುದ್ಧಿ, ಸಮಯ ಸಾಧಿಸಿನೇ ಕಾರ್ಯಪ್ರವರ್ತಕರಾಗಿದ್ದಾರೆ

2ನೇ : ಏನಿದ್ದರೂ ತಿಳಿದೇ ತಿಳಿಯುವುದು ಬನ್ನಿ. (ಹೊಗುವರು)

– ತೆರೆ –

ಪ್ರವೇಶ 20

(ಬಿದನೂರಿನ ಅರಮನೆಯ ಸಭಾಂಗಣ. ಮಹಾರಾಣಿ ಚನ್ನಮ್ಮಾಜಿ ಪಟ್ಟಾಭಿಷಿಕ್ತಳಾಗಿ ಸಿಂಹಾಸನದ ಮೇಲೆ ಮುಂಡಿಸಿದ್ದಾಳೆ. ಮಲ್ಲಿ ಮಹಾರಾಣಿಗೆ ಚಾಮರವಿಕ್ಕುತ್ತಿದ್ದಾಳೆ. ಭಟ್ಟಂಗಿಗಳು ಬಿರುದನುಗ್ಗಡಿಸುತ್ತಿದ್ದಾರೆ. ರಾಣಿಯ ಬಲಪಾರ್ಶ್ವದಲ್ಲಿ ಪ್ರಧಾನಿ ನರಸಪ್ಪಯ್ಯ ಕುಳಿತಿದ್ದಾರೆ. ಎಡಭಾಗದಲ್ಲಿ ಕಾಸರಗೋಡು ತಿಮ್ಮಣ್ಣ, ಸುಬ್ಬನೀಸ ಕೃಷ್ಣಯ್ಯ ಮೊದಲಾಗಿ ಮಂತ್ರಿಗಳು ಕುಳಿತಿದ್ದಾರೆ. ಸಾಮಂತರಿಂದಲೂ, ಅಧಿಕಾರಿಗಳು ಮತ್ತು ರಾಜ್ಯದ ಪ್ರತಿಷ್ಠಿತರಿಂದಲೂ ಸಭಾಂಗಣ ತುಂಬಿದೆ. ನರ್ತನಾನಂತರ ನರ್ತಕಿಯೊಬ್ಬಳು ಮಹಾರಾಣಿಯಿಂದ ಪುರಸ್ಕೃತಳಾಗಿ ತೆರಳುತ್ತಾಳೆ)

ಪ್ರಧಾನಿ : ಮಹಾರಾಣಿಯವರು ಪಟ್ಟಾಭಿಷಿಕ್ತರಾದ ಈ ಶುಭ ಸಂದರ್ಭದಲ್ಲಿ ಕಾಸರಗೋಡು ತಿಮ್ಮಣ್ಣನವರು ಎರಡು ಮಾತು ಹೇಳಬೇಕಾಗಿ ಕೋರುತ್ತೇನೆ.

ಕಾ.ತಿಮ್ಮಣ್ಣ : ಸಭಿಕರೆ, ಇಂದು ಮಹಾತಾಯಿ ಚನ್ನಮ್ಮಾಜಿಯವರು ಪಟ್ಟಾಭಿಷಿಕ್ತರಾಗಿ ಸಿಂಹಾಸನವನ್ನಲಂಕರಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ. ಅವರು ಹೆಂಗಸಾದರೂ ವೀರರಮಣಿಯೂ, ಸದ್ಗುಣಭೂಷಿತೆಯೂ ಆಗಿದ್ದು ನಾಡನ್ನು ರಕ್ಷಿಸುವ ಶಕ್ತಿಯುಳ್ಳವರಾಗಿದ್ದಾರೆ. ರಾಜ್ಯಾಧಿಕಾರಕ್ಕೆರವಾದ ಅವರನ್ನು ಮತ್ತೆ ಅಧಿಕಾರಕ್ಕೇರಿಸುವಲ್ಲಿ ಪ್ರಧಾನಿಗಳು ಮಾಡಿದ ಪ್ರಯತ್ನ, ತೋರಿದ ಧೈರ್ಯ-ಸ್ಥೈರ್ಯ-ಸಾಹಸಗಳು, ಅವರ ತ್ಯಾಗ ಹೆಚ್ಚಿನದು. ನಾವು ದಾರಿ ತಪ್ಪಿದಾಗ ನಮ್ಮ ತಪ್ಪನ್ನು ನಮಗೆ ಮನಗಾಣಿಸಿ ಸನ್ಮಾರ್ಗಕ್ಕೆ ತಂದದಲ್ಲದೆ ಸಿಂಹಾಸನದ ಸೇವೆ ಮಾಡುವ ಅವಕಾಶವನ್ನುಳಿಸಿಕೊಟ್ಟರು. ನಾವು ತಪ್ಪಿದ್ದೇವೆಂದೆ, ನಿಜ. ಇದ್ದುದನ್ನು ಹಿರಿಯರ ಸಮ್ಮುಖದಲ್ಲಿ ಒಪ್ಪಕೊಳ್ಳುವುದರಿಂದ ಅವಮಾನವೇನೂ ಇಲ್ಲ ನಮ್ಮನ್ನು ನಾವೇ ಶುದ್ಧೀಕರಿಸಿಕೊಂಡಂತಾಗುದು. ರಾಜನಿಷ್ಠರೂ, ದೇಶಪ್ರೇಮಿಗಳೂ ಆದ ಅವರು ಮಹಾರಾಣಿಯವರಿಗೆ ಬೆಂಬಲವಾಗಿ ನಿಂತು ರಾಜ್ಯದ ಶ್ರೇಯೊಭಿವೃದ್ಧಿಗೆ ಕಾರಣಕಾಗುವರೆಂದು ಹಾರೈಸುತ್ತೇನೆ. ಮಹಾರಾಣಿಯವರ ಆಡಳಿತಾವಧಿಯಲ್ಲಿ ನಮ್ಮ ನಾಡು ಸರ್ವತೋಮುಖವಾದ ಅಭಿವೃದ್ಧಿ ಹೊಂದಿ ಜನಮನದಲ್ಲಿ ಶಾಂತಿ, ಸಂತುಷ್ಟಿಗಳು ನೆಲೆಸಿ ಸುಖೀ ರಾಜ್ಯಸ್ಥಾನೆಯಾಗಲಿ. ಇಕ್ಕೇರಿಯ

ಘನತೆಯನ್ನು ಮೆರೆಸುವುದರ ಮೂಲಕ ಕನ್ನಡದ ಕೀರ್ತಿಪತಾಕೆಯನ್ನು ಮತ್ತೊಮ್ಮೆ ಹಾರಿಸುವಂತಾಗಲಿ. ಅಳಿದ ಮಹಾಪ್ರಭುಗಳಾದ ದೊಡ್ಡಸಂಕಣ್ಣನಾಯಕರು. ಶಿವಪ್ಪನಾಕರ ಸಾಲಿನಲ್ಲಿ ಮಹಾರಾಣಿಯವರ ಹೆಸರೂ ಅಮರವಾಗಿ ನಿಲ್ಲಲೆಂದು ಹಾರೈಸುತ್ತೇನೆ. ಅಘೋರೇಶ್ವರನಲ್ಲಿ ಅದನ್ನೇ ಬೇಡಿಕೊಳ್ಳುತ್ತೇನೆ (ಕುಳಿತುಕೊಳ್ಳುವನು)

ಚೆನ್ನಮ್ಮ : ಇಕ್ಕೇರಿಯ ರಾಜನಿಷ್ಠರೇ, ನಾಡಪ್ರೇಮಿಗಳೇ, ತಿಮ್ಮಣ್ಣನವರು, ನನ್ನನ್ನು ಬಹಳವಾಗಿ ಹೊಗಳಿದ್ದಾರೆ. ನನ್ನ ಮೇಲಿರುವ ನಿಮ್ಮೆಲ್ಲರ ಆದರಾಭಿಮಾನ ಅಚಲ ವಿಶ್ವಾಸ ನನ್ನನ್ನು ಮೂಕಳನ್ನಾಗಿ ಮಾಡಿದೆ. ರಾಜಭ್ರಷ್ಠಳಾಗಿದ್ದ ನನ್ನನ್ನು ಪುನಃ ಕರೆತಂದು ರಾಜ್ಯದ ಭವಿಷ್ಯದ ಭಾರಿಯಾದ ಹೊಣೆಗಾರಿಕೆಯ ಹೊರೆ ಹೊರಿಸಿದ್ದೀರಿ ಮಹಾರಾಣಿಯಾಗಿ ಗೌರವಿಸಿದ್ದೀರಿ ಶಿವಪ್ಪನಾಯಕರು, ಸದಾಶಿವನಾಯಕರು, ಹಿರಿಯವೆಂಕಟ ದೊರೆಗಳು, ಸಂಕಣ್ಣನಾಕರು, ನನ್ನ ಸ್ವಾಮಿಯವರು ಅಲಂಕರಿಸಿದ್ದ ಸ್ಥಾನದಲ್ಲಿ ನನ್ನನ್ನು ಕೂಡಿಸಿದ್ದೀರಿ. ಈ ಗುರುತರವಾದ ಭಾರವನ್ನು ಹೊರಲು ನಾನು ಶಕ್ತಳೆ! ನಿಮ್ಮ ಆಶೋತ್ತರಗಳನ್ನು ನಾನು ಈಡೇರಿಸಬಲ್ಲೆನೆ? ನಮ್ಮ ನಾಡ ಹಿರಿಮೆಯ ಮಹೋಜ್ವಲ ಪ್ರಕಾಶವನ್ನು ಬೆಳಗಬೇಕೆಂಬ ಹೆಬ್ಬಯಕೆ ನನ್ನಲ್ಲೂ ಇದೆ. ಇಕ್ಕೇರಿಯನ್ನಾಳಿದ ದೊರೆಗಳಲ್ಲಿ ಪೂಜ್ಯ ಮಾವಂದಿರಾದ ಶಿಸ್ತಿನ ಪಟು ಶಿವಪ್ಪನಾಯಕರ ಹೆಸರು ಅಮರವಾಗಿದೆ. ನಾಡಿನ ಕೀರ್ತಿ ಜನಲ ನಾಲಗೆಯ ಮೇಲೆ ಅವರ ಮೇಲೆ ನರ್ತಿಸುವಂತೆ ಮುಂದೆಯೂ ಕೊಂಡಾಡುವಂತೆ ನಾಡನ್ನು ರೂಪಿಸಬೇಕೆಂಬ ಹಿರಿಯ ಹಂಬಲ ನನ್ನದು. ನಾಡಿನ ಹಿತೈಷಿಗಳಾದ ನಿಮ್ಮೆಲ್ಲರ ಬೆಂಬಲವಿದ್ದಲ್ಲಿ, ಆಡಳಿತದ ವಿಚಾರದಲ್ಲಿ ಅಮೂಲ್ಯವಾದ ಸಲಹೆಗಳನ್ನು ನೀಡುವುದಾದಲ್ಲಿ. ಆ ನನ್ನಾಶೆಯನ್ನು-ನಿಮ್ಮೆಲ್ಲರ ನಿರೀಕ್ಷೆಯನ್ನು ಈಡೇರಿಸಬಲ್ಲೆ. ನಾಡಿನಭಿವೃದ್ಧಿ ಕಾರ್ಯದಲ್ಲಿ ಪ್ರಜರ, ಅಧಿಕಾರಿಗಳ ಪಾತ್ರ ಹಿರಿದು. ನಾನು ನಿಮಿತ್ತಮಾತ್ರ. ನೀವು ಕ್ರಿಯಾಶಕ್ತಿಗಳಾಗಿ ನನ್ನಿಂದ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ನನ್ನ ಮೇಲೆ ನೀವಿಟ್ಟಿರುವ ಅಚಲ ಅಭಿಮಾನಕ್ಕೆ ನಾನು ನಿಮ್ಮಗೆಲ್ಲರಿಗೂ ಋಣಿ. ನಿಮ್ಮೆಲ್ಲರ ಸೇವೆಯನ್ನು ಮನ್ನಿಸಿ ಅಭಿನಂದಿಸಿ ವಿಶ್ರಮಿಸಬಯಸುತ್ತೇನೆ.

ಪ್ರಧಾನಿ : (ಎದ್ದು) ಈಗ ಒಂದು ಮಹತ್ವದ ವಿಷಯದ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಅದು ಒಂದು ದೃಷ್ಟಿಯಿಂದ ಮಹಾರಾಣಿಯವರ ವೈಯುಕ್ತಿಕ ವಿಷಯವಾಗಿದ್ದರೂ ಕೂಡ ನಾಡಿನ ಪ್ರಜಾಕೋಟಿಯ ಉನ್ನತಿ ಅವನತಿಯೂ ಅದಲ್ಲಡಕವಾಗಿರುವುದರಿಂದ ಎಲ್ಲರೂ ಸೇರಿ ಅದನ್ನು ತೀರ್ಮಾನಿಸಬೇಕಾದುದು ಅಗತ್ಯವಾಗಿದೆ.

ಸು.ಕೃಷ್ಣಯ್ಯ : ಸಭೆ ವಿಷಯವನ್ನು ತಿಳಿಯಬಯಸುತ್ತದೆ

ಪ್ರಧಾನಿ : ಅನೇಕ ರೀತಿಯ ವಾದವಿವಾದ ಅಂತಃಕಲಹಗಳಿಗೆ ಅವಕಾಶ ನೀಡಿದ್ದ ರಾಜ್ಯದ ಉತ್ತರಾಧಿಕಾರಿಯ ಪ್ರಶ್ನೆ. ಅದನ್ನು ಈ ಸಂದರ್ಭದಲ್ಲಿ ತೀರ್ಮಾನಿಸಿ ಈಗ ನಮಗುಂಟಾದ ಸಂತೋಷವು ಇಮ್ಮಡಿಸುವಂತಿಗಿ ಸಮಸ್ಯೆಯ ಅಂತ್ಯವಾಗಲಿ, ಹೊರೆ ಇಳಿಯಲಿ ಎಂದು ನನ್ನ ಅಭಿಪ್ರಾಯ.

ಕಾ.ತಿಮ್ಮಣ್ಣ : ವಿಷಯವು ಸಮಂಜಸವಾದುದೆ ಸರಿ. ಅದು ಬಹುವಾಗಿ ಮಹಾರಾಣಿಯವರಿಗೆ ಸಂಬಂಧಿಸಿದ್ದಾದ್ದರಿಂದ ಅವರ ನಿರ್ಧಾರವನ್ನು ಅವರೇ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಚೆನ್ನಮ್ಮ : ನಾನು ನನ್ನ ವೈಯುಕ್ತಿಕ ಅಭಿಪ್ರಾಯವನ್ನು ಕೊಡಬಲ್ಲನಲ್ಲದೆ ಆಯ್ಕೆಯ ಹೊಣೆ ಸಭೆಯದು. ಇದು ನಾಡಿನ ಗೌರವ ಹಾಗೂ ನಿರ್ಣಯಿಸುವ ವಿಚಾರವಾಗಿದ್ದು ನೀವೆ ಸರಿಯಾದ ನಿರ್ಣಯಕ್ಕೆ ಬರಬೇಕು. ಇದು ನಾಡಿನ ಗೌರವ ಹಾಗೂ ಭವಿಷ್ಯವನ್ನು ನಿರ್ಣಯಿಸುವ

		ಪ್ರಶ್ನೆಯಾಗಿದ್ದು ನೀವೇ ಸರಿಯಾದ ನಿರ್ಣಯಕ್ಕೆ ಬರಬೇಕು. ಹಿಂದಾದಂತೆ ಇನ್ನು ವಿವಾದಕ್ಕೆಡೆ ಕೊಡುವಂತಾಗಬಾರದೆಂದು ನನ್ನ ಅಭಿಲಾಷೆ.
ಸು. ಕೃಷ್ಣಯ್ಯ	:	ತಮ್ಮ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿದರೆ ವಿಮರ್ಶಿಸಬಹುದು
ಚನ್ನಮ್ಮ	:	ಹಿರಿಯ ಶಿವಪ್ಪ ನಾಯಕರ ಸಂಬಂಧಿಯೂ, ಹತ್ತಿರದ ದಾಯಬಂಗುವೂ ಆದ ಬಸವಪ್ಪ ನಾಯಕರನ್ನು ದತ್ತಕ ತೆಗೆದುಕೊಳ್ಳಬಹುದೆಂಬ ಅಭಿಮತ ನಮ್ಮದು. ರಾಜ್ಯದ ಉತ್ತರಾಧಿಕಾರಿಯಾಗಿ ನೇಮಿಸಿಕೊಳ್ಳಬಹುದೆಂದು ನನ್ನ ಅಭಿಪ್ರಾಯ. ಗುಣಶೀಲಗಳಲ್ಲಿ ಯೋಗ್ಯನಾಗಿದ್ದಾನೆ. ಈ ಆಯ್ಕೆಯನ್ನು ನೀವು ವಿಮರ್ಶಿಸಿ ನಿರ್ಧರಿಸಬಹುದು.
ಕಾ.ತಿಮ್ಮಣ್ಣ	:	ಅವರ ಬಗ್ಗೆ ಮಹಾರಾಣಿಯವರಿಗೆ ವಿಶ್ವಾಸವಿದ್ದರೆ ನಮ್ಮ ಒಪ್ಪಿಗೆಯಿದೆ. ಭಿನ್ನಾಭಿಪ್ರಾಯಕ್ಕೆ ಎಡೆಮಾಡಿಕೊಟ್ಟು ಮತ್ತು ಅಂತಃಕಲಹಕ್ಕೆ ಅವಕಾಶ ಕಲ್ಪಿಸಿಕೊಡುವುದು ಯುಕ್ತವಲ್ಲ.
ಎಲ್ಲರೂ	:	ಮಹಾರಾಣಿಯವರ ಆಯ್ಕೆಯನ್ನು ನಾವು ಒಪ್ಪಿದೆ.
ಪ್ರಧಾನಿ	:	ವಿರೋಧಾಭಿಪ್ರಾಯ ಇದ್ದವರು ವ್ಯಕ್ತಪಡಿಸಬಹುದು.
ಚನ್ನಮ್ಮ	:	(ಮೌನವನು ಗಮನಿಸಿ) ನಿಮ್ಮೆಲ್ಲರ ಒಪ್ಪಿಗೆ ಪಡೆದು ಬಸವಪ್ಪನಾಯಕರನ್ನು ರಾಜ್ಯ ಉತ್ತರಾಧಿಕಾರಿಯಾಗಿ ಸ್ವೀಕರಿಸಲು ನಿರ್ಧರಿಸಿದ್ದೇವೆ. ವಿಧಿವತ್ತಾಗಿ ಸಂಪ್ರದಾಯದ ಸಮಾರಂಭವನ್ನಾಚರಿಸಲಾಗುವುದು. ಅಂದಹಾಗೆ ಪ್ರಧಾನಿಗಳೆ ತಿಮ್ಮಣ್ಣನವರೆ, ಸಭಾಸದರೇ, ಹೇಗೂ ಆಸ್ಥಾನ ಜ್ಯೋತಿಷಿಗಳು ಇಲ್ಲೇ ಇರುವಾಗ ದತ್ತಕದ ಮುಹೂರ್ತವನ್ನು ನಿರ್ಧರಿಸಿ ಬಿಡಬಹುದಲ್ಲವೆ?
ಎಲ್ಲರೂ	:	ಯೋಗ್ಯವಾದ ವಿಚಾರ. ತಡಮಾಡುವುದು ಬೇಡ.
ಪ್ರಧಾನಿ	:	ಜೋಯಿಸರೆ, ಯೋಗ್ಯ ಮುಹೂರ್ತವನ್ನು ನಿಶ್ಚಯಿಸಿ ಬಿಡಿ.
ಜೋಯಿಸ	:	(ಕಿಮ್ಮಿ ಶ್ಯೆಯಿಂದ ಪಂಚಾಂಗವನ್ನು ತೆಗೆದು ಬೆರಳುಗಳನ್ನು ಗುಣಿಸಿ) ಮಹಾರಾಣಿಯವರಲ್ಲಿ ಅರಿಕೆ, ಶ್ರೀ ಶಾಲಿವಾಹನ ಶಕ ಹದಿನೈದುನೂರಾತೊಂಭತ್ತೈದು ಪರಿಧಾವಿ ಸಂವತ್ಸರದ ಶ್ರಾವಣ ಶುದ್ಧ ಚತುರ್ದಶಿ ದತ್ತಕ ಸ್ವೀಕಾರಕ್ಕೆ ಯೋಗ್ಯ ದಿನವಾಗಿ ಶುಭವಾರ, ಶುಭಯೋಗ, ಶುಭಕರಣ, ಶುಭ ನಕ್ಷತ್ರಗಳಿಂದ ಮಂಗಳಕರ ದಿನವಾಗಿದೆ
ಚನ್ನಮ್ಮ	:	ಸರಿ ಹಾಗಾದರೆ. ಅಂದಿಗೆ ದತ್ತಕ ಸ್ವೀಕಾರವನ್ನು ನಿಗದಿಗೊಳಿಸೋಣ
ಎಲ್ಲರೂ	:	ಮಹಾರಾಣಿ ಚನ್ನಮ್ಮಾಜಿಯವರಿಗೆ - ಜಯವಾಗಲಿ ಯುವರಾಜ ಬಸವಪ್ಪನಾಯಕರಿಗೆ - ಜಯವಾಗಲಿ

- ತೆರೆ -

ಕಾಡು ರಸ್ತೆ ಪ್ರವೇಶ 21

ವೀರಭದ್ರ	:	ಚನ್ನಮ್ಮನಿಗೆ ಪಟ್ಟವಾಯಿತಲ್ಲ
ಕಂ.ಲ.	:	ಆಯಿತು
ವೀ.ಭ.	:	ಅದು ನಾನು ಹೇಳಿದ ಹಾಗೆ ಆಯಿತು.
ಕಂ.ಲ	:	ಹುಂ ಆಯಿತು
ವೀ.ಭ.	:	ದೂರ್ತ ಪ್ರಧಾನಿಯ ದೆಸಿಯಿಂದಲೇ ಹಾಗಾಯಿತು
ಕಂ.ಲ.	:	ಹೌದು, ಹಾಗೆಯೇ ಆಯಿತು.
ವೀ.ಭ	:	ಸರಿಹೋಯಿತು. ಆಯಿತು. ಹಾಗಾಯಿತು, ಹೀಗಾಯಿತು ಎಂದು ಎಷ್ಟು ತಣ್ಣಗೆ

ಹೇಳುತ್ತಿದ್ದೀರಿ?

ಕಂ.ಲ. : ಅಷ್ಟಲ್ಲದೇ ತಲೆಬಿಸಿ ಮಾಡಿಕೊಂಡರೆ ಪ್ರಯೋಜನವೇನು ವೀರಭದ್ರಯ್ಯ.

ವೀ.ಭ. : ತಲೆಯಷ್ಟೇ ಅಲ್ಲ ಮೈಯೆಲ್ಲಾ ಕಾವೇರುತ್ತೆ.

ಕಂ.ಲ. : ಜ್ವರ ಬಂದರೆ ಹಾಗಾಗುತ್ತೆ

ವೀ:ಬ. : ರಕ್ತ ಕುದಿಯುತ್ತೆ. ಮನಸ್ಸು ಚಡಪಡಿಸುತ್ತೆ

ಕಂ.ಲ. : ರಕ್ತ ಕುದಿದ ಮೇಲೆ ಮನಸು ಸಂಕಟಪಡುತ್ತೆ. ಅದು ಖಾಯಿಲೆಯ ಸಾಮಾನ್ಯ ಲಕ್ಷಣ. ಅದಕ್ಕೆ ನಿಮಗೆ ಅಗತ್ಯ ಚಿಕಿತ್ಸೆ ನಡೆಯಲೇಬೇಕು. ಉದಾಸೀನ ಮಾಡಿದರೆ ಸನ್ನಿಪಾತಕ್ಕೆ ತಿರುಗಿತೆಂದರೆ ಕಷ್ಟ

ವೀ.ಬ. : ಬರೀ ಹುಡುಗಾಟವಾಡುತ್ತಿದ್ದೀರಲ್ಲ ಲಕ್ಷ್ಮಯ್ಯ. ಆಳವಾಗಿ ವಿಷಯದ ಬಗ್ಗೆ ವಿಚಾರ ಮಾಡುವುದೇ ಇಲ್ಲವಲ್ಲ.

ಕಂ.ಲ. ವಿಚಾರಮಾಡುವುದಕ್ಕೆ ನೀವು ಅವಕಾಶವೇ ಕೊಡುತ್ತಿಲ್ಲ. ನಿಮಗೆ ನಿಮ್ಮ ವಿಚಾರ ವೈವಿಧ್ಯವೇ ಹೊರತು ಬೇರೆಯಿಲ್ಲವೆಯಿಲ್ಲ.

ವೀ.ಭ. : ಅಲ್ಲಿ ನಡೆದ ವಿದ್ಯಮಾನಗಳ ಬಗೆಗೂ ನಿಗಾ ಇಟ್ಟಿರಬೇಕಲ್ಲವೆ?

ಕಂ.ಲ. : ಸಂಪೂರ್ಣ ನಿಗಾ ಬೇಕು. ಅಲ್ಲಿ ಬೀಳುವ ತಾಳದ ಗತ್ತನ್ನನುಸರಿಸಿ ಹೆಜ್ಜೆ ಇಡಬೇಕು.

ವೀ.ಭ : ಹಾಗೆ ಹೇಳುವವರೂ ನೀವೆ. ಏನಾದರೂ ನಡೆದದ್ದನ್ನು ಹೇಳಿದರೆ ಸಿಡಿಮಿಡಿಗೊಂಡು ನನ್ನ ಮೇಲೆ ಹರಿಹಾಯುವವರೂ ನೀವೆ.

ಕಂ.ಲ. : ಹೇಳಬೇಕಾದ್ದನ್ನು ಇತಿಮಿತಿಯಲ್ಲಿ ಹೇಳಬೇಕು ವೀರಭದ್ರಯ್ಯ. ಗುಂಗಿ ಹುಳು ಕೊರೆದಹಾಗೆ ಕೊರೆಯುವುದಲ್ಲ.

ವೀ.ಭ. : ಅಲ್ಲಿ. ಪಟ್ಟಾಭಿಷೇಕ.

ಕಂ.ಲ. : ಒಳ್ಳೆ ಪಟ್ಟಾಭಿಷಾೇಕ. ಒಂದೇ ಎಳೆ ಹಿಡಿದು ಜಗ್ಗುತ್ತಿದ್ದೀರಿ. ಬೇರೆ ಮಾತೇ ಇಲ್ಲ.

ವೀ.ಭ. : ಪಟ್ಟಾಭಿಷೇಕದ ನಂತರ ಉನ್ನತಾಧಿಕಾರಿಗಳ ಒಂದು ಗುಪ್ತ ಸಭೆ ನಡೆಯಿತಂತೆ ಆ ಸಭೆಯಲ್ಲಿ ಪ್ರಧಾನಿ ಹೇಳಿದ ಮಾತು ನಿಮಗೆ ತಿಳಿದಿದೆಯೇನು? (ಲಕ್ಷ್ಮಯ್ಯ ಪ್ರಶ್ನಾರ್ಥಕವಾಗಿ ವೀರಭದ್ರಯ್ಯನನ್ನು ನೋಡುವನು) ನಾವು ರಾಜದ್ರೋಹಿಗಳಂತೆ ಅವರಿಗಲ್ಲವೆ : ನಮಗೆ ಅವರೂ ದ್ರೋಹಿಗಳೆ.

ವೀ.ಭ. : ನಮ್ಮನ್ನು ಯಾವುದಾದರೂ ರೀತಿಯಿಂದ ಹಿಡಿದೊಪ್ಪಿಸಬೇಕೆಂದು ಸಭೆಗೆ ಅವನು ಆದೇಶ ನೀಡಿದನಂತೆ.

ಕಂ.ಲ. : ಯಾವುದೇ ರೀತಿಯಿಂದಲಾದರೂ ಅವರನ್ನು ಅಡಳಿತದಿಂದಿಳಿಸಬೇಕೆಂಬುದು ನಮ್ಮ ಪ್ರಯತ್ನ. ಆಗಲವರ ಆಟಾಟೋಪ ತಗ್ಗುವುದು.

ವೀ.ಭ. : ಅದನ್ನೇ ನಾನು ಹೇಳುವುದು.

ಕಂ.ಲ. : ಅದನ್ನೇ ನಾನು ಚಿಂತಿಸುತ್ತಿರುವುದು. ಆದರೆ ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ ವೀರಭದ್ರಯ್ಯ ಅವರೊಂದಿಗೆ ಸೆಣಸಿ ನಿಲ್ಲುವಂತಹವರು ದಿಲ್ಲಿಯವರ ಹೊರತು ಬೇರೆ ಯಾರೂ ಕಾಣಿಸುತ್ತಿಲ್ಲ.

ವೀ.ಭ : ಮೈಸೂರಿನವರ ಸಹಾಯ ಏಕೆ ಪಡೆಯಬಾರದು ?

ಕಂ.ಲ. : ಆ ಪ್ರಯತ್ನವನ್ನೇನೋ ಮಾಡಬಹುದು. ಮೈಸೂರಿನ ಈಗಿನ ದೊರೆಗಳು ಸಾಹಸಿಗಳು. ಆದರೆ ಆವರ ಮುಂದೆ ಸರಿಯಾದ ಜಾಲ ಹರಡಬೇಕು.

ವೀ.ಭ. : ಕೇವರ ಉಯುದ್ಧ ಒಂದರಿಂದಲೇ ನಮ್ಮ ಕಾರ್ಯ ಸಾಧಿಸಲಾಗುವುದಿಲ್ಲ. ನಾಲ್ಕೂ ಕಡೆಯಿಂದ ಆವರು ಪ್ರತಿಭಟನೆಯನ್ನೆದುರಿಸುವಂತಾಗಬೇಕು.

ಕಂ.ಲ. : ಆದರೆ ಹೀಗೆ ಮಾಡೋಣ. ಸಿಂಹಾಸನವನ್ನು ಕೊಡಿಸಿಕೊಟ್ಟರೆ ಅರ್ಧ ರಾಜ್ಯವನ್ನು

ಕೊಡುವುದಾಗಿ ಪತ್ರ ಬರೆಸಿ ಅಂಧಕವೆಂಕಟಯ್ಯನ ಹೆಸರಿನಲ್ಲಿ ಮೈಸೂರವರಿಗೆ ಕಳುಹಿಸಿ ಕೊಡುವುದು ಒಂದು. ವೀರಭದ್ರಯ್ಯನನ್ನು ಸ್ಥಾನಭ್ರಷ್ಟಗೊಳಿಸಿ ಚನ್ನಮ್ಮನಿಗೆ ಪಟ್ಟ ಕಟ್ಟಿರುವುದರಿಂದ ಅಸಂತುಷ್ಟನಾಗಿರುವ ಅವನ ತಂದೆ ಜಾತಪ್ಪನ ಭದ್ರಪ್ಪನನ್ನೊಳಗು ಮಾಡಿಕೊಂಡು ದಕ್ಷಿಣ ರಾಜ್ಯದಲ್ಲಿ ದಂಗೆಯನ್ನೆಬ್ಬಿಸುವುದು ಇನ್ನೊಂದು ಎತ್ತರದ ಶಿರಿಸಿ. ಸೋದೆ, ಬಿಳಗಿ, ಬನವಾಸಿ ಮೊದಲಾದ ಕಡೆಗಳಲ್ಲಿ ಮಹಾರಾಣಿಯ ಆಡಳಿತದ ವಿರುದ್ಧ ಜನರನ್ನೆತ್ತಿ ಕಟ್ಟುವುದು ಮೂರನೆಯದು, ರಾಜ್ಯದ ಗಡಿ ಪ್ರಾಂತ್ಯಗಳಲ್ಲೇ ನಮ್ಮ ಕಾರ್ಯಕ್ರಮವನ್ನು ವಿಸ್ತರಿಸುತ್ತಿರಬೇಕು. ಅಂದರೆ ಅವರು ಅದರ ವಿರುದ್ಧ ನಿರೋಧಕ ಕ್ರಮ ತೆಗೆದುಕೊಳ್ಳಲು ವಿಳಂಬವಾಗುವುದು. ನಮ್ಮ ಚಟುವಟಿಕೆಗಳನ್ನು ಬಲಪಡಿಸಲು ಸುಲಭ ಸಾಧ್ಯವಾಗುತ್ತದೆ.

ವೀ.ಭ. : ಉತ್ತರದಲ್ಲಿ ಕಾರ್ಯಸಾಧಿಸುವ ಬಗೆ?

ಕಂ.ಕ. : ಸೋದೆ, ಬಿಳಗಿ ಮೊದಲಾದ ಆಶ್ರಿತ ಪಾಳೆಯಗಾರರು ಇಕ್ಕೇರಿಯ ಆಡಳಿತದಿಂದ ಸಿಡಿದು ಸ್ವತಂತ್ರರಾಗಬೇಕೆಂದು ಹಂಬಲಿಸುತ್ತಿರುವರು. ಅವರು ಬಯಸುವ ಕಾಲದಲ್ಲೇ ಅವರ ಭಾವನೆಗೆ ನಾವು ಬೆಂಬಲ ಕೊಟ್ಟರೆ ಅವರು ಸುಲಭದಲ್ಲಿ ಬಲೆಗೆ ಬೀಳುವರು

ವೀ.ಭ. : ಆದರೆ ಆ ಪ್ರಧಾನಿಯ ಸಲಹೆ, ಸೇವೆ ಇರುವವರೆಗೆ ಯಾವುದೇ ಜಾಲವನ್ನು ಪಸರಿಸಲವಕಾಶ ಕೊಡದಂತೆ ತಡೆಯುತ್ತಾರೆ.

ಕಂ.ಲ. : ಥೂ..... ನಾವು ಮುಂದಡಿ ಇಡುವುದಕ್ಕೆ ಅವನೊಬ್ಬ ಕಾಲ್ತೊಡಕು.

ವೀ.ಭ. : ಲಕ್ಷ್ಮಯ್ಯ..ನನ್ನದೊಂದು ಸಲಹೆ. ಇಲ್ಲಿ ಬನ್ನಿ. (ಕಿವಿಯಲ್ಲಿ ಹೇಳುವನು)

ಕಂ.ಲ. : ಹಾಂ! ನಿಧಾನ ಅದು ನನ್ನ ತಲೆಯಲ್ಲೂ ಬಂದಿತ್ತು. ಆದರೆ ಅದು ಅಷ್ಟು ಸುಲಭವಾದ ಕೆಲಸವಲ್ಲ. ಸ್ವಲ್ಪ ಎಚ್ಚರದಪ್ಪಿ ಮುಂದುವರೆದೆವೋ ಅದೇ ಗತಿ ನವಗಾದೀತು. ನನ್ನ ಯೋಚನೆ ಅಷ್ಟಕ್ಕೆ ನಿಂತಿಲ್ಲ. ವೀರಭದ್ರಯ್ಯ..ಇನ್ನೂ ಒಂದು ಹೆಜ್ಜೆ ಮುಂದೆ.

ವೀ.ಭ. : ಅಂದರೆ..ರಾಣಿಯನ್ನೂ ಸಹ...

ಕಂ.ಲ. : ಆವಳ ದತ್ತು ಪುತ್ರನನ್ನೂ ಸಹ.. ಅಷ್ಟನ್ನು ಸಾಧಿಸಿದಲ್ಲದೆ ನಮ್ಮ ಮಾರ್ಗ ನಿಷ್ಕಂಟಕವಾಗುವುದಿಲ್ಲ. ವಿಷಯ ಮಾತ್ರ ಬಹಿರಂಗವಾಗದಂತೆ ಎಚ್ಚರಿರಬೇಕು. ನಡೆಯಿರಿ. (ಹೋಗುವುದು)

--ತೆರೆ --

ರಸ್ತೆ ಪ್ರವೇಶ 22

2ನೇ ಪೌರ : ನಾಯಿಯಂತೆ ಕಚ್ಚಾಡುವುದೇ ಮನುಷ್ಯನ ಸ್ವಭಾವವಾಗಿಬಿಟ್ಟಿದೆಯಲ್ಲ ಸಹಜೀವನ ನಡೆಸುವುದಕ್ಕೆ ಸಾಧ್ಯವಿಲ್ಲವೆ?

1ನೇ ಪೌರ : ಸ್ವಭಾವವಲ್ಲ. ಭಾವ ಆದಾಗಿದೆ. ಈ ಸ್ವಭಾವ ಅಂದಿರಿ ನೋಡಿ ಅದು ನೀರಿನ ಹಾಗೆ, ಪಾತ್ರೆಯ ಆಕಾರ ನೀರು ಹೇಗೆ ತಳೆಯುತ್ತೋ ಹಾಗೆ ಗುಣ ಅಥವಾ ಸ್ವಭಾವ ಮನುಷ್ಯ ಬೆಳೆದು ಬಂದ ವಾತಾವರಣಕ್ಕೋ ಅವನು ಹೊಂದಿಸಿಕೊಂಡ ರೀತಿಗೋ ಅನುಗುಣವಾಗಿರುತ್ತದೆ. ಸಹಜೀವನ ಅಂದಿರಿ. ಮನುಷ್ಯನ ಸಹಜಗುಣ ಸಹಬಾಳ್ವೆ, ಸಹಕಾರ, ಅದನ್ನಾದರೂ ಮನುಷ್ಯ ಬೆಳೆಸಿಕೊಂಡರೆ, ಅದಕ್ಕೆ ಸಹನೆಯೂ ಬೇಕು. ವಿಸ್ವಿಚನೆಯೂ ಬೇಕು.

2ನೇ ಪೌರ	:	ಇವರ ಕಿತ್ತಾಟ ನೋಡಿದರೆ ಮಾನವ ದಾನವನಾಗುತ್ತಿದ್ದಾನೆ ಅನ್ನಿಸುತ್ತೆ.
1ನೇ ಪೌರ	:	ಕಿತ್ತಾಟಕ್ಕೆ ಕಾರಣವಿದೆ. ಒಂದು ಅತಿಯಾಸೆ ಆಗ ಕಂಡದ್ದನ್ನೆಲ್ಲ ಕೂಡಿಹಾಕುವ ಇಲ್ಲಾ ಕಿತ್ತುಕೊಳ್ಳುವ ಪ್ರವೃತ್ತಿಯುಂಟಾಗುತ್ತದೆ. ಇನ್ನೊಂದು ದ್ವೇಷ ಒಟ್ಟಿನಲ್ಲಿ ಅಜ್ಞಾನವೇ ಕಾರಣ. ಅದು ಮನುಷ್ಯನನ್ನು ಅಸುರನನಾಗಿ ಮಾಡುತ್ತದೆ.
2ನೇ ಪೌರ	:	ಇಲ್ಲದವನು ಪರದಾಡುವುದು. ಇದ್ದವನು ಇದ್ದಷ್ಟೂ ಸಾಲದೆಂದು ಬಡಿದು ಕೂಡಿಹಾಕುವುದು. ಇದು ಸಾಮಾನ್ಯವಾಗಿಬಿಟ್ಟಿದೆ. ಈ ರಾಜಮಹಾರಾಜರುಗಳ ವಿಚಾರವನ್ನೇ ತೆಗೆದುಕೊಳ್ಳಿ. ಈರ್ಷ್ಯೆಯ ಸ್ವಭಾವ, ಮಾತೆತ್ತಿದರೆ ಕತ್ತಿ ಹಿರಿಯುವ ಮೂರ್ಖತನ. ಇವನ್ನು ಬಿಟ್ಟು ಶಾಂತಿಯನ್ನವಲಂಬಿಸಿ ಆಳುವುದಕ್ಕೆ ಸಾಧ್ಯವೆಯಿಲ್ಲವೆ?
1ನೇ	:	ಅಂತಹ ರಾಜ ಯಾರೂ ಹುಟ್ಟಿಲ್ಲ, ಹುಟ್ಟಲಾರ
2ನೇ	:	ಯಾಕಿಲ್ಲ! ರಾಮ ರಾಜ್ಯಭಾರ ಮಾಡಿಲ್ಲವೆ?
1ನೇ	:	ಅವನೇನು ಯುದ್ಧಮಾಡಲಿಲ್ಲವೆ?
2ನೇ	:	ದುಷ್ಟರ ಸಂಹಾರಕ್ಕಾಗಿ
1ನೇ	:	ಅಶ್ವಮೇಧದ ನೆಪದಲ್ಲಿ ದಿಗ್ವಿಜಯಕ್ಕೆ ಹೊರದನಲ್ಲ. ಅದು ದುಷ್ಟರ ಸಂಹಾರವೋ, ಸಾಮ್ರಾಜ್ಯ ಸ್ಥಾಪನೆಯ ವ್ಯಾಮೋಹವೋ?
2ನೇ	:	ಬ್ರಹ್ಮವಂಶದ ರಾವಣನನ್ನು ಕೊಂದ ಪಾಪ ಪರಿಹಾರಕ್ಕಾಗಿ ಮಾಡಿದ.
1ನೇ	:	ಅಂತು ರಾಮ ಮಾಡಿದುದು ಪಾಪವೆ! ಅಶ್ವಮೇಧ ಅದಕ್ಕೆ ಪರಿಹಾರ.
2ನೇ	:	ನಿಮಗೆ ಸಮಂಜಸವಾಗಿ ಹೇಳಲು ನನಗೆ ಸಾಧ್ಯವಿಲ್ಲ. ಹೋಗಲಿ, ಅದು ಪುರಾಣದ ಮಾತಾಯಿತು. ಮೌರ್ಯ ಚಕ್ರವರ್ತಿ ಅಶೋಕ ರಾಜ್ಯವಾಳಲಿಲ್ಲವೆ?
1ನೇ	:	ಅವನೂ ಯುದ್ಧ ಮಾಡಿದ. ಮೊದಲು ಕ್ರೂರಿಯೇ ಆಗಿದ್ದ. ಇದೆಲ್ಲ ಪುರಾಣ ಏಕೆ?
2ನೇ	:	ಮತ್ತೇನಿಲ್ಲ ಇಕ್ಕೇರಿಯವರ ಮೇಲೆ ಮೈಸೂರಿನವರು, ಮೈಸೂರಿನವರ ಮೇಲೆ ಇಕ್ಕೇರಿಯವರು ಹೀಗೆ ಯುದ್ಧ ಹೂಡುವುದರಲ್ಲೇ ಕಾಲ ಕಳೆಯುವರಲ್ಲ. ಅದಕ್ಕೆ ಹೇಳಿದೆ.
1ನೇ	:	ಒಬ್ಬರ ಗೆಲುವು ಎದುರಿನವರಿಗೆ ಮತ್ತೊಂದು ಯುದ್ಧಕ್ಕೆ ಆಹ್ವಾನ-ಪ್ರಚೋದನೆಯಾಗುತ್ತೆ. ಇಬ್ಬರೂ ಬಿಂಕದ ಬೀರರು. ಛಲದ ಅಭಿಮಾನಿಗಳು, ಮೊದಲ ಕದನದ ಜಯ ನಮ್ಮದಾಯಿತು. ಮೈಸೂರರ ಸಲಿಗೆ ಅವಮಾನವಾಗಿ, ನೀಗಿಸಿಕೊಳ್ಳ ಪುನಹ ಯುದ್ಧ ಹೂಡಿದರು. ಗೆದ್ದರು.
2ನೇ(ಜುಟುಕಿಸಿಕೊಳ್ಳಲು)	:	ಮೈಸೂರಿನವರ ಮೇಲೆ ಎರಗಿ ಹೋಗುವರಂತೆ.
1ನೇ	:	ಸಿಂಹಾಸನದ ಅಪಮಾನ ನಾಡಿನದು-ನಮ್ಮೆಲ್ಲರದು. ಅದನ್ನು ಕಳೆಯಯುವ ಅವರ ಪ್ರಯತ್ನಕ್ಕೆ ಯಶ ಕೋರೋಣ.
2ನೇ	:	ಅವರ ಸುಖಸಿರಿಗಳಲ್ಲಿ ನಮಗೆ ಪಾಲು ಕೊಡುತ್ತಾರೆ ನೋಡಿ. ನಾವು ದುಡಿಯಬೇಕು, ತಿನ್ನಬೇಕು. ಅವರ ಬೊಕ್ಕಸವನ್ನೂ ತುಂಬಬೇಕು.
1ನೇ	:	ಮನುಷ್ಯ ದುಡಿಯಲೇಬೇಕು. ಸೋಮಾರಿಯಾಗಿ ಕುಳಿತು ಬೇರೆಯವರು ಕೊಟ್ಟಿದ್ದನ್ನು ತಿನ್ನುವುದು ಅಧರ್ಮ. ಮೈಸೂರಿನವರ ಮೇಲೆ ಮತ್ತೆ ಯುದ್ಧ ಅಂದಿರಲ್ಲ ಅದರ ವಿವರ ಗೊತ್ತೇನು?
2ನೇ	:	ಕೋಲಿವಾಡದ ಬೊಮ್ಮಯ್ಯನ ನಾಯಕತ್ವದಲ್ಲಿ ಸೈನ್ಯ ಕಳಿಸಿದ್ದಾರಂತೆ.
1ನೇ	:	ಅವನೇನೋ ಸಮರ್ಥ. ವಿಜಯ ದೊರಕೀತು.
2ನೇ	:	ದೊರಕುವುದು ಜಯವೆ! ಆ ಬಿರುದಂತೆಂಬರಗಂಡ ಚಿಕ್ಕದೇವರಾಜನೊಡನೆ ಹೋರಾಡಿದರೆ ಗಂಡ ಖಂಡಿತ.

1ನೇ : ಹಿಂದೊಮ್ಮೆ ಜಯ ಸಂಪಾದಿಸಿಲ್ಲವೆ ? ಆ ವಿಜಯ ಗೋಲ್ಕೊಂಡದಂತವರ ಸ್ನೇಹವನ್ನು ದೊರಕಿಸಿಕೊಟ್ಟಿಲ್ಲವೆ ?

2ನೇ : ಅದರ ಗುಟ್ಟು ನಿಮಗೆ ಗೊತ್ತಿಲ್ಲ. ಆ ಯುದ್ಧದ ಕಾಲದಲ್ಲಿ ಮಧುರೆಯವರು ಮೈಸೂರಿನವರ ಮೇಲೆ ದಂಡೆತ್ತಿ ಬಂದರು. ಹಾಗಾಗಿ ಅವರ ಸೈನ್ಯ ಹಿಂದಿರುಗಬೇಕಾಯಿತು. ಆದರೂ ಅವರ ಬೆಂಬತ್ತಿ ಹೋದ ನಮ್ಮ ಸೈನ್ಯವನ್ನು ಬಾಣಾವರದ ಬಳಿ ಸೋಲಿಸಿ ಹಿಂದಕ್ಕಟ್ಟಲಿಲ್ಲವೆ ಮಹಾರಾಣಿಯವರ ಆಡಳಿತ ಬಂದಮೇಲೆ ರಾಜ್ಯದಲ್ಲಿ ನೆಮ್ಮದಿ ನೆಲೆಸುತ್ತೆ ಅಂದಿದ್ದಿರಿ, ನಾನು ನಂಬಿದ್ದೆ. ಆದರೆ ಅಕ್ಕಿ ತಿನ್ನುವವ ಹೋದರೆ ಭತ್ತ ತಿನ್ನುವವ ಬಂದ ಅಂದಹಾಗೆ, ಇನ್ನು ಅನ್ನ ಸಿಗಬೇಕು ಹೇಗೆ? ಬರಿ ಬನ್ನ.

1ನೇ : ನಾವು ಮಾತ್ರ ಒಳ್ಳೆಯವರಾದರೆ ಶಾಂತಿ ಸಿಗುತ್ತದೆಯೇ? ನೆರೆಹೊರೆಯವರೂ ಒಳ್ಳೆಯವರಾಗಿ ಹೊಂದಿಕೊಂಡಿದ್ದರೆ ಸರಿಯಾಗಿರುತ್ತೆ. ಅವರು ಹೊಡೆಯಲು ಬಂದಾಗ ನಾವು ಕೈಕಟ್ಟಿ ನಿಂತಿರುವುದಕ್ಕಾಗುವುದಿಲ್ಲ. ಮೊದಲು ಹೆದರಿಸುವುದು. ಮೀರಿ ಬಂದಲ್ಲಿ ಪ್ರಾಣ ರಕ್ಷಣೆಗಾಗಿ ಹೋರಾಡಲೇಬೇಕಲ್ಲ.

2ನೇ : ಏನೆಲ್ಲ ಆಗಬೇಕೋ, ಏನೇನು ಅನುಭವಿಸಬೇಕೋ, ಎಲ್ಲ ನಡೆದೆ ತೀರಬೇಕು. ಅಘೋರನೇ ಶರಣು ಬನ್ನಿ.(ಹೋಗುವರು)

-ತೆರೆ-

ಅರಮನೆ ಅಂತಃಪುರ ಪ್ರವೇಶ 23

ಚನ್ನಮ್ಮ : ಮೈಸೂರಿನವರೊಡನಾದ ಯುದ್ಧದಿಂದ ನಮಗೆ ಇಬ್ಬಗೆಯ ಲಾಭವಾಯಿತಲ್ಲವೆ ಪ್ರಧಾನಿಗಳೇ?

ಪ್ರಧಾನಿ : ಹೌದು, ಒಂದನೆಯಾದಾಗಿ ಬಿರುದಂತೆಂಬರಗಂಡನೆಂಬ ಬಿರುದು ಹೊತ್ತ ಚಿಕ್ಕದೇವರಾಜ ಒಡೆಯರ ಮೇಲೆ ಅಂತಿಮ ವಿಜಯ ಹಾಗೂ ಅವರ ಸ್ನೇಹ ಸಂಪಾದನೆ ಗೋಲ್ಕೊಂಡದವರ ಮೈತ್ರಿ ಇನ್ನೊಂದು .

ಚನ್ನಮ್ಮ : ಅವರ ಸಖ್ಯದಿಂದ ನಮಗೆ ಬಹಳ ಒಳ್ಳೆಯದಾಯಿತು. ಎಂದಾದರೊಂದು ದಿನ ಅವರಿಂದ ಗಂಡಾಂತರವನ್ನು ನಿರೀಕ್ಷಿಸುತ್ತಿರುವುದು ತಪ್ಪಿ ಇಂದೇ ಒಂದು ನಿರ್ಣಯಕ್ಕೆ ಬಂದ ಹಾಗಾಯಿತು. (ಮಲ್ಲಿ ಪ್ರವೇಶಿಸುವಳು) ಮಲ್ಲಿ, ಮೈಸೂರಿನ ರಾಯಭಾರಿಗಳನ್ನು ಬಿಡದಿಗೆ ತಲುಪಿಸಿ ಬಂದೆಯಾ? ಏನಾದರೂ ಹೇಳಿದರೆ ?

ಮಲ್ಲಿ : ತಮ್ಮ ಗುಣವನ್ನು ಮನಮೆಚ್ಚಿ ಹೊಗಳಿದರು. ಪ್ರಧಾನಿಯವರ ಮುತ್ಸದ್ಧಿತನವನ್ನು ಕೊಂಡಾಡಿದರು. ಕನ್ನಡದ ಅಧಿಷ್ಠಾತ್ರಿಯೆಂದು ತಮ್ಮನ್ನು ಬಣ್ಣಿಸಿದರು. ಅಮ್ಮಾಜಿ ಈ ಸ್ನೇಹದ ಮಧುರ ಬಾಂಧವ್ಯ ಚಿರಕಾಲ ಉಳಿಯಲೆಂದು ಹಾರೈಸಿದರು.

ದೂತ : (ಪ್ರವೇಶಿಸಿ ರಾಣಿಗೆ ವಂದಿಸಿ) ಮಹಾರಾಣಿಯವರಿಗೆ ಜಯವಾಗಲಿ. ಸಾಧುವರ್ಯರೊರ್ವರು ದರ್ಶನಾಪೇಕ್ಷಿಗಳಾಗಿ ಬಂದಿದ್ದಾರೆ.

ಚನ್ನಮ್ಮ : ಅವರನ್ನಿಲ್ಲಿಗೆ ಕಳುಹಿಸಿಕೊಡು. (ದೂತ ಅಪ್ಪಣೆಯೆಂದು ನಮಸ್ಕರಿಸಿ ಹೋಗುವನು) ಪ್ರಧಾನಿಗಳೇ, ದೇಶದ ಆರ್ಥಿಕತೆ ವೀತಿ ಸಡಿಲಗೊಂಡಿದೆ. ರಾಜ್ಯದ ಆದಾಯ ಇಳಿಮುಖವಾಗಿದೆ. ಸಮಾಜದ ಕಟ್ಟುಪಾಡುಗಳು ಸಡಿಲುಗೊಂಡಿದೆ ಈಗ ಅವನ್ನೆಲ್ಲ ಸರಿಪಡಿಸಬೇಕು.

ಪ್ರಧಾನಿ : ಹೌದು ತಾಯಿ, ವಿದೇಶಿ ವ್ಯಾಪಾರಿಗಳು ಸಲ್ಲಿಸಬೇಕಾಗಿರುವ ರಾಜ್ಯಾದಾಯವನ್ನು ಸರಿಯಾಗಿ ಸಲ್ಲಿಸುತ್ತಿಲ್ಲ. . ಭೂಕಂದಾಯವು ಸರಿಯಾಗಿ ವಸೂಲಾಗುತ್ತಿಲ್ಲ. ಅಧಿಕಾರಿಗಳ ದಕ್ಷತೆ ಕುಗ್ಗಿದೆ.

ಅವರಿಂದ ಪ್ರಜರಿಗೆ ಕಿರುಕುಳ ಉಂಟಾಗುತ್ತಿದೆ.

ಚನ್ನಮ್ಮ : ಇದಕ್ಕೆಲ್ಲ ಕಟ್ಟನಿಟ್ಟಾದ ನಿಯಮಗಳನ್ನು ಪಾಲನೆಗೆ ಕೊಡಬೇಕು. ಶಿವಪ್ಪನಾಯಕರು ವಿಧಿದಿದ್ದ ಸಮಸ್ತ ಕಟ್ಟುಪಾಡುಗಳು ಪುನರುಜ್ಜೀವನಗೊಳ್ಳಬೇಕು. ನಮ್ಮ ರಾಜ್ಯದ ಬಂದರುಗಳ ಮೂಲಕ ವ್ಯಾಪಾರ ನಡೆಸುತ್ತಿರುವ ಎಲ್ಲಾ ವಿದೇಶಿ ವರ್ತಕರುಗಳಿಗೂ ಬಿಗಿಯಾದ ಎಚ್ಚರಿಕೆ ಕೊಟ್ಟು ಇಲ್ಲಿಯವರೆಗೆ ಬಾಕಿಯಾಗಿರಿಸಿಕೊಂಡಿರುವ ರಾಜ್ಯಾದಾಯವನ್ನು ಸಲ್ಲಿಸಬಿಡುವಂತೆ ತಿಳಿಸಬೇಕು. ಕಂದಾಯವನ್ನು ಪುನರ್ಪರಿಶೀಲಿಸಬೇಕು. ಇಲ್ಲವಾದರೆ ಭಂಡಾರದ ಭರಣ ಕಷ್ಟವಾಗುತ್ತದೆ. ಆಡಳಿತ ಮುಗ್ಗರಿಸುತ್ತದೆ. ಪ್ರಜೆಗಳಿಗೆ ಅಧಿಕಾರಿಗಳಿಂದಾಗುತ್ತಿರುವ ಕಿರುಕುಳವನ್ನು ತಪ್ಪಿಸಲು ಉಚ್ಚ ಅಧಿಕಾರಿಯೊಬ್ಬನನ್ನು ನೇಮಿಸಬೇಕು. ಈ ಬಾರಿಯ ಸಭೆಯಲ್ಲಿ ಈ ಎಲ್ಲಾ ವಿಚಾರಗಳೂ ಚರ್ಚಿಸಲ್ಪಡಬೇಕು. ಇವೆಲ್ಲವನ್ನೂ ಗನಮದಲ್ಲಿಟ್ಟುಕೊಳ್ಳಿ.

ಪ್ರಧಾನಿ : ಆಗಲಿ ತಾಯಿ.

ಸಾಧು : (ಪ್ರವೇಶಿಸಿ) ಮಹಾರಾಣಿಯವರಿಗೆ ಜಯವಾಗಲಿ

ಚನ್ನಮ್ಮ : (ಅವನನ್ನು ದಿಟ್ಟಿಸಿ ನೋಡಿ ಮುಗುಳುನಕ್ಕು) ಆಸನವನ್ನು ಸ್ವೀಕರಿಸಿರಿ. ಏನು ಸಾಧುವರ್ಯ, ತಮ್ಮ ಈ ಪ್ರಚ್ಛನ್ನ ವೇಷವೇನು? ಆತುರದ ಕಾರ್ಯವೇನು?

ಸಾಧು : (ಅಚ್ಚರಿಗೊಂಡು) ತಮ್ಮ ಚತುರತೆ ನನ್ನನ್ನು ಬೆರಗುಗೊಳಿಸಿತು. ತಮ್ಮ ಸೂಕ್ಷ್ಮದೃಷ್ಟಿ ಉಕ್ಕಿನಕೋಟೆಯನ್ನೂ ಬೇಧಿಸಬಲ್ಲದು.

ಚನ್ನಮ್ಮ : ಮುಖದಲ್ಲಿ ಉಕ್ಕುತ್ತಿರುವ ಕ್ಷಾತ್ರತೇಜಸ್ಸು, ಸಾಧುವೇಷದಿಂದ ಆಚ್ಛಾದಿತವಾದ ಮಾತ್ರಕ್ಕೆ ಕುಂದುವುದುಂಟೆ? ತಮ್ಮ ಪರಿಚಯ ಲಾಭವಾಗಬಹುದೆ ?

ಸಾಧು : ಅನೇಕ ಊರುಗಳನ್ನು ತಿರುಗುತ್ತಾ ಯಾತ್ರಾರ್ಥಿಯಾದ ನಾನು ಇಲ್ಲಿಗೆ ಬಂದಿದ್ದೇನೆ. ತಮ್ಮ ಕೀರ್ತಿಯನ್ನು ಮೊದಲೇ ಕೇಳಿದ್ದೆನಾದ್ದರಿಂದ ತಮ್ಮ ದರ್ಶನಾಪೇಕ್ಷೆಯಾಗಿ ಸನ್ನಿಧಿಗೆ ಬಂದೆ. ರಾಜ್ಯಕ್ಕೆ ಬಂದು ಸತ್ಕೀರ್ತಿಶಾಲಿನಿಯಾದ ಮಹಾರಾಣಿಯ ಸಂದರ್ಶನ ಮಾಡದೆ ಹೋದಲ್ಲಿ ಅದು ಅಪಚಾರವೂ ಆತ್ಮವಂಚನೆಯೂ ಅಗುವುದಲ್ಲವೆ.

ಚನ್ನಮ್ಮ : ಯಾವುದೋ ಕಾರ್ಯಾತುರತೆಯು ತಮ್ಮ ಮುಖದಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ. ಏನನ್ನೋ ಬಿನ್ನವಿಸಲು ಹಿಂಜರಿಯುತ್ತಿರುವಂತಿದೆ. ಅರುಹಬೇಕೆಂಬ ಆತುರತೆಯನ್ನು ತಡೆಹಿಡಿಯುತ್ತಿರುವಿರೇಕೆ? (ಅವನ ಹಿಂಜರಿಯುತ್ತಿರುವ ಕಾರಣವರಿತು ಮಲ್ಲಿಗೆ ಒಳಗೆ ಹೋಗುವಂತೆ ಕಣ್ಸನ್ನೆಯಿಂದ ತಿಳಿಸಲು ಅವಳಂತೆಯೇ ಮಾಡುವಳು) ಈಗ ಹೇಳಿ ಸಂದೇಹಕ್ಕೆ ಆಸ್ಪದವಿಲ್ಲ..ತಮ್ಮ ಕಾರ್ಯವೆಷ್ಟೇ ಮಹತ್ವದ್ದಾಗಿದ್ದರೂ ತಿಳಿಸಬಹುದು...ನಿಮ್ಮ ರಹಸ್ಯ ಬಯಲಾದೀತೆನ್ನುವ ಭಯ ಬೇಡ ಇವರು ಪ್ರಧಾನಾಮಾತ್ಯರಾದ ಆವಿನಹಳ್ಳಿ ನರಸಿದ್ದಯ್ಯನವರು.

ಸಾಧು : ಪ್ರಧಾನಿಗಳಿಗೆ ಪ್ರಣಾಮಗಳು ತಾವು ನನ್ನ ವರ್ತನೆಯನ್ನು ಅನ್ಯಥಾ ಭಾವಿಸಬಾರದು. ಅಪಚಾರವನ್ನು ಕ್ಷಮಿಸಬೇಕು.

ಪ್ರಧಾನಿ : ಸಂಕೋಚ ಬೇಡಿ. ನಿಮ್ಮಿಂದ ಅಪಚಾರವಾಗಿಲ್ಲ ಆತಂಕವಿಲ್ಲವಾದರೆ ಏನಿದ್ದರೂ ಸನ್ನಿಧಿಯಲ್ಲಿ ನಿವೇದಿಸಿಕೊಳ್ಳಬಹುದು

ಸಾಧು : ಮಹಾರಾಷ್ಟ್ರ ರಾಜ್ಯ ಸ್ಥಾಪಕರಾದ ವೀರನೇತಿ ಶಿವಾಜಿ ಮಹಾರಾಜರ ಹೆಸರನ್ನು ನೀವು ಕೇಳಿಯೇ ಇದ್ದೀರಿ.

ಪ್ರಧಾನಿ : ನಮ್ಮ ಸಮಕಾಲೀನರಾದ ಅವರನ್ನರಿಯದುಂಟೆ

ಚನ್ನಮ್ಮ : ದಿಲ್ಲಿಯ ಔರಂಗಜೇಬನ, ಬಿಜಾಪುರದ ಸುಲ್ತಾನರ ವಿರುದ್ಧ ಸೆಣಸಿದ ತಂತ್ರ, ಹಿಂದೂ

ರಾಜ್ಯವಾದ ಮಹಾರಾಷ್ಟ್ರವನ್ನು ನಿರ್ಮಾಣ ಮಾಡಿದ ಅವರ ಸಾಹಸ ಚತುರತೆಗಳಿಗೆ ಮೆಚ್ಚಿಕೊಂಡಿದ್ದೇವೆ.

ಸಾಧು : ಅವರ ಮಕ್ಕಳಿಬ್ಬರಲ್ಲಿ ಪಟ್ಟದ ವಿಚಾರದಲ್ಲಿ ವಿವಾದ ಉಂಟಾಗಿ ಕೊನೆಗೆ ಶಂಭುಜಿಯೇ ರಾಷ್ಟ್ರದ ಪ್ರಭುವಾದನು. ಅವನಿಗೆ ಸಾಂಭಾಜಿಯೆಂದೂ ಹೆಸರಿತ್ತು ಅವನು ವಿಶೇಷ ವಿಲಾಸಿಯಾಗಿದ್ದ. ದಿಲ್ಲಿಯ ಬಾದುಷಹನು ಅದರ ಲಾಭವನ್ನು ಪಡೆದುಕೊಂಡನು. ಶಿವಾಜಿ ಮಹಾರಾಜರನ್ನು ತನ್ನ ಸಾಮ್ರಾಜ್ಯದ ಹಗೆಯೆಂದೂ, ಸಾಮ್ರಾಜ್ಯದ್ರೋಹಿಯೆಂದೂ ತಿಳಿದುಕೊಂಡಿದ್ದ ಔರಂಗಜೇಬನು ಅವರ ವಂಶವನ್ನೇ ನಿರ್ಮಾಣ ಮಾಡುವ ಫಣತೊಟ್ಟು ಉಪಾಯಂತರಗಳಿಂದ ಹಂಭುಜಿಯ ಕೊಲೆ ಮಾಡಿಸಿದ.

ಪ್ರಧಾನಿ : ಇದು ತೀರಾ ಅನ್ಯಾಯ ಅದನ್ನು ಕೇಳಿ ನಾವೂ ಮರುಗಿದೆವು. ಔರಂಗಜೇನ ಅಮಾನುಷ ವರ್ತನೆಗೆ ಖೇದಗೊಂಡೆವು.

ಸಾಧು : ಇನ್ನೊಬ್ಬನಾದ ರಾಜಾರಾಮನನ್ನೂ ಕೊಂದೇ ತೀರಬೇಕೆಂದು ಆ ನೀಚನ ಪ್ರಬಲ ದಾಹ. ಅದಕ್ಕಾಗಿ ಪ್ರಯತ್ನಿಸಿದ ಅವನಿಂದ ತಪ್ಪಿಸಿಕೊಂಡ ರಾಜಾರಾಮರಾಯನನ್ನು ಹಿಡಿಯುವುದಕ್ಕಾಗಿ ಔರಂಗಜೇಬನು ಮಹಾರಾಷ್ಟ್ರಕ್ಕೆ ಸೇರಿದ್ದ ಅನೇಕ ದುರ್ಗಗಳನ್ನು ವಶಪಡಿಸಿಕೊಂಡ. ಆದರೆ ರಾಜಾರಾಮರಾಯನು ಮಾತ್ರ ಅವನಿಗೆ ಸಿಕ್ಕದಂತೆ ಉಪಾಯಾಂತರಗಳಿಂದ ತಪ್ಪಿಸಿಕೊಂಡನು. ದಿಲ್ಲಿಯ ಸೇನಾಧಿಪತಿಯೊಬ್ಬನು ರಾಜಾರಾಮನನ್ನು ಸೆರೆಹಿಡಿದೇ ತೀರಬೇಕೆಂದು ಅವನ ಬೆನ್ನು ಹತ್ತಿ ಅಲೆಯುತ್ತಿರುವನು.

ಪ್ರಧಾನಿ : ಮಹಾರಾಷ್ಟ್ರವು ಮೊಗಲ್ ಸಾಮ್ರಾಜ್ಯದ ಪ್ರಥಮ ಶತ್ರು . ಅದನ್ನು ಹೇಳ ಹೆಸರಿಲ್ಲದಂತೆ ಮಾಡಿದರೆ ತಾನು ನಿಶ್ಚಿಂತನೆಂದು ಬಾದಷಹನ ಭಾವನೆ. ಅದಕ್ಕಾಗಿ ಈ ಛಲ ಸರಿ, ರಾಜಾರಾಮರಾಯನ ವಿಚಾರವನ್ನು ಇಷ್ಟೆಲ್ಲ ಸವಿಸ್ತಾರವಾಗಿ ಹೇಳುತ್ತಿರುವ ನೀವು ನಿಮ್ಮ ಪರಿಚಯವನ್ನೇ ಮಾಡಿಕೊಡಲಿಲ್ಲ.

ಚನ್ನಮ್ಮ : ಕಾರ್ಯಸಾಧನೆಗಾಗಿ ಸಾಧುವೇಷ ಧರಿಸಿರುವ ರಾಜಾರಾಮರಾಯರೆ ಇವರೆಂದು ಬೇರೆ ಹೇಳಬೇಕೆ?

ಸಾಧು : ತಮ್ಮ ಊಹೆ ಯಥಾರ್ಥವಾದುದು. ಆ ಹತಭಾಗ್ಯ ರಾಜಾರಾಮನೇ ನಾನು. ಔರಂಗಜೇಬನ ದಬ್ಬಾಳಿಕೆಯನ್ನು ಎದುರಿಸಲಾಗದೇ ರಾಜ್ಯವನ್ನು ತ್ಯಜಿಸಿ ಅವನಿಗೆ ಸಿಗದಂತೆ ತಲೆತಪ್ಪಿಸಿಕೊಂಡು ಅಲೆಯುತ್ತಾ ಇಲ್ಲಿಗೆ ಬಂದಿದ್ದೇನೆ.

ಪ್ರಧಾನಿ : ನಿಮ್ಮ ಈ ಸಾಧು ವೇಷವೆ ಅವರನ್ನು ಮೋಸಗೊಳಿಸಿ ಪಾರು ಮಾಡುತ್ತಿದೆ.

ಸಾಧು : ಈ ವೇಷದಲ್ಲಿಯೂ ನಾನು ನನ್ನ ಅನುಯಾಯಿಗಳು ಅವರ ಕೈಗೆ ಸಿಕ್ಕು ಪರದಾಡುವ ಪರಿಸ್ಥಿತಿಯೊದಗಿತು . ಹೇಗೋ ಅವರ ಹಿಡಿತದಿಂದ ಮುಕ್ತರಾದೆವು.

ಪ್ರಧಾನಿ : ತಂದೆಯಂತೆ ಮಕ್ಕಳೂ ಕೂಡ ಅಸಾಧಾರಣರು.

ಸಾಧು : ಆ ತಂದೆಯ ಯೋಗ್ಯತೆ ಈ ಮಗನಿಗೆಲ್ಲಿದೆ? ಅವರು ಶತ್ರುಗಳೊಡನೆ ಸಿಂಹವಾಗಿ ಹೋರಾಡಿದರು ನಾನು ನರಿಯಂತೆ ಜೀವದುಳಿವಿಗಾಗಿ ಪರದಾಡುತ್ತಿರುವೆನು. ಜೀವವುಳಿಸಿ ಕೊಳ್ಳುವುದಕ್ಕೆ ಯಾರ ಆಸರೆ ಯಾರ ಕೃಪಾಶ್ರಯ ದೊರಕೀತೆಂದು ಹಂಬಲಿಸುತ್ತಾ ಊರಿಂದೂರಿಗೆ ಅಲೆಯುತ್ತಿರುವ ನಾನು ಯಾವುದರಲ್ಲಿ ಅವರಿಗೆ ಸರಿಸಮನಾಗಬಲ್ಲೆ? ಆತ್ಮರಕ್ಷಣೆಗಾಗಿ ಅನ್ಯರ ಮೊರೆ ಹೋಗುವ ಸ್ಥಿತಿ ನನ್ನುದು. ತಮ್ಮ ಕೃಪಾಶ್ರಯವನ್ನು ಬೇಡಿ ಬದುಕರು ಬಂದಿದ್ದೇನೆ. ನೀವು ಅಭಯ ನೀಡಿದರೆ ನಾನು ನಿಶ್ಚಿಂತ.

ಚನ್ನಮ್ಮ : ಇದು ಘನತರವಾದ ಜವಾಬ್ದಾರಿ ರಾಜಾರಮರಾಯರೆ

ಸಾಧು : ಹೌದು, ಆದರೆ ನಾನು ನಿಮ್ಮಲ್ಲಿ ಆಸರೆ ಬೇಡುತ್ತಿರುವುದು ಕೆಲವೇ ದಿನಗಳು ಆಮೇಲೆ ನನ್ನನ್ನು

ನನ್ನ ನಾಡಿಗೆ ಕಳುಹಿಸಿಕೊಡಿ. ಮಹಾರಾಣಿವರಲ್ಲಿ ಅತಿ ದೈನ್ಯದಿಂದ ಬೇಡಿಕೊಳ್ಳುತ್ತೇನೆ.

ಚನ್ನಮ್ಮ : ಇಂತಹ ಹೊಣೆಯನ್ನು ಹೊರುವ ಮುನ್ನ ಚೆನ್ನಾಗಿ ಯೋಚಿಸಬೇಕಾಗುತ್ತದೆ. ಒಪ್ಪಿಕೊಂಡಮೇಲೆ ಬರಬಹುದಾದ ಎಡರುಗಳನ್ನೆದುರಿಸಿಯಾದರೂ ಹೊಣೆ ನೀಗಿಕೊಳ್ಳಬೇಕು.

ಸಾಧು : ನನಗೆ ಆಶ್ರಯ ನೀಡುವುದರಿಂದ ನಿಮಗೆ ಉಪದ್ರವಗೊಳೊದಗಬಹುದು. ಅವುಗಳನ್ನು ನೀವು ನಿಭಾಯಿಸಬಲ್ಲಿರೆಂಬ ವಿಶ್ವಾಸ ನನಗಿದೆ.

ಪ್ರಧಾನಿ : ಒಪ್ಪಿಕೊಂಡಷ್ಟು ಸುಲಭವಾಗಿ ಹೊಣೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ ರಾಜಾರಾಮರಾಯರೆ.

ಸಾಧು : ನಾನಾದರೂ ಹಲವು ರಾಜರ ಆಸರೆ ಬೇಡಿದೆ ಮಹಾರಾಣಿ ಔರಂಗಜೇಬನ ಹೆಸರು ಕೇಳಿದರೆ ಎಲ್ಲರೂ ನಡುಗುತ್ತಾರೆ. ಒಬ್ಬನೇ ಒಬ್ಬ ಹಿಂದೂ ರಾಜರಲ್ಲಿಯೂ ಅವನನ್ನೆದುರಿಸುವ ಕೆಚ್ಚಿಲ್ಲ ಅವನ ವಿರೋಧಿಯಾದ ನನಗೆ ರಕ್ಷಣೆ ನೀಡುವ ಧೈರ್ಯವಿಲ್ಲ. ಮಧುರೆ ತಾಂಜಾವೂರುಗಳಂತಹ ಪ್ರಬಲರಾದ ಅರಸರೂ ಕೂಡ ಅವನ ಗೊಡವೆ ಬೇಡವೆನ್ನುತ್ತಾರೆ. ಪ್ರತಿಯೊಬ್ಬರೂ ಒಂದೊಂದು ನೆಪವನ್ನು ಮುಂದುಮಾಡಿ ನನಗೆ ಆಶ್ರಯ ನೀಡಲು ನಿರಾಕರಿಸಿದರು. ಹಿಂದೂ ದೇಶದಲ್ಲಿ ಸಂಪೂರ್ಣವಾಗಿ ಹಿಂದುಗಳ ಅಧಃಪತನವಾಗಿರುವುದೆಂದರೆ ಅತಿಶಯವಲ್ಲ.

ಪ್ರಧಾನಿ : ನಮ್ಮ ನಮ್ಮಲ್ಲೆ ಕಚ್ಚಾಟ, ಅಸೂಯೆ ಇವುಗಳಿಂದ ಎಲ್ಲರೂ ಬಲಹೀನರಾಗಿ ತುರುಕರ ರಾಜ್ಯ ವಿಸ್ತರಣೆಗೆ ಅವರು ನಮ್ಮ ಮೇಲೆ ದಬ್ಬಾಳಿಕೆ ನಡೆಯಲು ಅವಕಾಶ ಮಾಡಿಕೊಡುತ್ತಿದ್ದಾರೆ. ಹಿಂದೂ ಅರಸರುಗಳು ಒಗ್ಗಟ್ಟಿನಲ್ಲಿ ಒಂದಾಗಿ ಮುಸಲ್ಮಾರಿನಗೆ ಎದುರುನಿಂತರೆ ಭಾರತದಲ್ಲಿ ಅವರ ಆಡಳಿತ ಪರಿಸಮಾಪ್ತಿಯಾಗುವುದು ಖಂಡಿತ. ಆದರೆ ಪರಿಸ್ಥಿತಿ ಅದಕ್ಕೆ ವಿರೋಧವಾಗಿದೆ. ನಮ್ಮ ಅನೈಕ್ಯತೆಯೇ ಅವರ ಸ್ಥಿರ ಆಳ್ವಿಕೆಗೆ ಅವಕಾಶ ಮಾಡಿಕೊಡುತ್ತಿದೆ.

ಸಾಧು : ಹಿಂದೂ ಅರಸರುಗಳೆಲ್ಲ ಗದ್ದುಗೆಯ ಮೇಲೆ ಕುಳಿತ ನಾಮಮಾತ್ರ ದೊರೆಗಳಾಗಿರುವರು ಒಬ್ಬ ಹಿಂದೂ ಸೋದರನನ್ನು ಸಂರಕ್ಷಿಸಲಾರದ ಹೇಡಿಗಳಾಗಿರುವರು.

ಪ್ರಧಾನಿ : ಆದರೆ ನಮ್ಮ ರಾಜ್ಯದ ಆಂತರಿಕ ಸ್ಥಿತಿ ಆತಂಕಕಾರಿಯಾಗಿರುವುದರಿಂದ ಮಾತ್ರ ನಾವು ಹಾಂದುಮುಂದು ನೋಡಬೇಕಾಗಿದೆ.

ಸಾಧು : ನಿಮ್ಮ ರಾಜ್ಯದ ಸ್ಥಿತಿಗತಿಗಳ ವಿಚಾರ ಅಲ್ಪಸ್ವಲ್ಪ ನನಗೂ ತಿಳಿದಿದೆ. ಅಂತರಿಕ ಬಿಕ್ಕಟ್ಟಿನ ನಡುವೆಯೂ ಪರಾಕ್ರಮಿಯಾದ ಮೈಸೂರಿನ ಚಿಕ್ಕದೇವರಾಜ ಒಡೆಯರ ಮೇಲೆ ಎರಡು ಬಾರಿ ವಿಜಯ ಪಡೆದ ನಿಮ್ಮ ಸಾಮರ್ಥ್ಯವೇ ನನ್ನಲ್ಲಿ ಆಶಾಕಿರಣವನ್ನು ಮೂಡಿಸಿ ಇಲ್ಲಿಗೆ ಕರೆತಂದಿತು. ನಿಮ್ಮಲ್ಲಿಯೂ ನನ್ನ ಕೋರಿಕೆಗೆ ಮನ್ನಣೆ ದೊರೆಯದಾದಲ್ಲಿ ಆ ತುರುಕ ಔರಂಗಜೇಬನ ಬಂಧಿವಾಸವೇ ನನಗೆ ಗತಿ. ಅವನ ಕ್ರೌರ್ಯಕ್ಕೆ ಬಲಿಯಾಗಿಪ್ರಾಣಕ್ಕೆರವಾಗಬೇಕಾಗಬಹುದು. ನಾನವನ ಕೈಗೆ ಸಿಕ್ಕುದಾದರೆ ಯಾವ ವಿಧವಾದ ಅಮಾನುಷ ರೀತಿಯಿಂದ ನನ್ನ ಮೇಲಿರುವ ತನ್ನ ಕೋಪತಾಪಗಳನ್ನು ತಣಿಸಿಕೊಳ್ಳುವನೋ ಊಹಿಸಲು ಸಾಧ್ಯವಿಲ್ಲ.

ಚನ್ನಮ್ಮ : ನಿಮ್ಮ ಸ್ಥಿತಿ ನಿಜಕ್ಕೂ ಶೋಚನೀಯವಾದುದು. ನಿಮಗೊದಗಿದ ಸ್ಥಿತಿಗಾಗಿ ನಮಗೆ ಅನುಕಂಪ ಉಂಟಾಗುತ್ತದೆ. ನಿಮ್ಮ ಸಂಕಷ್ಟ ಸಮಯದಲ್ಲಿ ಕೈಲಾದ ಸಹಾಯ ಮಾಡಬೇಕೆಂಬ ಬಯಕೆ ನಮ್ಮಲ್ಲೂ ಉದ್ಭವಿಸುತ್ತದೆ. ರಾಜಾರಾಮರಾಯರೆ, ನೀವು ಬೇಸರಪಟ್ಟುಕೊಳ್ಳಬಾರದು. ನಮ್ಮ ರಾಜ್ಯದ ಕಠಿಣ ಪರಿಸ್ಥಿತಿಯ ದೆಸೆಯಿಂದ ನಿಮ್ಮ ಬಿನ್ನಹವನ್ನೊಮ್ಮೆಲೆ ಮನ್ನಿಸುವುದು ದುಸ್ತರವಾಗಿದೆ. ಆದರೆ ನೀವೇನೂ ಬಯಪಡಬೇಕಾಗಿಲ್ಲ, ನಾಳೆಯವರೆಗೆ ನಮ್ಮ

ಅತಿಥಿಗಳಾಗಿರಿ. ನಿಮಗೆ ಬೇಕಾದಂತೆ ವ್ಯವಸ್ಥೆಯನ್ನು ಮಾಡಲಾಗುವುದು. ನಮ್ಮ ನಿರ್ಧಾರವನ್ನು ನಾಳೆಗೆ ನಿಮಗೆ ತಿಳಿಸುತ್ತೇವೆ.

ಸಾಧು : ತಾಯಿ ನನ್ನ ಬಗ್ಗೆ ಇಷ್ಟಾದರೂ ಕನಿಕರ ವ್ಯಕ್ತಪಡಿಸಿದವರು ಇದುವರೆಗೆ ಯಾರೂ ಇಲ್ಲ. ಯಾವುದೇ ರಾಜ್ಯದಲ್ಲಿ ನಾನಿದ್ದಷ್ಟು ಸಮಯವೂ ಅವರಿಗೆ ಕಸಿವಿಸಿಯಾಗುತ್ತಿತ್ತು. ನೀವು ಇಷ್ಟಾದರೂ ಸಹಾನುಭೂತಿ ವ್ಯಕ್ತಪಡಿಸಿದಿರಿ. ನೀವು ಆಶ್ರಯ ನೀಡಲಿರುವುದು ಔರಂಗಜೇಬನ ಶತ್ರುವಿಗೆ ಎಂಬುದು. ಆಶ್ರಯ ನೀಡುವುದರಿಂದ ನೀವೇನೂ ನಿರಾತಂಕವಾಗಿರುವ ಹಾಗಿಲ್ಲ. ಆದುದರಿಂದ ಚೆನ್ನಾಗಿ ಯೋಚಿಸಿ ನಿರ್ಧಾರಕ್ಕೆ ಬನ್ನಿ... ನಿಮ್ಮ ತೊಂದರೆಯನ್ನು ಸಾಧ್ಯವಾದಷ್ಟು ಬದಿಗಿರಿಸಿ ಆ ದುರುಳನ ಕೊಡಾಲಿಯಿಂದ ನನ್ನ ರಕ್ಷಿಸಿದರೆ... (ಕಂಠ ಗದ್ಗದವಾಗುವುದು) ಹಿಂದೂ ರಾಜ್ಯಸ್ಥಾಪಿಸಿದ ಪುಣ್ಯಕ್ಕೆ ನೀವು ಭಾಗಿಯಾಗುವಿರಿ. ನಾನು ಯಾವಜ್ಜೀವ ನಿಮಗೆ ಋಣಿಯಾಗಿರುತ್ತೇನೆ.

ಚೆನ್ನಮ್ಮ : ಚಿಂತಿಸದಿರಿ. ನಾವು ನಮ್ಮ ಮಂತ್ರಿಮಂಡಲದವರೊಂದಿಗೂ, ಆಪ್ತರೊಂದಿಗೂ ಸಮಾಲೋಚಿಸಬೇಕು. ಅಲ್ಲಿಯವರೆಗೆ ಅವಕಾಶ ಕೊಡಿ. ಪ್ರಧಾನಿಗಳೇ! ಇವರನ್ನು ಕರೆದುಕೊಂಡು ಹೋಗಿ ನಮ್ಮ ಅತಿಥಿಗೃಹದಲ್ಲಿ ಬಿಟ್ಟು ತಕ್ಕ ವ್ಯವಸ್ಥೆಯನ್ನೇರ್ಪಡಿಸಿ ಬನ್ನಿ.

ಪ್ರಧಾನಿ : (ಎದ್ದು) ಬನ್ನಿ ರಾಜಾರಾಮರಾಯರೆ. (ಸಾಧು ರಾಣಿಗೆ ನಮಸ್ಕರಿಸಿ ಪ್ರಧಾನಿಯನ್ನು ಹಿಂಬಾಲಿಸಿ ಹೋಗುವರು)

---ತೆರೆ---

ಪ್ರವೇಶ 34

ಸಜ್ಜೆಮನೆ ರಾತ್ರಿಯ ನಿಶ್ಶಬ್ದತೆ, ಚಿನ್ನದ ಕಂದೀಲಿನಲ್ಲಿ ಉರಿಯುತ್ತಿರುವ ದೀಪ ಮಂದ ಪ್ರಕಾಶ ಬೀರಿದೆ. ಮಹಾರಾಣಿ ಪಲ್ಲಂಗದ ಮೇಲೆ ಚಿಂತಿಸುತ್ತ ಮಲಗಿದ್ದಾಳೆ. ಏನನ್ನೋ ಆಲೈಸಿ ಎದ್ದು ಕುಳಿತುಕೊಳ್ಳುವಳು ಗೋಡೆಯ ಹಿಂಬದಿಯಲ್ಲಿ ಕರುಣ ಧ್ವನಿಯೊಂದು ಹಾಡು ಕೇಳುವುದು

ಚೆನ್ನಮ್ಮ : ಮಲ್ಲಿ, ಮಲ್ಲಿ

ಮಲ್ಲಿ : (ಓಡಿಬಂದು) ಅಮ್ಮಾಜಿ, (ಪ್ರವೇಶಿಸಿ) ಕರೆದಿರಾ ಅಮ್ಮಾಜಿ?

ಚೆನ್ನಮ್ಮ : ಏನದು ಶಬ್ದ?

ಮಲ್ಲಿ : ಎಲ್ಲಿ ಅಮ್ಮಾಜಿ? ಶಬ್ದವೇನೂ ಕೇಳಿಸಲಿಲ್ಲ.

ಚೆನ್ನಮ್ಮ : ಅಗೋ ಕೇಳು... ಕೇಳಿಸುತ್ತಿದೆ. ಯಾರೋ ದುಃಖದಿಂದ ಹಾಡುತ್ತಿರುವಂತಿದೆ.

ಮಲ್ಲಿ : ಅದು ಭ್ರಮೆಯಿರಬೇಕು. ಯಾವುದೋ ಯಾವುದೋ ಯೋಚನೆಯಲ್ಲಿ ಮನಸ್ಸು ಬೇಸರವಾದಾಗ ಅಮ್ಮಾಜಿಯವರಿಗೆ ಹಾಗೆ ಭ್ರಮೆಯುಂಟಾಗಿ ಹೀಗೆಯೇ ಏನಾದರೂ ಅನ್ನಿಸುವುದು.

ಚೆನ್ನಮ್ಮ : ಇಲ್ಲ

ಮಲ್ಲಿ : ನಾನಾಗಲೇ ಹೇಳ್ದೆ ಅಲ್ವೇ ಅಮ್ಮಾ.

ಚೆನ್ನಮ್ಮ : ಹಾಗೇನು ಇಲ್ಲವೇನೋ.. ಆದರೆ ಮನಸ್ಸಿನಲ್ಲಿ ಏನೋ ಕಸಿವಿಸಿ, ಏನೂ ಅರ್ಥವಾಗುತ್ತಿಲ್ಲ.

ಮಲ್ಲಿ : ನೀವು ಭಯಪಡಬೇಕಾದ ಯಾವ ಕಾರಣವೂ ಇಲ್ಲ ಅಮ್ಮಾಜಿ.

ಚೆನ್ನಮ್ಮ : ಭಯ... ಆದರೆ ಮನಸ್ಸಲ್ಲಿ ಏನೋ ಬೇಸರವಾಗಿದೆ ಅನ್ನಿಸುತ್ತಿದೆ

ಮಲ್ಲಿ : ಯೋಚಿಸಬೇಡಿ ಅಮ್ಮಾಜಿ, ಇಷ್ಟದೇವತೆಯನ್ನು ಧ್ಯಾನಿಸಿ ಮಲಗಿಕೊಳ್ಳಿ. ಮನಸ್ಸಿಗೆ ನೆಮ್ಮದಿ ಲಭಿಸುವುದು (ಚೆನ್ನಮ್ಮ ಮಲಗಿಕೊಳ್ಳುವಳು) ನಾನು ಹೋಗಲೇ ಅಮ್ಮಾಜಿ?

ಚೆನ್ನಮ್ಮ : ಹೂಂ, ಸ್ವಲ್ಪ ಎಚ್ಚರದಿಂದಿರು.

ಮಲ್ಲಿ : ಆಗಲಿ, (ಹೋಗುವಾಗ ಚೆನ್ನಮ್ಮ ನಿದ್ದೆ ಮಾಡುವಳು. ಕೆಲವು ವೇಳೆ ಕಳೆದರೆ ರಾಣಿಗೆ

ಜೊಂಪು ಹತ್ತಿದೆ. ಕರಿಯ ಮುಸುಕಿನಿಂದ ಆಕಾರ ಮರೆಸಿಕೊಂಡ ವ್ಯಕ್ತಿಯೊಂದು ಮೆಲ್ಲಡಿಯಿಡುತ್ತಾ ಸುತ್ತ ಮುತ್ತ ತಿರುಗಿ ನೋಡುತ್ತಾ ಪ್ರವೇಶಿಸುವುದು. ಅಡಿಯಮೇಲಡಿಯಿಂದ ರಾಣಿ ಮಲಗಿದ ಪಲ್ಲಂಗವನ್ನು ಸಮೀಪಿಸಿ ರಾಣಿಯನ್ನು ಈಕ್ಷಿಸುವುದು. ರಾಣಿ ''ಯಾರು'' ಎಂದು ಕೂಗುತ್ತಲೂವ್ಯಕ್ತಿ ಮಂಚದಡಿಯಲ್ಲಿ ಅವಿತುಕೊಳ್ಳುವುದು. ರಾಣಿ ಮತ್ತೆ ಮತ್ತೆ ''ಯಾರು ಯಾರು'' ಎನ್ನುತ್ತ ಎದ್ದು ಕುಳಿತು ಸುತ್ತುಲೂ ಒಮ್ಮೆ ನೋಡಿ ಖಡ್ಗವನ್ನು ಹಿಡಿದು ನಿಲ್ಲವುಳು ಗಾಭರಿಯಿಂದ ಮಲ್ಲಿ ಪ್ರವೇಶಿಸುವಳು.)

ಮಲ್ಲಿ : ಏನು ಅಮ್ಮಾಜಿ ?

ಚನ್ನಮ್ಮ : ಯಾವುದೋ ಭೂತ ಸೆಜ್ಜೆಮನೆಯನ್ನು ಪ್ರವೇಶಿಸಿದೆ.

ಮಲ್ಲಿ : ಇದೇನು ಅಮ್ಮಾಜಿ. ಇಲ್ಲಿ ಯಾವ ಭೂತ ಬರಬೇಕು

ಚನ್ನಮ್ಮ : ಯಾವುದೋ ರಕ್ತಪಿಪಾಸಿ ದುಷ್ಟರಾಕ್ಷಸ

ಮಲ್ಲಿ : ಕನಸಿನಲ್ಲಿ ಏನೋ ಕಂಡು ಗಾಬರಿಗೊಂಡಿದ್ದೀರಿ

ಚನ್ನಮ್ಮ : ಅಲ್ಲ ಮಲ್ಲಿ ಇಲ್ಲಿ ಯಾವುದೋ ಕೃಷ್ಣ ಕಾರಸ್ಥಾನ ನಡೆದಿದೆ. ಹೋಗು ಸಿಪಾಯಿಗಳನ್ನು ಕೂಡಲೇ ಕರೆದುಕೊಂಡು ಬಾ. ಏನಿದ್ದರೂ ಶೋಧಿಸಿಯೇ ಬಿಡೋಣ.(ಮಲ್ಲಿ ಹೋಗುವಳು) ಯಾರದು? ಮರೆಯಲ್ಲಿ ಅವಿತಿರುದೇಕೆ? ಎದುರು ಬಾ.. ಹಿಂಬದಿಯಿಂದ ಇರಿಯುವ ಸಾಹಸವೇಕೆ? ಧೈರ್ಯವಿದ್ದರು ಎದುರು ಬಂದು ಹೋರಾಡು. ಇನ್ನು ನಿನ್ನ ಯಾವ ಆಟವೂ ಸಾಗಲಾದರು. (ಮಲ್ಲಿ ಇಬ್ಬರು ಸಿಪಾಯಿಗಳೊಂದಿಗೆ ಪ್ರವೇಶಿಸುವಳು. ಸಿಪಾಯಿಗಳು ರಾಣಿಗೆ ಮಣಿದು ನಿಲ್ಲುವರು) ಅಂತಃಪುರದ ಪ್ರತಿ ಮೂಲೆಯ ಶೋಧ ನಡೆಸಿ ಸಿಕ್ಕಿದವರನ್ನು ಎಳೆದು ತನ್ನಿ ಮೊದಲು ಈ ಸಜ್ಜೆಮನೆ (ಸಿಪಾಯಿಗಳು ಎಲ್ಲೆಡೆ ಶೋಧಿಸಿ ಪಲ್ಲಂಗದಡಿ ನೋಡಿ)

ಸಿಪಾಯಿ : ನೋಡಿ ಒಡತಿ , ಇಲ್ಲಿ ಯಾರೋ ಅಡಗಿಕೊಂಡಿದ್ದಾರೆ (ರಾಣಿ, ಮಲ್ಲಿ ಅಚ್ಚರಿ ಪಡುವರು)

ಚನ್ನಮ್ಮ : ಯಾವುದೋ ವಿದ್ರೋಹದ ಹುಳು. ಎಳೆದು ತನ್ನಿ ಈಚೆಗೆ.

ಸಿಪಾಯಿ : ಏ ಯಾರದು? ಈಚೆಗೆ ಭಾ (ಖಡ್ಗದ ಕೊನೆಯಿಂದ ತಿವಿಯುವನು ಅಡಗಿದವನು ನಡುಗುತ್ತಾ ನಿಲ್ಲುವನು)

ಚನ್ನಮ್ಮ : ಮುಸುಕು ತೆಗೆ ಹೇಡಿಯಂತೆ ಮುಖ ಮತ್ತೆ ಮರೆಸಿಕೊಂಡಿರುವೆಯೇಕೆ? (ಸಿಪಾಯಿಗಳು ಆವನ ಮುಸುಕನ್ನು ಎಳೆದು ಹಾಕುವರು ವ್ಯಕ್ತಿ ನಡುಗುತ್ತಾ ಕೈ ಜೋಡಿಸಿ ನಿಲ್ಲುವನು) ಯಾರು ನೀನು?

ವ್ಯಕ್ತಿ : ತಮ್ಮ ಪಾದಸೇವೆಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಸೇವಕ ತಾಯಿ

ಚನ್ನಮ್ಮ : ಇಲ್ಲಿಗೇಕೆ ಬಂದೆ ? ನಿಜವನ್ನು ಹೇಳು

ವ್ಯಕ್ತಿ : ನಿಮ್ಮನ್ನು ಕೊಲ್ಲುವ ಕಾಯಕದ ಹೊರೆಯನ್ನು ಹೊರಿಸಿ ಕಳುಹಿಸಿದರು ತಾಯಿ

ಚನ್ನಮ್ಮ : ಇದಕ್ಕೆ ಪ್ರಚೋದನೆಯಿತ್ತವರು ಯಾರು ?

ವ್ಯಕ್ತಿ : ತಮ್ಮಲ್ಲೆ ಅಧಿಕಾರಿಗಳಾಗಿದ್ದ ಲಕ್ಷ್ಮಯ್ಯ ಮತ್ತು ವೀರಭದ್ರಯ್ಯ

ಚನ್ನಮ್ಮ : ಲಕ್ಷ್ಮಯ್ಯ..ವೀಭದ್ರಯ್ಯ..ಹುಂ.... ಈಗವರೆಲ್ಲಿದ್ದಾರೆ?

ವ್ಯಕ್ತಿ : ಮಾರುವೇಷದಿಂದ ಈಗ್ಗೆ ಕೆಲವು ದಿನಗಳಿಂದ ರಾಜಧಾನಿಯಲ್ಲೇ ಇರುವರು

ಚನ್ನಮ್ಮ : ಸಿಕ್ಕು ಬಿದ್ದುದಾದರೆ ನಿನ್ನ ಗತಿಯೇನಾದೀತೆಂಬುದು ತಿಳಿದಿರಲಿಲ್ಲವೆ?

ವ್ಯಕ್ತಿ : ತಿಳಿಯದುಂಟೆ ತಾಯಿ. ಆದರೂ ದುಡ್ಡಿನ ವ್ಯಾಮೋಹ ನನ್ನನ್ನು ಇದನ್ನೊಪ್ಪಿಕೊಳ್ಳುವಂತೆ ಮಾಡಿತು.

ಚನ್ನಮ್ಮ : ಇರಲಿ ಹೆಚ್ಚಿನ ವಿಚಾರಣೆ ನಾಳೆಗೆ ಇವನನ್ನು ಎಳೆದುಕೊಂಡು ಹೋಗಿ ಬಂಧೀಖಾನೆಯಲ್ಲಿಡಿ(ಸಿಪಾಯಿಗಳು ಅವನನು ಎಳೆದೊಯ್ಯುವರು)

ಮಲ್ಲಿ : ತಾಯಿಯವರ ಬೆನ್ನಹಿಂದೆಯೇ ಶತ್ರು ಅಡಗಿಕೊಂಡಿದ್ದಾನೆ.

--- ತೆರೆ--

ರಸ್ತೆ ಪ್ರವೇಶ 25

(ಇಬ್ಬರು ಶಕುನ ಹೇಳುವವರು ತಮ್ಮ ಸಾಮರ್ಥ್ಯವನ್ನು ಹೇಳಿಕೊಳ್ಳುತ್ತಿರುವರು) ಶಕುನದವರು :

ಶಕುನವ ಹೇಳುವ ಅಣ್ಣಗಳು ನಾವ್
ಶಕುನವ ಹೇಳುವ ಅಣ್ಣಗಳು ||
ದೇಶ ದೇಶವ ತಿರುಗಿದೇವಣ್ಣ
ಶಕುನವ ಹೇಳುತ ಬಂಧಿಹೆವಣ್ಣ ||
ಸಟೆಯನಾಡವ ಜನ ನಾವಲ್ಲ
ಕೊಟ್ಟುದ ಕೊಂಡು ಹೇಳುವೆವಲ್ಲ
ಕೊಡದಿರೆ ಆಶೆಯ ಪಡುವವರಲ್ಲ
ಕಾಡುತ ಕಾಸನು ಕೇಳುವುದಿಲ್ಲ ||

(ಪ್ರಧಾನಿ ಇಬ್ಬರು ಸಿಪಾಯಿಗಳೊಡನೆ ಪ್ರವೇಶಿಸಿ ಅವರನ್ನು ನೋಡಿ ಸನಿಹದಲ್ಲಿ ಬಂದು ನಿಲ್ಲವನು

ಪ್ರಧಾನಿ : ಯಾರಯ್ಯ ನೀವು?

ಒಬ್ಬ : ಶಕುನದ ಅಣ್ಣಗಳು ಬುದ್ಧಿ

ಪ್ರಧಾನಿ : ಅವನು ?

ಒಬ್ಬ : ನನ್ನಣ್ಣ ಬುದ್ಧಿ

ಪ್ರಧಾನಿ : ಸರಿ ನೀನು ಶಕುನಿ. ಅವನು ನಿನ್ನಣ್ಣ , ಇಬ್ಬರೂ ಸೇರಿ ಶಕುನಿ ಅಣ್ಣಗಳು

ಇನ್ನೊಬ್ಬ : ಐ! ಇದೇನ್ಬುದ್ಧಿ ಹಿಂಗೆ ಹೇಳ್ತೀರಿ ? ಶಕುನಿಯೂ, ಅವನ ಅಣ್ಣಗಳೂ ಅವಾಗಲೇ ಸತ್ತು ಓಗಿಲ್ವ!

ಪ್ರಧಾನಿ : ನೀವಿನ್ನು ಇದ್ದೀರಲ್ಲ.

ಒಬ್ಬ : ಶಕುನಿಗಳು ಅಂತಿರಲ್ಲ ನಮ್ಮನ್ನ, ನಾವೇನಂತ ಕೆಟ್ಟ ಕೆಲ್ಸ ಮಾಡಿದ್ವಿ ಬುದ್ಧಿ ?

ಪ್ರಧಾನಿ : ಹಾಗಲ್ಲವೊ ಹುಚ್ಚೆ, ಶಕುನ ಹೇಳು ನೀವು ಶಕುನಿಗಳು ಅಂದೆ, ನೀವು ಬಹಳ ಮುಂದೆ ಹೊಗಿಬಿಟ್ಟರಿ ನೀವು ನಿಜವಾಗಿಯೂ ಶಕುನ ಹೇಳುವವರು ಹೌದೇನ್ರೋ?

ಇನ್ನೊಬ್ಬ : ಅನುಮಾನವಾ ಬುದ್ಧಿ? ಹೊಟ್ಟೆಪಾಡಿಗೊಂದು ಬಿಟ್ಟೆ ಬೇರೇನಾ ಅಂದೆವ್ವ.

ಪ್ರಧಾನಿ : ಅಂದರೆ ಈಗ ನೀವು ಹಾಕಿರುವುದು ವೇಷ!

ಒಬ್ಬ : ಐ! ಅಂಗಲ್ಲ ಬುದ್ಧಿ ಹೊಟ್ಟೆಪಾಡಿಗಾಗಿ ಬೇರಾರ ಮನೆ ಕಾಯಬೇಕೆ ಬೇಕಲ್ಲವ್ವ?

ಪ್ರಧಾನಿ : ಅದಕ್ಕೆ ಈ ಬಟ್ಟೆ ಹುಂ. ನೀವು ಯಾವ ಶಾಸ್ತ್ರದ ಆಧಾರದ ಮೇಲೆ ಭವಿಷ್ಯ ಹೇಳುತೀರಯ್ಯ?

(ಇಬ್ಬರು ತಮ್ಮ ಸಾಮರ್ಥ್ಯ ಸಾರುವ ಹಾಡು ಹೇಳುವರು)

ಹಕ್ಕಿಯ ಶಕುನ, ಹಲ್ಲಿಯ ಶಕುನ

ವಾಯಸ ಶಕುನವ ನೋಡಲಾಗಿ ವಿಸ್ತಾರಗ್ಗ ಧ್ವನಿ ಶಕುನಗಳಿಂದ

ಭೂತ ಭವಿಷ್ಯವ ಹೇಳುವೆವಲ್ಲ ॥

ಕರ್ಣ ಪಿಶಾಚಿಯ ಒಲುಮೆಯು ಉಂಟು

ಸ್ಮಶಾನ ಕಾಳಿಯ ವರವೂ ಉಂಟು

ಬೇತಾಳನು ನಮಗೆ ಒಲಿದಿಹುದುಂಟು

ಭೂತಸಾಧನ ಒಲಿದ್ದುಂಟು ॥

ಜ್ಯೋತಿಷ್ಯದಲಿ ಪರಿಣತಿಯುಂಟು

ರಮಲ ಶಾಸ್ತ್ರದ ಪರಿಚಯ ಉಂಟು

ಲಕ್ಷಣಶಾಸ್ತ್ರದ ಪಾಂಡಿತ್ಯ ಉಂಟು

ನೋಟ ನಿಮಿತ್ತವ ನೋಡುವುದುಂಟು ॥

ಮಾಟಮಂತ್ರವ ಮಾಡಲು ಬಲ್ಲೆ

ಭೂತಪಿಶಾಚವ ಬಿಡಿಸಲು ಬಲ್ಲೆ

ಸ್ತಂಭನ ವಿದ್ಯೆಯ ರಹಸ್ಯ ಬಲ್ಲೆ

ಮೋಹನ ಮಂತ್ರದ ಮೂಲವ ಬಲ್ಲೆ ॥

ಒಬ್ಬ : ಇಷ್ಟು ಶಾಸ್ತ್ರಗಳ, ವೇದನೆಗಳ ಬಲ ಬಲ್ಲಿ ಬುದ್ಧಿ

ಪ್ರಧಾನಿ : ನೀವು ಇದನ್ನೆಲ್ಲಾ ಎಲ್ಲಿ ಕಲಿತಿರಿ?

ಇನ್ನೊಬ್ಬ : ಇಮಾಲಯ ಪರ್ವತದಾಗೆ

ಒಬ್ಬ : ಒಂದಲ್ಲ ಎರಡಲ್ಲ, ಅಷ್ಟೊಂದು ವರ್ಷ ಕಷ್ಟಪಟ್ಟು ಪಡಕೊಂಡಿದೀವಿ ಬುದ್ಧಿ

ಪ್ರಧಾನಿ : ಪರ್ವತದಲ್ಲಿ?

ಇನ್ನೊಬ್ಬ : ಹುಂ ಅಲ್ಲೊಬ್ಬ ಮುದ್ಕ ಬಾಬಾಜಿ ಇದ್ರು. ಅಂವ್ರ ಬಳಿ ಕಲಿತ್ವಿ. ಅವ್ರಾಕೆ ತಪಸು ಮಾಡಿ ಸಿದ್ಧಿ ಪಡಕೊಂಡ್ವಿ

ಪ್ರಧಾನಿ : ಹುಂ..ಹಾಗಾದರೆ ನೀವು ದೊಡ್ಡ ವಿದ್ಯೆ ಪಡೆದಿದ್ದೀರಿ, ಹಾಗಾದರೆ ನನ್ನ ಭವಿಷ್ಯ ಹೇಳುತೀರೇನು

ಒಬ್ಬ : ನಿಮ್ಮೊಬ್ಬರದೆ ಯಾಕೆ ಬುದ್ಧಿ. ಯಾರದ್ದಾದ್ರು ಕೇಳ್ತಿದ್ರೆ ಒಬ್ಬರ ಮುಖ ನೋಡಿದ್ರೆ ಸಾಕು. ಮನೆ ಮಂದಿ ಇತಿಯಾಸೆಲ್ಲ ಹೇಳಿಬಿಡ್ತೀವಿ.

ಇನ್ನೊಬ್ಬ : ಹಿಂದಾದ್ದು, ಮುಂದಾಗೋದು... ಈಗಾಗ್ತಿರೋದು...

ಒಬ್ಬ : ಹಿಂದಿನ ಜನ್ಮದ್ದು, ಮುಂದಿನ ಜನ್ಮದ್ದು ಎಲ್ಲ ಹೇಳಿಬಿಡ್ತೀವಿ.

ಪ್ರಧಾನಿ : ಭಲೇ, ನೀವು ಬಲೇ ಜಾಣರು.

ಒಬ್ಬ : ಈಗ ಯಾವ ಶಾಸ್ತ್ರದ ಸಹಾಯದಿಂದ ನಿಮ್ಮ ಭವಿಷ್ಯ ಹೇಳೋಣ ಬುದ್ಧಿ?

ಇನ್ನೊಬ್ಬ : ಲಕ್ಷಣ ನೋಡಿ ಹೇಳಿ ಬಿಡೋಣಂತೆ.

ಒಬ್ಬ : ಹುಂ. ಹಂಗೆ ಆಗಲಿ.

ಇನ್ನೊಬ್ಬ : ಮೊಗದಲಿ ಕಳೆಯು ತುಂಬಿಕೊಂಡೈತೆ ! ಕಣ್ಣಲಿ ಮಿಂಚಿನ ಹೊಳಪೈತೆ !

ಕೈಯಲಿ ನಾಡಿನ ಅಧಿಕಾರವನು । ಹಿಡಿದಿಹ ಬಗೆಯು ಕಾಣ್ತೈತಿ

ಪುಷ್ಟಬಾಹುಗಳು ಕಷ್ಟಕಾರ್ಯಗಳಗಳ । ಸಾಧಿಸುವ ಛಲ ತೋರ್‍ತೈತಿ
ಕೊರೆಯುವ ದಿಟ್ಟಿಯು ಪರರೇಂಗಿತವ । ಅರಿಯುವುದೆಂಬುದು ದಿಟವೈತಿ
ದಟ್ಟಡಿ ಚಲನೆ ದಿಟ್ಟತನವನು । ಸರ್ವರಿಗೂ ಶ್ರುತಪಡಿಸ್ತೈತಿ ॥

ಒಬ್ಬ : ನೀವು ಯಾವುದೋ ದೊಡ್ಡ ಅಧಿಕಾರಿಗಳ ಬುದ್ಧಿ.

ಪ್ರಧಾನಿ : ನೀವು ಒಳ್ಳೆ ಬುದ್ಧಿವಂತರು ಕಣ್ರೊ.

ಇನ್ನೊಬ್ಬ : ದೊಡ್ಡೋರ ಆಸೀರ್ವಾದ.

ಪ್ರಧಾನಿ : ಈಗ ನಾನು ಎಲ್ಲಿಗೆ ಹೊರಟಿರುವೆನು ಹೇಳಿ!

ಒಬ್ಬ : ಬರುವ ತೆರನಲಿ ಪರರನರಿಯುವ । ಭಾವವು ನಮಗೆ ತೋರ್‍ತೈತಿ
ಕಿರಿಯರ ಕೆಲಸದಿ ಕೊರತೆಯ ಕಾಣುತೆ । ಸ್ವಾರ್ಥಿಯು ಸ್ವತಹ ಹೊರಟೈತಿ
ಗುಟ್ಟಿನ ಕೆಲಸವ ಗಟ್ಟಿಸಲಾಗಿ । ಹೊರಬಂದಿಹ ಬಗೆ ಕಾಣ್ತೈತಿ ॥

ಇನ್ನೊಬ್ಬ : ಅಧಿಕಾರಿಗಳ ಕೆಲಸದಿಂದ ಸಂತುಷ್ಟರಾಗದೆ ಒಂದು ದೊಟ್ಟ ಕೆಲಸಕ್ಕಾಗಿ ಸ್ವತಹ ಪಾದ ಬೆಳೆಸಿದೀರಿ ಬುದ್ಧಿ.

ಪ್ರಧಾನಿ : ಸರಿ ಸರಿ ಅರ್ಥವಾಯಿತು (ಸೈನಿಕರಿಗೆ ಸನ್ನೆ ಮಾಡುವನು, ಸೈನಿಕರು ಅವರಿಬ್ಬರನ್ನು ಹಿಡಿದುಕೊಳ್ಳುವರು.) ಇಬ್ಬರೂ ಗಾಬರಿಗೊಳ್ಳುವರು)

ಒಬ್ಬ : ಐ...ನಮ್ಮನ್ನ ಯಾಕ ಹಿಡಕೊಂಡಿರಿ ?

ಸೈನಿಕ : (ಪ್ರಧಾನಿಯನ್ನು ನೋಡಿ) ಅವರನ್ನು ಕೇಳು

ಇನ್ನೊಬ್ಬ : ಬುದ್ಧಿ, ಅವರು ಯಾಕೆ ನಮ್ಮನ್ನು ಹಿಡಕೊಂಡರು ?

ಪ್ರಧಾನಿ : ನನಗೆ ಗೊತ್ತಿಲ್ಲ. ಹಿಡಿದುಕೊಂಡವನ್ನೇ ಕೇಳು

ಒಬ್ಬ : ಇದೊಳ್ಳೆ ಮಲಾಮತಿ ಆತಲ್ಲ, ಅವರನ್ಕೇಳಿದ್ರೆ ಇವರನ್ಕೇಳಿ... ಇವರನ್ನ ಕೇಳಿದರೆ ಅವರನ್ನ ಕೇಳು. ಯಾರು ಯಾರಮ್ಮ ಹೇಳೋದು, ಕೇಳೋದು ಇಲ್ಲಾಂತ ಕಾಣ್ತೆ ಈ ರಾಜ್ಯದಲ್ಲಿ

ಇನ್ನೊಬ್ಬ : ಏನನ್ನ ಬುದ್ಧಿ, ಶಕುನವ? (ಪ್ರಧಾನಿ ಹೌದೆಂದು ತಲೆಯಾಡಿಸುವನು)

ಒಬ್ಬ : ಅದಕ್ಕೆ ಇಂಗೆ ಹಿಡಕೊಂಬೋದು ಯಾಕ್ಬುದ್ಧಿ ?

ಪ್ರಧಾನಿ : ಈಗ ಬಿಟ್ಟರೆ ಮತ್ತು ಸಿಕ್ಕುವಿರೋ ಇಲ್ಲವೋ ಈಗ ಹೇಳಿ. ನೀವು ನಿಜವಾಗಿಯೂ ಶಕುನ ಹೇಳುವವರು ಹೌದೇನ್ರಯ್ಯ ?

ಇನ್ನೊಬ್ಬ : ಐ.. ಇಂಗೆ ಯಾಕೆ ಮಾಡ್ತೀರಿ ಬುದ್ಧಿ ? ನೋಡಿದರೆ ತಿಳಿಯಾಕಿಲ್ವ ?

ಪ್ರಧಾನಿ : ತಿಳಿದೆ ಹಿಡಿದಿರುವುದು ಅನ್ನಿ.

ಒಬ್ಬ : ತಿಳಿದು ತಿಳಿದೂ ಹಿಡಿದಿದ್ದು ಯಾಕ್ರ ?

ಪ್ರಧಾನಿ : ಒಳ್ಳೆ ಶಕುನ ಹೇಳವವರು ಯಾರಾದರೂ ಇದ್ದರೆ ಹಿಡಿದುಕೊಂಡು ಬರುವಂತೆ ನಮ್ಮ ಮಹಾರಾಣಿಯವರು ಹೇಳಿದ್ದರು.

ಇನ್ನೊಬ್ಬ : ನೀವು ಅರಮನೆ ಅಧಿಕಾರಿಗಳ ಬುದ್ಧಿ ! ನಮಗ್ಗೊತ್ತು ಹೇಳ್ಳಿಲ್ಲವ್ರ ?

ಪ್ರಧಾನಿ : ಹೌದು ಸರಿಯಾಗಿ ಹೇಳುವಿರೊ ಇಲ್ಲವೋ ಎಂದು ತಿಳಿದುಕೊಳ್ಳುವುದಕ್ಕಾಗಿ ಮೊದಲು ನನ್ನ ಭವಿಷ್ಯ ಕೇಳಿದೆ. ಸರಿಯಾಗಿ ಹೇಳಿದಿರಿ. ಸಿಕ್ಕಿಕೊಂಡಿರಿ.

ಒಬ್ಬ : ಇದೇನ್ಬುದ್ಧಿ ಇಂಗೇಳ್ತೀರಿ. ನಿಜ ಹೇಳಿದ್ರೆ ಹಿಡ್ಕೊಂಬೋದ?

ಪ್ರಧಾನಿ : ಸರಿಯಾಗಿ ಶಕುನ ಹೇಳುವವರು ಯಾರಾದರೂ ಸಿಕ್ಕಾರೆಯೇ ಎಂದು ಬಹಳ ದಿವಸಗಳಿಂದ ಹುಡುಕುತ್ತಿದ್ದೆ ಯಾರೂ ಸಿಕ್ಕಬಾರದೆ !

ಒಬ್ಬ : ಯಾರೂ ಸಿಕ್ಲಿಲ್ಲ ?

ಪ್ರಧಾನಿ : ಈಗ ನೀವು ಸಿಕ್ಕಿದಿರಿ. ಮಹಾರಾಣಿಯವರಿಗೆ ಭವಿಷ್ಯ ಹೇಳಲು ನೀವೆ ತಕ್ಕವರು. ಎಲ್ಲಾದರೂ ಸಂದಿಗೊಂದಿಯಲ್ಲಿ ತಪ್ಪಿಸಿಕೊಂಡೀರಿ ಎಂದು ಹಿಡಿದುಕೊಂಡರು.

ಇನ್ನೊಬ್ಬ : ನಾವು ನಿಮ್ಮ ಹಿಂದೆ ಬರ್ತೀವಿ ನಮ್ಮನ್ನಿಬ್ಬಿಡೊಕೇಳಿ.

ಪ್ರಧಾನಿ : ಅವರು ನಿಮ್ಮನ್ನು ಹಿಡಿದಿರುವುದು ನಮ್ಮ ಭರವಸೆಗಾಗಿ. ನಿವೇನು ಗಾಬರಿಯಾಗಬೇಡಿ.

ಒಬ್ಬ : ಸದ್ದು ಮಾಡದೇ ಬರ್ತೀವಿ ಬುದ್ದಿ. ಆಚೀಚೆ ಅವರಿಬ್ಬರೂ ಯಾಕೆ ಸುಮ್ನೆ.

ಪ್ರಧಾನಿ : ಯಾರಿಂದಲೂ ನಿಮಗೇನೂ ಅಪಾಯವಾಗದ ಹಾಗೆ ಅಷ್ಟೆ. ಬಹಳ ಕೆಟ್ಟ ಜನ. ಅಪಾಯಕಾರಿ ಜನ.

ಇನ್ನೊಬ್ಬ : ಒಳ್ಳೇ ಉಪಾಯ.

ಒಬ್ಬ : ನಮಗೆ ಯಾಕೊ ದಿಗಿಲಾಗ್ತೈತಿ ಬುದ್ದಿ

ಪ್ರಧಾನಿ : ದ್ರೋಹವಿಲ್ಲದ ಮೇಲೆ ದಿಗಿಲು ಯಾಕಯ್ಯ ?

ಇನ್ನೊಬ್ಬ : ಪರದೇಶಿಗಳನ್ನು ಪೀಡಿಸ್ಬೇಡಿ ಬುದ್ದಿ. ನಿಮ್ಮ ಪಾದಕ್ಕೆ ಬೀಳ್ತೀವಿ. ಬಿಟ್ಬಿಡಿ.

(ಪಾಧಾನಿ ಶಕುನದವರಲ್ಲಿ ಒಬ್ಬನ ಗದ್ದಕ್ಕೆ ಕೈ ಹಾಕುವನು. ಅವನು ಗಾಬರಿಯಿಂದ)

: ಐ..... ಏನು ಬುದ್ಧಿ..... ಏನು ಮಾಡ್ತಾ ಇದೀರಿ? (ಪ್ರಧಾನಿಯ ಕೈಗೆ ಗಡ್ಡ ಕಿತ್ತು ಬರುವುದು)

ಪ್ರಧಾನಿ : ಸರಿಯಾದುದನೆ ಮಾಡುತ್ತಿದ್ದೇನೆ ಲಕ್ಷ್ಮಯ್ಯ, ವೇಷ ಮರೆಸಿಕೊಂಡ ಮಾತ್ರಕ್ಕೆ ನಿಮ್ಮನ್ನು ಗುರುತಿಸಲಾರೆನೆಂದುಕೊಂಡಿರೇನು ? ಮುಖದ ರೂಪು ಬದಲಾಗಿರಬಹುದು. ಆದರೆ ಮೈಮಾಟ, ಕಂಠಸ್ವರ ಎಷ್ಟೋ ಕಾಲದಿಂದ ಪರಿಚಿತವಾದುದಲ್ಲವೆ? ಈಗ ಭವಿಷ್ಯ ನುಡಿಯುವಾಗ ನೀವೇ ಹೇಳಿದಿರಲ್ಲ, "ಕೊರೆಯುವ ದಿಟ್ಟಿಯು. ಪರರಿಂಗಿತವ" ಅಂತ. ಹುಂ ಭಟರೆ, ಏನು ನೋಡುತ್ತಿರುವಿರಿ? ಎಳೆದುಕೊಂಡು ನಡೆಯಿರಿ ಇವರನ್ನು (ಭಟರು ಶಕುನದವರಿಬ್ಬರನ್ನು ಎಳೆದುಕೊಂಡು ಹೋಗುವರು. ಪ್ರಧಾನಿ ಓರ್ವ ಭಟನೊಂದಿಗೆ ಅವರ ವಿರುದ್ಧ ದಿಕ್ಕಿಗೆ ತೆರಳುವನು.)

--ತೆರೆ --

ಪ್ರವೇಶ 26

ಹಿಂಬದಿಯಲ್ಲಿ ಕೋಟೆಯ ಗೋಡೆ ಮತ್ತು ಕೊತ್ತಳಗಳು ಕಂಡುಬರುತ್ತಿವೆ. ಪ್ರಧಾನಿ ಮತ್ತು ಚನ್ನಮ್ಮ ರಾಣಿ ಮುಂದುಗಡೆ ನಡೆದುಬರುತ್ತಿದ್ದಾರೆ. ಜೊತೆಗೆ ಒಬ್ಬ ಬೆಂಗಾವಲ ಭಟ ಅವರನ್ನು ಹಿಂಬಾಲಿಸಿದ್ದಾನೆ)

ಚನ್ನಮ್ಮ : ಪ್ರಧಾನಿಗಳೆ, ರಾಜಾರಾಮರಾಯರು ಸುರಕ್ಷಿತ ಸ್ಥಳ ತಲುಪಿರಬಹುದಲ್ಲವೆ? ಮಾರ್ಗಮಧ್ಯದಲ್ಲಿ ಏನಾದರೂ ಮೊಘಲ್ ಸುಲ್ತಾನನ ಬೇಟೆಯ ಮೃಗಗಳಿಗೆ ತುತ್ತಾಗಲಾರರಲ್ಲ!

ಪ್ರಧಾನಿ : ಹಾಗಾಗದು ಮಹಾರಾಣಿ . ರಾಜಾರಾಮರು ಬಹಳ ಚಾಣಾಕ್ಷರಿದ್ದಾರೆ. ಅವರು ಸುಲಭದಲ್ಲಿ ದಿಲ್ಲಿಯ ಸುಲ್ತಾನರ ಬಲೆಗೆ ಬೀಳುವುದಿಲ್ಲ.

ಚನ್ನಮ್ಮ : ಏನೇ ಆದರೂ ನಾವು ಕೂಡ ಜಾಗ್ರತರಾಗಿರಬೇಕು. (ಸರದಾರನೊಬ್ಬ ಪ್ರವೇಶಿಸಿ ಮಹಾರಾಣಿಗೆ ನಮಸ್ಕರಿಸಿ ನಿಲ್ಲುವನು) ಏನು ಸಮಾಚಾರ?

ಪ್ರಧಾನಿ : ನೀನು ರಾಜಾರಾಮರ ಬೆಂಗಾವಲ ಪಡೆಯೊಂದಿಗೆ ಹೋಗಿದ್ದೆಯಲ್ಲವೆ?

ಸರದಾರ : ಹೌದು ಬುದ್ಧಿ.

ಚನ್ನಮ್ಮ : ಅವರನ್ನು ಎಲ್ಲಿಯವರೆಗೆ ಕಳಿಸಿ ಬಂದಿರಿ?

ಸರದಾರ : " ಜಿಂಜಿ" ಎಂಬ ಊರನ್ನು ಸೇರತ್ತಲೂ ನಮಗೆ ಹಿಂತಿರುಗಲು ಹೇಳಿದರು. ನಾವು

		ಹಿಂದಿರುಗಿ ಬಂದೆವು.
ಚನ್ನಮ್ಮ	:	ಸಂತೋಷ. ನೀನಿನ್ನು ಹೋಗಬಹುದು. (ಸರದಾರ ನಮಸ್ಕರಿಸಿ ನಿರ್ಗಮಿಸುವನು) ನಾವು ಹೊತ್ತ ಹೊಣೆಯನ್ನು ನೀಗಿಕೊಂಡೆವು. ಪ್ರಧಾನಿಗಳೇ ಕುತ್ಸಿತ ಶಿವಪ್ಪನಾಯಕರ ಸಮಾಚಾರವೇನೆ?
ಪ್ರಧಾನಿ	:	ಅವರ ವಿಚಾರದಲ್ಲಿ ವಿಶೇಷವಾದ ಸಂಗತಿನೇನು ತಿಳಿದುಬಂದಿಲ್ಲ ತಾಯಿ.
ಮಲ್ಲಿ	:	(ಪ್ರವೇಶಿಸಿ) ಮಹಾರಾಣಿಯವರಲ್ಲಿ ಅರಿಕೆ. ಬೇಹಿನವನಿರಬೇಕು. ತಮ್ಮ ದರ್ಶನ ಕೋರಿ ಹೊರಗಡೆ ನಿಂತಿದ್ದಾನೆ.
ಪ್ರಧಾನಿ	:	ಕಳಿಸಿಕೊಡು. (ಮಲ್ಲಿಯ ನಿರ್ಗಮನ. ಬೇಹಿನವರ ಆಗಮನ. ರಾಣಿಗೆ ನಮಸ್ಕರಿಸಿ ನಿಲ್ಲುವನು) ಬೇಹಿನವನೇನು?
ಬೇಹಿನವ	:	ಹೌದು ಬುದ್ಧಿ.
ಚನ್ನಮ್ಮ	:	ಏನು ಸಮಾಚಾರ? ಮಹತ್ವದ ವಿಚಾರವೇನೋ ಇದ್ದಂತಿದೆ.
ಬೇಹಿನವ	:	ಮಹಾರಾಣಿಯವರು ಆಲಿಸಬೇಕು. ದಿಲ್ಲಿ ಬಾದಷಹ ಔರಂಗಜೇಬರು ತಮ್ಮ ಮಗ ಅಜಮತಾರನ ನಾಯಕತ್ವದಲ್ಲಿ ನಮ್ಮ ರಾಜ್ಯವನ್ನು ಹಣ್ಣಿಸಲು ಸೈನ್ಯವನ್ನು ಕಳುಹಿಸಿದ್ದಾರಂತೆ. ನಮ್ಮ ರಾಜ್ಯವನ್ನು ಗೆದ್ದು. ನಮ್ಮ ಆಶ್ರಯದಲ್ಲಿರುವ ರಾಜಾರಾಮರನ್ನು ಸೆರೆಹಿಡಿದು ತರುವಂತೆ ಆಜ್ಞಾಪಿಸಿದ್ದಾರಂತೆ ಸೈನ್ಯವು ನಮ್ಮ ನಾಡಿನತ್ತ ಮುಂಬರಿದು ಬರುತ್ತಿದೆ.
ಪ್ರಧಾನಿ	:	ಇನ್ನೇನಾದರೂ ಇದೇಯೇ?
ಬೇಹಿನವ	:	ಇಲ್ಲ ದಣಿ (ಪ್ರಧಾನಿ ಬೇಹಿನವನಿಗೆ ಹೋಗುವಂತೆ ಕೈಸನ್ನೆ ಮಾಡುವನು. ಬೇಹುಗಾ ನಮಸ್ಕರಿಸಿ ನಿರ್ಗಮಿಸುವನು)
ಚನ್ನಮ್ಮ	:	ನಾವು ರಾಜಾರಾಮರ ವಿಚಾರದಲ್ಲಿ ಮುಂಜಾಗ್ರತೆ ವಹಿಸಿದುದು ಸೂಕ್ತವಾಯಿತು. ನಮ್ಮ ಮಾತನ್ನುಳಿಸಿಕೊಂಡ ಗೌರವ ನಮ್ಮದಾಯಿತಲ್ಲವೆ ಪ್ರಧಾನಿಗಳೇ.
ಪ್ರಧಾನಿ	:	ನಿಜ ತಾಯಿ...
ಕಾ.ತಿಮ್ಮಣ್ಣ	:	ರಾಜಾರಾಮರು ನಮ್ಮಲ್ಲೇ ನೆಲೆಸಿರುವರೆಂದು ದಿಲ್ಲಿಯವರು ನಂಬಿರುವಂತಿದೆ.
ಪ್ರಧಾನಿ	:	ಅದು ಸಹಜ ತಾನೆ!
ಚನ್ನಮ್ಮ	:	ಪ್ರಧಾನಿಗಳೇ, ನಮ್ಮ ಸೈನ್ಯವನ್ನು ಯುದ್ಧಕ್ಕೆ ಅಣಿಗೊಳಿಸಿರಿ. ನಾವಿನ್ನು ಹಿಂಜರಿಯಬೇಕಾಗಿಲ್ಲ. ನೀವೇ ಸಮಸ್ತ ಸೇನೆಯ ಮಹಾದಂಡನಾಯಕರಾಗಿ, ಈ ಸಮರದಲ್ಲಿ ಜಯವನ್ನು ದೊರಕಿಸಿಕೊಡಬೇಕು. ಇತಿಹಾಸದಲ್ಲಿ ಸ್ಥಿರವಾರ ಸ್ಥಾನವನ್ನು ಇಕ್ಕೇರಿಗೆ ಗಳಿಸಿ, ಕೊಡಿಸಿ ಕೊಡಬೇಕು.
ಪ್ರಧಾನಿ	:	ಈ ಮುದುಕನಿಂದ ಇಂತಹ ಗುರುತರ ಹೊಣೆ ನಿಭಾಯಿಸುವುದು ಸಾಧ್ಯವೇ ಮಹಾರಾಣಿ? ತಿಮ್ಮಣ್ಣನವರು, ಕೃಷ್ಣಯ್ಯನವರು, ಮೈಸೂರಿನ ಹುಲಿಯನ್ನು ಹಣಿದ ಭದ್ರಪ್ಪ, ಕೋಳಿವಾಡದ ಬೊಮ್ಮಯ್ಯ ಮೊದಲಾದ ಘಟಾನುಘಟಿಗಳೂ ಇರುವಾಗ.....
ಚನ್ನಮ್ಮ	:	(ನಸುನಕ್ಕು) ದಿಲ್ಲಿ ಬಾದಷಹರೊಡನೆ ಹೋರಾಡಲು ನೀವೇ ಸಾಕೆಂದು ಹಾಗೆಯೇ ರಾಜ್ಯದ ಎಲ್ಲಾ ದೇವಾಲಯಗಳಲ್ಲೂ ಸಮರದ ಗೆಲುವಿಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ ನಡೆಸುವಂತೆ ನಮ್ಮಾಜ್ಞೆಯನ್ನು ತಿಳಿಸಿರಿ. ಅದಕ್ಕೆ ತಗುಲುವ ಎಚ್ಚವನ್ನು ಬೊಕ್ಕಸದಿಂದ ಸಂದಾಯವಾಗುವಂತೆ ಏರ್ಪಡಿಸಿರಿ (ವಿಳಂಬಸಲ್ಲದು ನಡೆಯಿರಿ.) ನಿರ್ಗಮಿಸುವರ

--ತೆರೆ--

ಪ್ರವೇಶ 27

(ದಿಲ್ಲಿಯ ಬಾದಷಹ ಔರಂಗಜೇಬನ ಸೈನ್ಯ ಇಕ್ಕೇರಿ ರಾಜ್ಯವನ್ನು ಮುತ್ತುವ ಮಾರ್ಗಮಧ್ಯದಲ್ಲಿ ಬೀಡು ಬಿಟ್ಟಿದೆ. ಮುಸ್ಸಂಜೆಯ ಸಮಯ. ಸೇನೆಯ ನಾಯಕತ್ವ ವಹಿಸಿದ್ದ ಬಾದಷಹರ ಪುತ್ರ ಅಜಮತಾರ ಉನ್ನತ ಆಸನದಲ್ಲಿ ಕುಳಿತಿದ್ದಾನೆ. ಒಂದೆರಡು ಜನ ಸೇವಕರು ಅಲ್ಲಿದ್ದಾರೆ. ಅಜಮತಾರ ಗುಡುಗುಡಿ ಎಳೆಯುತ್ತಿದ್ದಾನೆ. ಸೇವಕನೊಬ್ಬ ಪ್ರವೇಶಿಸಿ)

ಸೇವಕ : ಖಾವಂದರಿಗೆ ಸಲಾಂ.... ನಾಲ್ವರು ಮರಾಠಾ ಸರದಾರರು ಆಗಮಿಸಿದ್ದಾರೆ. ತಮ್ಮೊಡನೆ ಮಹತ್ವದ ವಿಚಾರವನ್ನು ಅರುಹುವುದಿದೆಯಂತೆ..

ಅಜಂತಾರ : ಏನು ? ಮರಾಠಾ ಸರದಾರರೆ, ನನ್ನೊಡನೆ ಮಾತನಾಡುವುದೆ? ಏನು ವಿಷಯವೆಂದು ಕೇಳಲಿಲ್ಲವೆ?

ಸೇವಕ : ಕೇಳಿದೆ, ಆದರೆ ಅವರು ಅದನ್ನು ತಮ್ಮೊಡನೆ ಮಾತ್ರ ಹೇಳಬಯಸುವುದಾಗಿ ತಿಳಿಸಿದರು.

ಅಜಂತಾರ : ಜಾವ್. ಅವರನ್ನು ಕಳಿಸಿಕೊಡು. (ಸೇವಕ ಹೋಗುತ್ತಿರುವಾಗ) ಹಾಂ ಠೆಹರೋ.. ಅವರಲ್ಲಿ ಅಪಾಯಕಾರಿ ವಸ್ತುಗಳು ಏನಾದರೂ ಇರಬಹುದೆ ಎಂದು ಝಡ್ತಿ ಮಾಡಿ ಒಳಗೆ ಬಿಡು. (ಸೇವಕನ ನಿರ್ಗಮನ) ಕೌನ್ ಹೋಗಾ? ಏನು ಸುದ್ದಿ ಇರಬಹುದು? (ನಾಲ್ವರು ಮರಾಠಾ ಸರದಾರರು ಬಂದು ನಮಸ್ಕರಿಸಿ ನಿಲ್ಲುವರು)

ಅಜಂತಾರ : ಕೌನ್ ಹೈ ಆಪ್. ಎಲ್ಲಿಂದ ಬಂದಿರುವಿರಿ? ಕ್ಯಾ ಖಬರ್ ನನ್ನನ್ನೇ ಖುದ್ದು ಕಾಣಬೇಕೆಂದಿರಂತೆ..

ಒಬ್ಬ ಸರದಾರ : ಹೌದು ಖಾವಂದರೆ (ಗಾಬರಿಗೊಂಡವನಂತೆ) ನಾವು ಇಕ್ಕೇರಿ ರಾಜ್ಯದಿಂದ ಬಂದಿದ್ದೇವೆ.

ಅಜಂತಾರ : (ಆತುರದಿಂದ) ಕ್ಯಾ... ಇಕ್ಕೇರಿಸೆ? ಏನು, ಏನು ಸುದ್ದಿ! ಬೋಲೋ....

ಮ.ಸರದಾರ : ಪ್ರಭು ಈಗ ನಿಮ್ಮ ಸಹಾಯ ನಮಗೆ ಬೇಕು. ನಮ್ಮ ಸೇಡನ್ನು ತೀರಿಸಿಕೊಳ್ಳಲು ನಿಮ್ಮ ನೆರವು ಬೇಕು.

ಅಜಂತಾರ : ಬೋಲೋ, ಬೋಲೋ ನಿಮ್ಮ ಇರಾದ ಏನು? ನಿಮ್ಮ ಸೇಡು ಏನು? ಯಾರ ಮೇಲೆ? ಆಪ್ ಲೋಗ್ ಕೌನ್.. ಸಾಫ್ ಸಾಫ್. ಬೋಲಿಯೆ.

ಮ.ಸರದಾರ : ನಾವು ಮಹಾರಾಷ್ಟ್ರದ ರಾಜರಾದ ರಾಜಾರಾಮರಾಯರ ಅನುಯಾಯಿಗಳು. ನಿಮ್ಮ ತಂದೆಯವರು ಅವರನ್ನು ಸೆರೆ ಹಿಡಿಯಬಯಸಿದಾಗ ಅವರು ತಪ್ಪಿಸಿಕೊಂಡು ಊರೂರು ಅಲೆಯತೊಡಗಿದರು. ಅವರನ್ನು ನಾವೂ ಸಹ ಅನುಸರಿಸಿದೆವು.

ಅಜಂತಾರ : ಅಚ್ಛಾ... ಮುಂದೆ....

ಮ.ಸರದಾರ : ಹೀಗೆ ನಿಮ್ಮವರ ಕಣ್ಣು ತಪ್ಪಿಸಿ ತಿರುಗುತ್ತಾ ನಮ್ಮ ದೊರೆ ದಕ್ಷಿಣ ರಾಜ್ಯಕ್ಕೆ ಬಂದರು ಅಲ್ಲಿ ಯಾವ ರಾಜ್ಯದಲ್ಲೂ ಅವರಿಗೆ ರಕ್ಷಣೆ ದೊರೆಯದಾಗಲು ಕೊನೆಯದಾಗಿ ಇಕ್ಕೇರಿ ರಾಜ್ಯಕ್ಕೆ ಬಂದ, ಮಹಾರಾಣಿ ಚನ್ನಮ್ಮಾಜಿಯವರಲ್ಲಿ ಆಶ್ರಯ ಬೇಡಿದರು. ಅವರು ಆಶ್ರಯವನ್ನೇನೂ ನೀಡಿದರು. ಆದರೆ ಕೊನೆಗೆ ಸಂಭವಿಸಿದುದು ಮಾತ್ರ ದುರಂತ....

ಅಜಂತಾರ : ಏನು? ಏನು?

ಮ.ಸರದಾರ : ನಿಮಗೆ ರಾಜಾರಾಮರು ಇಕ್ಕೇರಿಯಲ್ಲಿ ಆಶ್ರಯ ಪಡೆದ ಸಂಗತಿ ತಿಳಿದು ಅವರನ್ನು ನಿಮಗೊಪ್ಪಿಸುವಂತೆ ಕೇಳಿ ರಾಯಭಾರಿಗಳನ್ನು ಕಳಿಸಿಕೊಟ್ಟಿರಲ್ಲ.

ಅಜಂತಾರ. : ಠೀಕ್. ಆದರೆ ಅವರು ನಮ್ಮಲ್ಲಿ ಇಲ್ಲ ಎಂದು ಸಮರ್ಥನೆ ಮಾಡಿಕೊಂಡರಲ್ಲ.

ಮ.ಸರದಾರ : ಅದನ್ನು ನೀವು ನಂಬಿದಿರಾ ?

ಅಜಂತಾರ : ನಹೀಂ. ನಹೀಂ... ಅದಕ್ಕೆ ಅಲ್ಲವೆ ನಾವು ಸೈನ್ಯದೊಂದಿಗೆ ಇಕ್ಕೇರಿಯ ಮೇಲೆ ಯುದ್ಧಕ್ಕೆ ಬಂದುದು. ಇಕ್ಕೇರಿಯನ್ನು ಧ್ವಂಸ ಮಾಡಿಯಾದರೂ ರಾಜಾರಾಮರನ್ನು ಹಿಡಿದುಕೊಂಡು ಹೋಗುತ್ತೇವೆ.... ಹೇಳೀ.... ಬೋಲಿಯೇನಾ.... ರಾಜಾರಾಮರು ಎಲ್ಲಿದ್ದಾರೆ. ಅವರ ಆಶ್ರಿತರೆಂದ ಮೇಲೆ ನಿಮಗೆ ಅದು ಗೊತ್ತಿರಬೇಕು. ಹೇಳಿದಿದ್ದರೆ ನಿಮ್ಮಗಳ ತಲೆ ಉಳಿಯದು.

ಮ.ಸರದಾರ : ಅವರಿದ್ದರಲ್ಲವೆ ಹೇಳುವುದು...

ಅಜಂತಾರ : ಅಂದರೇ ?

ಮ.ಸರದಾರ : ನೀವು ದಂಡೆತ್ತಿ ಬರುತ್ತಿರುವ ಸಂಗತಿ ತಿಳಿಯುತ್ತಲೂ ಮಹಾರಾಣಿಯವರು ಅವರನ್ನು ಕೊಲ್ಲಿಸಿಬಿಟ್ಟರು.

ಅಜಂತಾರ : ಕ್ಯಾ..... ಮಾರ್ ಡಾಲ? ಕ್ಯೋಂ..... ಕ್ಯೋಂ.....

ಮ.ಸರದಾರ : ನೀವು ಮಹಾರಾಣಿಯವರೆಡೆಗೆ ರಾಯಭಾರಿಗಳನ್ನು ಕಳಿಸಿಕೊಟ್ಟು ರಾಜಾರಾಮರನ್ನು ನಿವಗೊಪ್ಪಿಸಬೇಕೆಂದು ಕೋರಿದಾಗ, ಅವರು ರಾಜಾರಾಮರು ತಮ್ಮಲ್ಲಿಲ್ಲವೆಂದೇ ವಾದಿಸಿ, ನಂಬಿಸಿದರು.

ಅಜಂತಾರ : ನಾವು ನಂಬಲಿಲ್ಲ .... ಅದಕ್ಕೆಂದೇ ಹಿಡಿದೊಯ್ಯಲು ಸೈನ್ಯ ಸಮೇತ ಬಂದುದು...

ಮ.ಸರದಾರ : ಆಗ ನಂಬಲಿಲ್ಲ ನಿಜ. ಈಗ ಅದು ನಿಜವಾಗಿದೆ... ಅಂದರೆ ಅವರನ್ನು ಕೊಲ್ಲಿಸುವ ಮೂಲಕ ನಿಜವಾಗಿಸಿದ್ದಾರೆ.

ಅಜಂತಾರ : ಇದು ನಿಜವೆ, ನಿಜವಲ್ಲವೆಂದು ತಿಳಿದುಬಂದುದಾದರೆ ನಿಮ್ಮ ತಲೆ ನಿಮ್ಮ ಮುಂಡದ ಮೇಲಿರುವುದಿಲ್ಲ.

ಮ.ಸರದಾರ : ನಿಮ್ಮಾಣೆಗೂ, ನಮ್ಮಾಣೆಗೂ... ಅಲ್ಲಾಕ ಕಸಂ... ನಿಜ. ಅದರಿಂದ ನಮಗೆ ತೀವ್ರ ಆಘಾತವಾಗಿದೆ. ಮೊದಲು ಆಶ್ರಯ ಕೊಟ್ಟು ಕೊನೆಗೆ ಕೊಲ್ಲಿಸುವುದಕ್ಕಿಂತ ಮೊದಲೇ ಆಶ್ರಯ ನಿರಾಕರಿಸಬಹುದಿತ್ತು. ಆದಕ್ಕೆಂದೇ ಅದರ ಸೇಡು ತೀರಿಸಿಕೊಳ್ಳುವ ಬಯಕೆ ನಮಗೆ.

ಅಜಂತಾರ : ನಿಮ್ಮ ಸಲಹೆ ಏನು?

ಮ.ಸರದಾರ : ಈಗ ನಿವು ಬಿದನೂರನ್ನು ಮುತ್ತುವುದರಿಂದ ಪ್ರಯೋಜನವಿಲ್ಲ.....

ಅಜಂತಾರ : ಕ್ಯೋಂ.... ಕ್ಯೋಂ....

ಮ.ಸರದಾರ : ರಾಣಿಯವರು ಮತ್ತು ಅವರ ಪರಿವಾರ ಅಲ್ಲಿದ್ದರಲ್ಲವೆ? ಅವರೆಲ್ಲಾ ಅಲ್ಲಿಂದ ಪಾರಾಗಿ ಭುವನಗಿರಿ ಕೋಟೆಯಲ್ಲಿ ಅಡಗಿಕೊಂಡಿದ್ದಾರೆ....

ಅಜಂತಾರ : ಕ್ಯಾ... ಕ್ಯಾ...

ಮ.ಸರದಾರ : ಸಚ್....

ಅಜಂತಾರ : ಹಾಗಾದರೆ ಈಗ ನಾವು ಏನು ಮಾಡಬೇಕೆನ್ನುವಿರಿ ?

ಮ.ಸರದಾರ : ರಾಜಾರಾಮರು ಇಲ್ಲ ಅಂತಾದ ಮೇಲೆ ನೀವು ಹಿಂದಕ್ಕೆ ಹೋಗುತ್ತಿರಾ ?

ಅಜಂತಾರ : ನಹಿ...ಇಕ್ಕೇರಿಯನ್ನು ಗೆದ್ದೇ ಹೋಗುವುದು. ರಾಜಾರಾಮರಿಗೆ ಬದಲಾಗಿ ರಾಣಿಯ ಸೆರೆ...

ಮ.ಸರದಾರ : ನಮ್ಮ ಇಬ್ಬರ ಉದ್ದೇಶವೂ ಇದೆ. ನಾವು ನಿಮಗೆ ನೀಡುವ ಸಲಹೆಯೆಂದರೆ, ನೀವು ಬಿದನೂರನ್ನು ಮುತ್ತುವುದರಿಂದ ಪ್ರಯೋಜವಿಲ್ಲ. ನಿಮ್ಮ ಗುರಿಯನ್ನು ಬದಗಿರಿಸಿ ಭುವನಗಿರಿ ದುರ್ಗಕ್ಕೆ ಮುತ್ತಿಗೆ ಹಾಕಿರಿ. ಅಲ್ಲ ಚನ್ನಮ್ಮ ಮತ್ತವರ ಪರಿವಾರವನ್ನು ಸೆರೆ ಹಿಡಿಯಬಹುದು.

ಅಜಂತಾರ : ಹಾಂ..ಠೀಕ..ಠೀಕ್..ಹೈ....

ಮ.ಸರದಾರ : ನೋಡಿ ನಿಮಗೆ ಹೇಳುತ್ತೇವೆ. ನೀವು ಬಿದನೂರನ್ನು ಬಿಟ್ಟು ಭುವನಗಿರಿಯನ್ನು ಮುತ್ತಲು ಬಯಸಿದರೆ ಹತ್ತಿರದ ಮಾರ್ಗವೊಂದಿದೆ. ಅದು ಆನಂದಪುರ, ಹುಂಬುಚದ ಮಾರ್ಗವಾಗಿ

ಭುವನಗಿರಿ ಸೇರುವುದು. ಆ ಮಾರ್ಗವಾಗಿ ಹೋಗಿ ಶೀಘ್ರ ಭುವನಗಿರಿಯನ್ನು ಮುತ್ತಿರಿ. ಅದಿಲ್ಲವಾದರೆ ಹಕ್ಕಿಗಳು ಹಾರಿಹೋದಾವು. ಗುರಿ ಸಾಧಿಸಿದರೆ ಇಬ್ಬರ ಇಚ್ಛೆಯು ನೆರವೇರಿದಂತಾಗುವುದು.

ಅಜಂತಾರ : ನೋಡಿ. ನಾನು ನಿಮ್ಮನ್ನು ನಂಬುತ್ತೇನೆ. ಆದರೆ ನಮ್ಮ ಕಾರ್ಯಸಾಧನೆಯಾಗುವವರೆಗೆ ನೀವು ನಮ್ಮ ಗೌರವಾನ್ವಿತ ಅತಿಥಿಗಳಾಗಿ ನಮ್ಮಲ್ಲೇ ಇರಬೇಕು ತಪ್ಪಿಸಿಕೊಂಡು ಹೋಗುವಂತಿಲ್ಲ..

ಮ. ಸರದಾರ : ಬಡಾ ಮೆಹರ್‌ಬಾನ್. ಆಯಿತು...(ನಮಸ್ಕರಿಸುವರು)

--ತೆರೆ--

ಪ್ರವೇಶ 28

ಪ್ರಧಾನಿ : ನನ್ನ ಹಂಚಿಕೆ ಸಾಕಾರವಾಯಿತು. ಮೊಘಲರ ಸೈನ್ಯ ಭುವನಗಿರಿಯೆಡೆಗೆ ಮುಖ ಮಾಡಿ ಸಾಗುತ್ತಿದೆಯೆಂತೆ.

ಕಾ.ತಿಮ್ಮಣ್ಣ : ಭಲೆ ಹಂಚಿಕೆ ಹಾಕಿದಿರಿ.

ಪ್ರಧಾನಿ : ಕೃಷ್ಣಯ್ಯವಯನರೆ, ನಿಮ್ಮ ಸಿದ್ಧತಾ ಕಾರ್ಯ ಹೇಗೆ ಸಾಗಿದೆ?

ಸು.ಕೃಷ್ಣಯ್ಯ : ಲಗ್ಗೆಯನ್ನು ತಡೆಯಲು ಅಗತ್ಯ ಕ್ರಮಗಳನ್ನೆಲ್ಲ ತೆಗೆದುಕೊಳ್ಳಲಾಗಿದೆ. ಕೋಟೆಯ ಗೋಡೆಯನ್ನೇರಿ ಬರುವವರನ್ನು ನಿರೋಧಿಸಲು ಕವೆಗಳು, ತೊಲೆಗಳು, ಎತ್ತುಗಲ್ಲು, ಕವಣೆಗಲ್ಲು, ಕರಿಮದ್ದಿನ ಪೊಟ್ಟಣ, ಉಪ್ಪಿನ ತತ್ತಿಗಳು ಇವನ್ನೆಲ್ಲಾ ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಲಾಗಿದೆ ಕೋಟೆಯ ಮಹಾದ್ವಾರದಲ್ಲಿ ಉಕ್ಕಿನ ದಸಿಗಳನ್ನು ನೆಡಿಸಲಾಗಿದೆ. ಅಂಬುಗಿಂಡಿಗಳಲ್ಲಿ ಕೈಗೋವಿಗನ್ನಾನಿಸಲಾಗಿದೆ. ಕೊತ್ತಳಗಳ ಮೇಲೆ ತೋಪುಗಳನ್ನು ಸಜ್ಜುಗೊಳಿಸಿ, ಮದ್ದುಗುಂಡುಗಳನ್ನೊದಗಿಸಿ ಕೊಡಲಾಗಿದೆ. ಕಾದಂಬಲಿಯ ಸಿದ್ಧತೆ ನಡೆದಿದೆ. ಕೋಟೆಯ ಸುತ್ತುವರಿ ಅಗಳುವಿನಲ್ಲಿ ನೀರು ತುಬಿಸಲಾಗಿದೆ. ಅಗಳು, ಆಳ್ವೇರಿ, ಹುಲಿಮೊಗ ಮೊದಲಾದೆಡೆಗಳಲ್ಲಿ ಯುದ್ಧ ಸಿದ್ಧತೆಯಿಂದ ಭಟರನ್ನು ನೆಲೆಗೊಳಿಸಲಾಗಿದೆ.

ಪ್ರಧಾನಿ : ವೈರಿಗಳು ಚಲನವಲನವರಿಯಲು ಯಾವ ಸಿದ್ಧತೆಯಾಗಿದೆ ತಿಮ್ಮಣ್ಣ

ಕಾ.ತಿಮ್ಮಣ್ಣ : ವೈರಿಗಳು ವ್ಯೂಹ, ಸಿದ್ಧತೆಗಳನ್ನರಿತುಕೊಳ್ಳಲು ತಳವಾರಿಕೆಯ ಕಾವಲನ್ನು, ಗೂಢಚಾರರನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಿಸಲಾಗಿದೆ. ಇನ್ನು ಏನೇನು ಸಿದ್ಧತೆಗಳು ಆಗಬೇಕೆಂಬುದನ್ನು ತಾವೇ ಬಂದು ಖುದ್ದು ಪರಾಂಬರಿಸಬೇಕು.

ಪ್ರಧಾನಿ : ನಡೆಯಿರಿ, ಸಿದ್ಧತೆಯನ್ನೊಮ್ಮೆ ನೋಡಿಬರೋಣ. (ನಿಷ್ಕ್ರಮಣ)

--ತೆರೆ--

ಪ್ರವೇಶ 29

(ಕೋಟೆ ಒಳಭಾಗದ ಬಯಲು. ಚನ್ನಮ್ಮರಾಣಿ ಸೊಂಟದಲ್ಲಿರುವ ಖಡ್ಗಸಹಿತವಾದ ಒರೆಯ ಮೇಲೆ ಕೈಯಿಟ್ಟು ಯುದ್ಧಸನ್ನದ್ಧರಾಗಿ ನೆರೆದಿರುವ ಸೈನಿಕರನ್ನುದ್ದೇಶಿಸಿ ಮಾತನಾಡುವಳು)

ಚನ್ನಮ್ಮ : ವೀರಯೋಧರೆ, ಬಲ್ಲಾಳ ಬಂಟರೆ, ಇಕ್ಕೇರಿಯ ಗಂಡುಗಲಿಗಳೆ, ನಮ್ಮ ರಾಜ್ಯಕ್ಕೊದಗಿ ಬಂದಿರುವ ವಿಪತ್ತಿನ ಸನ್ನಿವೇಶದಲ್ಲಿ ನಾವಿಲ್ಲಿ ಸೇರಿದ್ದೇವೆ. ನಾಡಿಗೊದಗಿ ಬಂದಿರುವ ದುರಾಕ್ರಮಣವನ್ನು ನಿವಾರಿಸುವ ಮಹೋದ್ದೇಶ. ಹಾಗೆಯೇ ನಾಡಿನ ಭವಿಷ್ಯವನ್ನು ನಿರ್ಧರಿಸುವ ಮಹತ್ತರ ಹೊಣೆ ನಮ್ಮ ಮೇಲಿದೆ. ದಿಲ್ಲಿಯ ಸುಲ್ತಾನರ ಸವಿಸ್ತಾರ ಸೈನ್ಯ ಸಾಗರದೆದುರು ಹೋರಾಡಿ ನಮ್ಮ ಶೌರ್ಯ ಸಾಹಸಾದಿಗಳನ್ನು ಮೆರೆದು ರಾಜ್ಯದ ಕೀರ್ತಿ ಘನತೆ, ಗೌರವಗಳನ್ನು ಎತ್ತಿಹಿಡಿಯುವ ಸುಸಮಯ ಒದಗಿ ಬಂದಿದೆ. ರಾಜ್ಯದಲ್ಲಿನ ಆಂತರಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳುವುದರಲ್ಲೇ ಈವರೆಗಿನ ಸಮಯ ಕಳೆಯಿತು. ಶಾಂತಿ

ನೆಲೆಂದಗೊಂಡಾಗ ಒದಗಿ ಬಂದಿದೆ ಮತ್ತೊಂದು ಗಂಡಾಂತರ. ಅವಿಶ್ರಾಂತ ಹೋರಾಟ ನಮ್ಮದಾಗಿಬಿಟ್ಟಿದೆ. ಸೋಲು ಗೆಲುವುಗಳು ನಮ್ಮಾಧೀನವಲ್ಲ. ನಮ್ಮ ನಾಡರಕ್ಷಣೆಗಾಗಿ ಸ್ವಾತಂತ್ರ್ಯದ ಉಳಿವಿಗಾಗಿ ನಾವೀಹ ಕಾದಾಡಬೇಕಾಗಿದೆ. ದೇಶಪ್ರೇಮಿಗಳೇ ನಮ್ಮ ನಾಡಿನ ಕೀರ್ತಿಗೆ ಗಂಡುಮೆಟ್ಟಿನ ಭೂಮಿನೇನಿಸಿದ ಇಕ್ಕೇರಿಯ ಗಂಡುಗಲಿಗಳೇ ಸಿಂಹದಂತೆ ಸೆಣಸಿರಿ. ಶತ್ರುಗಳ ರುಂಡ ಚೆಂಡಾಡಿರಿ. ಧರ್ಮರಕ್ಷಣೆ ನಿಮ್ಮ-ನಮ್ಮ ಗುರಿ. ಅಳಿದರೆ-ಉಳಿದರೆ ಕೀರ್ತಿ ನಮ್ಮದಾಗುತ್ತವಂತೆ ಸೆಣಸಬೇಕು. ದಿಲ್ಲಿಯ ಸಾಮ್ರಾಟ ಔರಂಗಜೇಬ ಬೆಚ್ಚಿಜ ಬೀಳಬೇಕು. ನಾಡಸೇವೆಗಾಗಿ ತನು ಮೀಸಲಿರಲಿ. ನಾಡಭಕ್ತಿಯಲ್ಲಿ ಮನ ಸ್ಥಿರವಾಗಿರಲಿ. ಧರ್ಮರಕ್ಷಣೆ ಅರ್ಥವಾಗಿರಲಿ. ನಾಡಗುಡಿ ಹಾರಲಿ-ಜೈ ರಾಮೇಶ್ವರ, ಜೈ ಅಘೋರ.

ಸರದಾರ : (ಪ್ರವೇಶಿಸಿ) ಮಹಾರಾಣಿಯವರಿಗೆ ಜಯವಾಗಲಿ (ನಮಸ್ಕರಿಸುವನು)

ಪ್ರಧಾನಿ : ಸರದಾರ, ಏನು ಸುದ್ದಿಯನ್ನು ತಂದಿರುವೆ?

ಸರದಾರ : ದಿಲ್ಲಿಯವರ ಯುದ್ಧವ್ಯೂಹದಲ್ಲಿ ಹಠಾತ್ ಬದಲಾವಣೆಯೊಂದು ಕಂಡುಬಂದಿದೆ. (ಪ್ರಧಾನಿ, ತಿಮ್ಮಣ್ಣ ಮುಗುಳುನಗು ವಿಮಿಮಯ ಮಾಡಿಕೊಳ್ಳುವರು)

ಚನ್ನಮ್ಮ : ಏನು ಹೇಳಬೇಕೆಂದಿರವೆ ಹೇಳು

ಸರದಾರ : ದಿಲ್ಲಿಯ ಸುಲ್ತಾನರ ಸೈನ್ಯ ಬಿದನೂರನ್ನು ಮುತ್ತುವ ತನ್ನ ಯೋಜನೆಯನ್ನು ಕೈಬಿಟ್ಟದೆ. ಅದು ಈಗ ಆನಂದಪುರ ಮಾರ್ಗವಾಗಿ ಸಾಗಿ ಭುವನಗಿರಿ ಕೋಟೆಗೆ ಲಗ್ಗೆ ಇಡುವ ನಿರ್ಧಾರ ಕೈಗೊಂಡಿದೆ. ಸೈನ್ಯ ಅತ್ತಕಡೆ ಸಾಗುತ್ತಿದೆ. ಅರಿಕೆ. (ನಮಸ್ಕರಿಸುವನು)

ಪ್ರಧಾನಿ : ಸರಿ ನೀನು ನಡಿ. ಮತ್ತೇನಾದರೂ ಮತ್ತೇನಾದರೂ ವಿಶೇಷವಿದ್ದರೆ ಬಂದು ವರದಿ ಮಾಡು (ಸರದಾರ ನಮಸ್ಕರಿಸಿ ಹೋಗುವನು) ಆನಂದಪುರ ಮಾರ್ಗವಾಗಿ ಸಾಗಿ ಭುವನಗಿರಿ ಕೋಟೆಗೆ ಲಗ್ಗೆ ಇಡುವ ನಿರ್ಧಾರ ಕೈಗೊಂಡಿದೆ. ಸೈನ್ಯ ಅತ್ತಕಡೆ ಸಾಗುತ್ತಿದೆ. ಅರಿಕೆ (ನಮಸ್ಕರಿಸುವನು)

ಚನ್ನಮ್ಮ : ಈ ಬದಲಾವಣೆಗೆ ಕಾರಣವೇನಿರಬಹುದು ಪ್ರಧಾನಿಗಳೇ?

ಕಾ.ತಿಮ್ಮಣ್ಣ : ಅದು ಪ್ರಧಾನಿಗಳ ಯುದ್ಧತಂತ್ರ. ಹೂಡಿದ ತಂತ್ರ ಸಿದ್ಧಿಸಿದಂತಿಯಿತು.

ಚನ್ನಮ್ಮ : ತಂತ್ರ! ಏನದು! ಭುವನಗಿರಿಯಲ್ಲಿ ಸಾಕಷ್ಟು ಸೈನ್ಯವೂ ಇಲ್ಲ. ಈಗೇನು ಮಾಡುವುದು ?

ಪ್ರಧಾನಿ : ಗಾಬರಿಯಾಗಬೇಡಿ. ಕೇಳಿ ತಾಯಿ, ನನ್ನ ವ್ಯೂಹ ರಚನೆಯನ್ನು ಹೇಳಿ ಬಿಡುತ್ತೇನೆ. ತಮಗೆ ಒಪ್ಪಗೆಯಾದರೆ ಆಚರಣೆ ಮಹಾರಾಣಿ ಈಗ ನೀವು ಒಂದು ತುಕಡಿ ಸೈನ್ಯದೊಂದಿಗೆ ತ್ವರಿತಗತಿಗಲ್ಲಿ ಭುವನಗಿರಿಗೆ ಹೋಗಬೇಕು. ಆನಂದಪುರ. ಹುಂಬುಚ ಮಾರ್ಗವಾಗಿ ಭುವನಗಿರಿಯನ್ನು ಸೇರುವ ಮುಖ್ಯಭಾಗವನ್ನು ಅಡ್ಡಗಟ್ಟಿ ನೀವು ನಿಲ್ಲಬೇಕು. ಆ ಕಡೆಯಲ್ಲಿ ನಿಮಗೆ ಕೋಳಿವಾಡದ ಮೊಮ್ಮಯ್ಯನವರು ಸಹಾಯಕರಾಗಿರುವರು. ಸುಲ್ತಾನನ ಸೈನ್ಯ ಸಂಪೂರ್ಣವಾಗಿ ದುರ್ಗಮ ಗಿರಿಮಾರ್ಗವನ್ನು ಪ್ರವೇಶಿಸಿದ ನಂತರ ಹಿಂಬದಿಯಲ್ಲಿ ಅವರು ಹಿಂತಿರುಗಲಕಾಶವಾಗದಂತೆ ಪ್ರವೇಶದ್ವಾರವರನ್ನು ಬಂಧಿಸಿ ಸೈನ್ಯಸಮೇತನಾಗಿ ನಾನು ನಿಂತಿರುತ್ತೇನೆ. ಒಂದು ದೊಡ್ಡಭಾಗ ಸೈನ್ಯದೊಡನೆ ಭುವನಗಿರಿಯ ಕಾಡುದಾರಿಯುದ್ದಕ್ಕೂ ಅರಣ್ಯದಲ್ಲಿ ಮರಗಳ ಮರೆಯಲ್ಲಿ ಅಡಗಿಕೊಂಡಿದ್ದು ಹಠಾತ್ತನೆ ತುರುಕರ ಸೈನ್ಯವನ್ನು ಆಕ್ರಮಿಸಲು ಕಾಸರಗೋಡು ತಿಮ್ಮಣ್ಣನವರು ಸಿದ್ಧರಿದ್ದಾರೆ. ಸುಬ್ಬನೀಸ ಕೃಷ್ಣಯ್ಯನವರು ರಾಜಧಾನಿ ಬಿದನೂರಿನ ರಕ್ಷಣಾ ಹೊಣೆ ಹೊತ್ತಿದ್ದಾರೆ. ಈ ಯೋಜನೆ ತಮಗೆ ಒಪ್ಪಿತವೆಂದು ಭಾವಿಸಿದ್ದೇನೆ.

ಚೆನ್ನಮ್ಮ : ಮಹಾಸೇನಾನಿಗಳ ಆಜ್ಞೆಯನ್ನು ಪಾಲಿಸುವುದು ನಮ್ಮ ಕರ್ತವ್ಯ. ನಿಮ್ಮಿಷ್ಟದಂತೆಯೇ ಆಗಲಿ. (ಹಿರಿದ ಕತ್ತಿ ಮೇಲೆತ್ತಿ) ಜೈ ಅಘೋರ. (ಜಯಘೋಷ ಸಮೂಹ ಧ್ವನಿಯಲ್ಲಿ ಕೇಳಿ ಬರುವುದು)

--ತೆರೆ--

ಪ್ರವೇಶ 30

(ಹಾಡುವವರು ಪ್ರವೇಶಿಸುವರು)

ಒಬ್ಬ : ನೋಡಿದೇನಪ್ಪ, ಹೆಂಗಿದ್ದ ಸಂಗ್ತಿ ಹೆಂಗಾತು?

ಇನ್ನೊಬ್ಬ : ಸರಿಯಪ್ಪ "ದೈವದೊಲುವೆ ಇರಲಾ ಕಾಲಾನುಕಾಲಕ್ಕೆ" ಬಂಡೆದ್ದವರೆಲ್ಲ ಮಣ್ಣುಮುಕ್ಕಿ ಹೋದರು. ಮಹಿಷೂರವರ ಶೂರತನ ಅಳಿತು. ಔರಂಗಜೇಬನ ಬರಾತ್ ಮುರೀತು... ಜನ ಮುಂದಿನ ಕತಿ ಕೇಳಕ ಕುಂತಾರ ಹೇಳಿಬಿಡನಲ...

ಇಬ್ಬರೂ:

ದಿಲ್ಲಿಯ ಸುಲ್ತಾನ ಔರಂಗಜೇಬನ ಮಗ
ಅಜಮತಾರ ಬಂದಾನೋ ಇಕ್ಕೇರಿಗೆ
ರಾಜಾರಾಮರಾಯನ ಹಿಡಿಯಲಿಕೆ॥
ಪ್ರಧಾನಿ ನರಸಪ್ಪಯ್ಯಗೆ ಸೇನೆಯ ಪಾರುಪತ್ಯ
ಇಕ್ಕೇರಿ ಸೇನೆಯ ಅಧಿಪತಿಯು
ಯುದ್ಧವ ಗೆಲ್ಲಲು ದಳಪತಿಯು॥

ಹೂಡ್ಯಾನೋ ತಂತ್ರ, ಹಾಕ್ಯಾನು ತಿರುಮಂತ್ರ
ದಿಲ್ಲಿಯ ಸೇನೆಯ ಓಡಿಸಲು
ಸಮರದಿ ಅವರನು ಕಾಡಿಸಲು
ಬಿದನೂರು ಗುರಿ ಬಿಟ್ಟು ಹೊರಟಿತು ಮೊಘಲ್ ಸೇನೆ
ಭುವನಗಿರಿ ದುರ್ಗವ ಮುತ್ತಲಿಕೆ
ಚೆನ್ನಮ್ಮ ರಾಣಿಯ ಸೆರೆಹಿಡಿಯಲಿಕೆ॥
ಅನಂತಪುರ, ಹುಂಬುಚ ದಾಟಿ,
ಕಾಡು, ಹಳ್ಳ ಕೊಳ್ಳ ದಾರಿ
ಸೇನೆ ಸೇರಿತು ಕಾನನವ ॥
ಕಟ್ಟಿನಿಂತರೊ ದಾರಿ ಇಬ್ಬದಿಗೆ
ಕಾಡಲಿ ಅವಿತಿದ್ದ ಇಕ್ಕೇರಿ ಭಟರು
ಬಿದ್ದಾರೊ ಖಾನನ ದಳದ ಮೇಲೆ ॥
ದಿಕ್ಕು ತೋರದಾಯ್ತು
ಕಕ್ಕಾವಿಕ್ಕಿಯಾಯ್ತು ದಿಲ್ಲಿ ಪಡೆ
ಬೆಚ್ಚಿಬಿದ್ದ ನೇತಾ ಅಜಮತಾರ॥
ದಟ್ಟಕಾಡಿನ ನಡುವೆ ಸಿಕ್ಕು ವೈರಿ ಪಡೆ
ನುಚ್ಚುನೂರಾಯಿತು ಅರಿಸೇನೆ
ಬದುಕಿರೆ ನೂರು ವರುಷದ ಬದುಕು ಎಂದು
ಸೇನೆಯ ನಾಯಕ ಮರಿ ಸುಲ್ತಾನ॥
ವಿಜಯಲಕ್ಷ್ಮಿ ಕೈಹಿಡಿದು ಜೈಕಾರ ಹಾಕುತ
ಬಂದರು ಚೆನ್ನಮ್ಮ ಬಿದನೂರಿಗೆ
ಪರಿವಾರದೊಂದಿಗೆ ತವರೂರಿಗೆ॥

ಉಳ್ಳೂರು ಸುಬ್ಬರಾವ್ ಶಿವಮೊಗ್ಗ ಜಿಲ್ಲೆ ಸಾಗರ ತಾ.ನ ಉಳ್ಳೂರಿನವರು. ವಿದ್ಯಾರ್ಥಿ ದಿಸೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು. ಕಾಗೋಡು ಸತ್ಯಾಗ್ರಹದಲ್ಲಿ, ಸಮಾಜವಾದಿ ಚಳವಳಿಯಲ್ಲಿ ಭಾಗವಹಿಸಿದವರು.

ಉತ್ತಮ ರಂಗ ಕಲಾವಿದರು, ತಮ್ಮ ಸಂಗಡಿಗರೊಂದಿಗೆ ಅನೇಕ ನಾಟಕಗಳನ್ನು ನಿರ್ದೇಶಿಸಿದವರು, ನಾಟಕಸ್ಪರ್ಧೆಗಳನ್ನುನಿರ್ವಹಿಸಿದವರು.

ಇಕ್ಕೇರಿಯ ಜ್ವಲಂತ ಐತಿಹಾಸಿಕ ಸಂದರ್ಭವನ್ನು ರಂಗರೂಪಕ್ಕೆ ಅಳವಡಿಸಿರುವ ಈ ಪ್ರಯತ್ನ ಕುತೂಹಲಕರ, ರಂಗಾಸಕ್ತರ ದೃಷ್ಟಿಯಿಂದ ರೋಮಾಂಚಕ.

೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶಿವಮೊಗ್ಗ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.